

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 18 ಸೋಮವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 122 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4



ಮತಗಳ್ಳತನ ಆರೋಪಕ್ಕೆ ಪ್ರಮಾಣಪತ್ರ ಸಲ್ಲಿಕೆಗೆ

ರಾಹುಲ್ ಗಾಂಧಿಗೆ ಚುನಾವಣಾ ಆಯೋಗ ಏಳು ದಿನ ಗಡುವು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸುದ್ದಿಗೋಷ್ಠಿ

- ಮತಗಳ್ಳತನ ಪದ ಬಳಸಿ ಸಾರ್ವಜನಿಕರ ದಿಕ್ಕು ತಪ್ಪಿಸುವುದು ಸಂವಿಧಾನಕ್ಕೆ ಮಾಡುವ ಅವಮಾನ
- 'ಡಬಲ್ ವೋಟಿಂಗ್' ಮತ್ತು 'ವೋಟ್ ಚೋರಿ' ಎಂಬ ಆಧಾರರಹಿತ ಆರೋಪಗಳಿಗೆ ಚುನಾವಣಾ ಆಯೋಗ, ಮತದಾರರು ಹೆದರುವುದಿಲ್ಲ.



ನವದೆಹಲಿ, ಆ.17– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮತದಾರರ ಪಟ್ಟಿಯ ಅಕ್ರಮಗಳ ಕುರಿತ ತಮ್ಮ ಆರೋಪಕ್ಕೆ ಸಂಬಂಧಿಸಿದಂತೆ ಏಳು ದಿನಗಳ ಒಳಗಾಗಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಇಲ್ಲದಿದ್ದಲ್ಲಿ 'ಮತ ಕಳವು' ಆರೋಪವನ್ನು ಆಧಾರರಹಿತ, ಅಸಿಂಧು ಎಂದು ಪರಿಗಣಿಸಲಾಗುವುದು ಎಂದು ಚುನಾವಣಾ ಆಯೋಗ ಹೇಳಿದೆ.



ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ರಾಜಕೀಯ ಉದ್ದೇಶಗಳಿಗಾಗಿ ಮತದಾರರನ್ನು ಗುರಿಯಾಗಿಸಲು ಚುನಾವಣಾ ಆಯೋಗವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಆಯೋಗವು ಮತದಾರರೊಂದಿಗೆ ನಿಲ್ಲಲಿದೆ ಎಂದು ಭಾನುವಾರ ಹೇಳಿದರು.

ಯಾವುದೇ ಒಂದು ಕ್ಷೇತ್ರದ ಮತದಾರನಲ್ಲದ ವ್ಯಕ್ತಿ ಲಿಖಿತ ಪ್ರಮಾಣಪತ್ರದ ಮೂಲಕ ಮಾತ್ರ ಆಯೋಗಕ್ಕೆ ದೂರು ಸಲ್ಲಿಸಬಹುದು. ರಾಹುಲ್ ಗಾಂಧಿ ಅವರು ಲಿಖಿತ ಪ್ರಮಾಣ ಪತ್ರ ಸಲ್ಲಿಸದೆಯೇ 1.5 ಲಕ್ಷ ಮತದಾರರಿಗೆ ಆಯೋಗ ನೋಟಿಸ್ ಕಳುಹಿಸಬೇಕೇ ಎಂದು ಜ್ಞಾನೇಶ್ ಕುಮಾರ್ ಪ್ರಶ್ನಿಸಿದರು.

ಮತದಾರರ ಪಟ್ಟಿಗಳಲ್ಲಿನ ದೋಷಗಳನ್ನು ಕಾನೂನಿನ ಪ್ರಕಾರ ಸಕಾಲದಲ್ಲಿ ಹಂಚಿಕೊಳ್ಳದಿದ್ದರೆ, ಮತದಾರರು ತಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಿದ 45 ದಿನಗಳಲ್ಲಿ ಹೈಕೋರ್ಟ್‌ನಲ್ಲಿ ಚುನಾವಣಾ ಅರ್ಜಿಯನ್ನು ಸಲ್ಲಿಸದಿದ್ದರೆ ಮತ್ತು ನಂತರ ಮತ ಕಳ್ಳತನದಂತಹ ತಪ್ಪು ಪದಗಳನ್ನು ಬಳಸಿಕೊಂಡು ಸಾರ್ವಜನಿಕರನ್ನು ದಾರಿ ತಪ್ಪಿಸಲು ವಿಫಲ ಪ್ರಯತ್ನ ಮಾಡಿದರೆ, ಇದು ಭಾರತದ ಸಂವಿಧಾನಕ್ಕೆ ಮಾಡಿದ ಅವಮಾನ ಎಂದು ಹೇಳಿದರು.

ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸದೇ 'ಮತ ಚೋರಿ' ಎಂದು ಆರೋಪ ಮಾಡಿದರೆ ಅದು ಭಾರತೀಯ ಸಂವಿಧಾನಕ್ಕೆ ಮಾಡುವ ಅವಮಾನ. 'ಡಬಲ್ ವೋಟಿಂಗ್' ಮತ್ತು 'ವೋಟ್ ಚೋರಿ' ಎಂಬ ಆಧಾರರಹಿತ ಆರೋಪಗಳಿಗೆ ಚುನಾವಣಾ ಆಯೋಗ ಅಥವಾ ಮತದಾರರು ಹೆದರುವುದಿಲ್ಲ. ಕೆಲವರು ಮಾಡುವ ರಾಜಕೀಯದ ಬಗ್ಗೆ ತಲೆಕೆಡಿಸಿಕೊಳ್ಳದೆ ಚುನಾವಣಾ ಆಯೋಗ ಎಲ್ಲಾ ವರ್ಗದ ಮತದಾರರೊಂದಿಗೆ ದೃಢವಾಗಿ ನಿಲ್ಲುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಚುನಾವಣಾ ಆಯೋಗದ ಬಾಗಿಲುಗಳು ಎಲ್ಲರಿಗೂ ತೆರೆದಿರುತ್ತವೆ. ಮತ್ತು ಬೂತ್ ಮಟ್ಟದ ಅಧಿಕಾರಿಗಳು, ಏಜೆಂಟರು ಪಾರದರ್ಶಕ ರೀತಿಯಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಚುನಾವಣಾ ಆಯೋಗ ರಾಜಕೀಯ ಪಕ್ಷಗಳ ನಡುವೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳು ಎರಡೂ ಚುನಾವಣಾ ಆಯೋಗದ ಮುಂದೆ ಸಮಾನ ಎಂದು ತಿಳಿಸಿದರು.

'ಡಬಲ್ ವೋಟಿಂಗ್' ಮತ್ತು 'ಮತಗಳ್ಳತನ' ಆರೋಪಗಳು ಆಧಾರರಹಿತ. ಸಂಬಂಧಪಟ್ಟ ಎಲ್ಲರೂ ವಿಶೇಷ ತೀವ್ರ ಪರಿಷ್ಕರಣೆಯನ್ನು ಪಾರದರ್ಶಕ ರೀತಿಯಲ್ಲಿ ಯಶಸ್ವಿಗೊಳಿಸಲು ಕೆಲಸ ಮಾಡುತ್ತಿದ್ದಾರೆ. ▶ 6ನೇ ಪುಟಕ್ಕೆ

ತಾಯ್ನಾಡಿಗೆ ಮರಳಿದ ಗಗನಯಾತ್ರಿ ಶುಭಾಂಶು ಶುಕ್ಲಾ



ಕೇಂದ್ರ ಸಚಿವ ಜಿತೇಂದ್ರ ಸಿಂಗ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಶುಭಾಂಶು ಶುಕ್ಲಾ ಅವರನ್ನು ಬರಮಾಡಿಕೊಳ್ಳುತ್ತಿರುವುದು.

ನವದೆಹಲಿ, ಆ.17– ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಐತಿಹಾಸಿಕ ಭೇಟಿ ನೀಡಿದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಭಾನುವಾರ ತಾಯ್ನಾಡಿಗೆ ವಾಪಸ್ಸಾಗಿದ್ದಾರೆ.

ಅಮೆರಿಕದಿಂದ ಮಧ್ಯರಾತ್ರಿ 1.30ರ ವೇಳೆಗೆ ದೆಹಲಿಗೆ ಆಗಮಿಸಿದ ಶುಭಾಂಶು ಶುಕ್ಲಾ ಅವರಿಗೆ ಇಂದಿರಾಗಾಂಧಿ ಏರ್‌ಪೋರ್ಟ್‌ನಲ್ಲಿ ಅದ್ಧೂರಿ ಸ್ವಾಗತ ನೀಡಲಾಯಿತು. ಕೇಂದ್ರ ಸಚಿವ ಜಿತೇಂದ್ರ ಸಿಂಗ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಶುಭಾಂಶು ಶುಕ್ಲಾ ಅವರನ್ನು ಬರಮಾಡಿಕೊಂಡರು. ಶುಕ್ಲಾ ಅವರು ಸೋಮವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲಿದ್ದಾರೆ. ಬಳಿಕ, ತಮ್ಮ ತವರು ಲಖನೌಗೆ ಪ್ರಯಾಣಿಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಆಕ್ಸಿಯಂ–4 ಮಿಷನ್‌ಗಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಐತಿಹಾಸಿಕ ಭೇಟಿ ನೀಡಿದ್ದ ಶುಕ್ಲಾ, 2027ರಲ್ಲಿ ಇಸ್ರೋ ತನ್ನ ಮೊದಲ ಮಾನವ ಬಾಹ್ಯಾಕಾಶ ಹಾರಾಟ ಎದುರು ನೋಡುತ್ತಿರುವುದರಿಂದ ತಮ್ಮ ಅನುಭವಗಳನ್ನು ಸ್ನೇಹಿತರು ಹಾಗೂ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಲಿದ್ದಾರೆ.

ಆಗಸ್ಟ್ 22–23 ರಂದು ನಡೆಯಲಿರುವ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಭಾಗವಹಿಸಲು ಅವರು ದೆಹಲಿಗೆ ಹಿಂದಿರುಗುತ್ತಾರೆ ▶ 6ನೇ ಪುಟಕ್ಕೆ

ಈ ಬಾರಿ ದಸರಾ ಏರ್ ಶೋಗೆ ಕೇಂದ್ರ ಮೌಖಿಕ ಅನುಮತಿ






ಜಿ.ಲಕ್ಷ್ಮಿಕಾಂತ ರೆಡ್ಡಿ

ಮೈಸೂರು, ಆ.17 (ಜಿಎ)– ದಸರಾ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ದಸರಾ ವಾಯು ಪ್ರದರ್ಶನ (ಏರ್ ಶೋ) ಈ ಬಾರಿ ನಡೆಯುವುದು ಖಚಿತವಾಗಿದ್ದು, ಕೇಂದ್ರ ಸರ್ಕಾರ ಮೌಖಿಕವಾಗಿ ಅನುಮತಿ ನೀಡಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ಭಾರತೀಯ ವಾಯುಪಡೆಯ (ಐಎಎಫ್) ಜೆಟ್‌ಗಳು ಮೈಸೂರಿನಲ್ಲಿ ನಡೆಸುವ ಏರ್ ಶೋ ವೀಕ್ಷಣೆಗೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಕಳೆದ ವರ್ಷ ಕಾರಣಾಂತರದಿಂದ ಏರ್ ಶೋ ನಡೆಯಲಿಲ್ಲ. ಈ ಬಾರಿ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿ ಕೇಂದ್ರ ರಕ್ಷಣಾ ಸಚಿವರನ್ನು ಭೇಟಿ ಮಾಡಿ ಏರ್ ಶೋ ನಡೆಸುವಂತೆ ಅನುಮತಿ ಕೋರಿದ್ದಾರೆ.

ಏರ್ ಶೋ ಈ ಹಿಂದೆ 2017, 2019 ಮತ್ತು 2023ರಲ್ಲಿ ನಡೆಸಲಾಗಿದ್ದು, ಪ್ರತಿ ಬಾರಿಯೂ ಭಾರಿ ಪ್ರಮಾಣದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುತ್ತಿತ್ತು. ಆಗಸದಲ್ಲಿ ರೋಮಾಂಚನಕಾರಿ ಸಾಹಸ ಪ್ರದರ್ಶನಕ್ಕೆ ಎಲ್ಲರೂ ಮನ ಸೋತಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕೋರಿಕೆಯಂತೆ ಕೇಂದ್ರ ಸರ್ಕಾರ ಏರ್ ಶೋಗೆ ಸಮ್ಮತಿಸಿದೆ. ▶ 6ನೇ ಪುಟಕ್ಕೆ

ಕನ್ನಡಪರ ಹೋರಾಟಗಾರ ಸ.ರ.ಸುದರ್ಶನ್ ಇನ್ನಿಲ್ಲ



ಮೈಸೂರು, ಆ.17(ಜಿಎ)–ಮೈಸೂರಿನ ವಿಜಯನಗರ ನಿವಾಸಿಯಾದ ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ್(73) ಭಾನುವಾರ ಬೆಳಗ್ಗೆ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಪುತ್ರಿ ಎಂಜಿನಿಯರ್ ಹಾಗೂ ರಂಗ ಕಲಾವಿದೆ ನುಡಿ ಸುದರ್ಶನ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. 80ರ ದಶಕದಲ್ಲಿ ಪ್ರಾರಂಭವಾದ ಗೋಕಾಕ್ ಚಳವಳಿಯಲ್ಲಿ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಆರಂಭದಿಂದಲೂ ಪಾಲ್ಗೊಂಡಿದ್ದರು. ಕನ್ನಡಕ್ಕೆ ಸಮಸ್ಯೆಯಾದಾಗ ಬಹುತೇಕ ▶ 6ನೇ ಪುಟಕ್ಕೆ

ರಾಜ್ಯದ 36 ಸಾವಿರ ದೇಗುಲಗಳಲ್ಲಿ ಇನ್ನು ಮುಂದೆ ಪ್ಲಾಸ್ಟಿಕ್ ಬಳಕೆ ನಿಷೇಧ

ಮುಜರಾಯಿ ಇಲಾಖೆ ಮಹತ್ವದ ಹೆಜ್ಜೆ

ಬೆಂಗಳೂರು, ಆ.17– ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ರಾಜ್ಯದ ಒಟ್ಟು 36 ಸಾವಿರ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳನ್ನು ಪ್ಲಾಸ್ಟಿಕ್ ಮುಕ್ತವನ್ನಾಗಿ ಮಾಡಲು ಅಭಿಯಾನವನ್ನು ಪ್ರಾರಂಭಿಸಲಾಗಿದೆ.



ರಾಜ್ಯದ ಎಲ್ಲ ದೇವಾಲಯ ಇನ್ನು ಮುಂದೆ ಪ್ರಸಾದ ವಿತರಣೆಗೆ ಅಥವಾ ಯಾವುದೇ ಉದ್ದೇಶಕ್ಕಾಗಿ ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವಂತಿಲ್ಲ. ಆ.15ರಿಂದಲೇ ಪ್ಲಾಸ್ಟಿಕ್ ನಿಷೇಧವನ್ನು ಜಾರಿಗೆ ತರಲಾಗಿದ್ದು, ಇಂದು (ಆ. 17) ಅಧಿಕೃತವಾಗಿ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಧಾರ್ಮಿಕ ದತ್ತಿ ಇಲಾಖೆಯ ನೇತೃತ್ವದಲ್ಲಿ, ಬಸವನಗುಡಿಯ ದೊಡ್ಡಗಣಪತಿ ದೇವಾಲಯದಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಸಕ ರವಿ ಸುಬ್ರಮಣ್ಯ ಅವರು ಉಪಸ್ಥಿತರಿದ್ದರು. ▶ 6ನೇ ಪುಟಕ್ಕೆ

ಧರ್ಮಸ್ಥಳ ಪ್ರಕರಣ

ಅನಾಮಿಕನ ಹಿಂದಿರುವ ವ್ಯಕ್ತಿಗಳಿಗೆ ನೋಟಿಸ್ ನೀಡಲು ಎಸ್‌ಐಟಿ ಸಿದ್ಧತೆ

ಬೆಂಗಳೂರು, ಆ.17– ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಾಮಿಕನ ಹಿಂದಿರುವ ವ್ಯಕ್ತಿಗಳಿಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನೋಟಿಸ್ ನೀಡಲು ಸಿದ್ಧತೆ ನಡೆಸಿದೆ.

ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವ ಹೂತಿಟ್ಟ ನಿಗೂಢ ಪ್ರಕರಣ ತನಿಖೆಗೆ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸಿತ್ತು. 15 ದಿನಗಳ ಕಾಲ ಭಾರಿ ಮಳೆಯ ನಡುವೆಯೂ 17 ಪಾಯಿಂಟ್‌ಗಳಲ್ಲಿ ಉತ್ಖನನ ನಡೆಸಿದರೂ ಅನಾಮಿಕ ಮಾಸ್ಕ್ ಮ್ಯಾನ್ ಹೇಳಿದ್ದ ಪಾಯಿಂಟ್ 6 ಬಿಟ್ಟು ಬೇರೆ ಕಡೆ ಹೂತಿದ್ದ ಮೂಳೆಗಳು ಸಿಕ್ಕಿಲ್ಲ.

ಮೂಳೆಗಳು ಸಿಗದ ಕಾರಣ ಉತ್ಖನನ ಕಾರ್ಯವನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಿದೆ. ಅನಾಮಿಕ ವ್ಯಕ್ತಿ ಇನ್ನೂ 13 ಪಾಯಿಂಟ್ ತೋರಿಸುತ್ತೇನೆ. ಅಲ್ಲೂ ಉತ್ಖನನ ಮಾಡಿ ಎಂದು ಒತ್ತಾಯಿಸಿದರೂ ಅಧಿಕಾರಿಗಳು ಆತನನ್ನೇ ಎಸ್‌ಐಟಿ ಕಚೇರಿಯಲ್ಲಿ ಕೂರಿಸಿ 4 ಗಂಟೆಗಳ ಕಾಲ ಗ್ರಿಲ್ ನಡೆಸಿದ್ದಾರೆ. ಇಷ್ಟು ಬುರುಡೆ ಕಥೆ ಹೇಳಿರುವ ಅನಾಮಿಕನ ಬಾಯಿ ಬಿಡಿಸುವ ಪ್ರಯತ್ನ ನಡೆಸಿದ್ದಾರೆ. ಆತ ನೀಡಿರುವ ದೂರು ಸುಳ್ಳು ಎಂಬ ನಿರ್ಧಾರಕ್ಕೆ ಬಂದ ಎಸ್‌ಐಟಿ ಅಧಿಕಾರಿಗಳು, ಆತನನ್ನೇ ವಶಕ್ಕೆ ಪಡೆದು ವಿಚಾರಣೆ ನಡೆಸಲು ಪ್ಲಾನ್ ಮಾಡಿದ್ದಾರೆ. ಆತನ ಹಿಂದೆ ಯಾರೋ ಇದ್ದು ಇದನ್ನೆಲ್ಲ ಮಾಡಿಸಿದ್ದಾರೆ ಎಂಬ ಅನುಮಾನ ಬಂದಿದ್ದು, ಹಲವು ವ್ಯಕ್ತಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಿದ್ದಾರೆ.

ಈ ನಡುವೆ ಅನಾಮಿಕ ವ್ಯಕ್ತಿ ಆರಂಭದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ತಲೆಬುರುಡೆಯ ತನಿಖೆಯನ್ನೂ ಅಧಿಕಾರಿಗಳು ಮುಂದುವರಿಸಿದ್ದಾರೆ ಈ ತಲೆಬುರುಡೆ ಪುರುಷನದ್ದು ಅನ್ನೋದು ತನಿಖೆ ವೇಳೆ ಬಹಿರಂಗಗೊಂಡಿದ್ದು ಈಗ ಆ ತಲೆಬುರುಡೆಯ ಮಹಜರು ನಡೆಸಲು ಎಸ್‌ಐಟಿ ತಯಾರಿ ನಡೆಸಿದೆ.

ಇಂದು ಸದನದಲ್ಲಿ ಗೃಹ ಸಚಿವರಿಂದ ಉತ್ತರ

ಗುಂಡ್ಲುಪೇಟೆ, ಆ.17– ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಳೆ (ಸೋಮವಾರ) ಸದನದಲ್ಲಿ ಸಂಪೂರ್ಣ ಉತ್ತರ ಕೊಡಲು ಪ್ರಯತ್ನ ಮಾಡುತ್ತೇನೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.



ಗುಂಡ್ಲುಪೇಟೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಕಳೇಬರ ಶೋಧ ಪ್ರಕರಣ ಕೊನೆಯ ಹಂತಕ್ಕೆ ಬಂದಿದೆ. ಶನಿವಾರ ಕಳೇಬರ ಶೋಧ ನಿಲ್ಲಿಸಿರುವ ಎಸ್‌ಐಟಿ, ▶ 6ನೇ ಪುಟಕ್ಕೆ

ಉಪ ರಾಷ್ಟ್ರಪತಿ ಚುನಾವಣೆ: ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಎನ್‌ಡಿಎ ಅಭ್ಯರ್ಥಿ

ನವದೆಹಲಿ, ಆ.17– ತೀವ್ರ ಕುತೂಹಲ ಕೆರಳಿಸಿರುವ ಉಪ ರಾಷ್ಟ್ರಪತಿ ಚುನಾವಣೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ತನ್ನ ಅಧಿಕೃತ ಅಭ್ಯರ್ಥಿ ಘೋಷಣೆ ಮಾಡಿದ್ದು, ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು ಉಪ ರಾಷ್ಟ್ರಪತಿ ಹುದ್ದೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಹೇಳಿದ್ದಾರೆ.



ಸೆ.9 ರಂದು ನಡೆಯಲಿರುವ ಉಪರಾಷ್ಟ್ರಪತಿ ಚುನಾವಣೆಗೆ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಅಭ್ಯರ್ಥಿಯಾಗಿ ಭಾರತೀಯ ಜನತಾ ಪಕ್ಷ ಭಾನುವಾರ ಘೋಷಿಸಿದೆ. ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ಬಿಜೆಪಿಯ ಸಂಸದೀಯ ಮಂಡಳಿ ಸಭೆಯಲ್ಲಿ ರಾಧಾಕೃಷ್ಣನ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಮೈತ್ರಿಕೂಟದ ಅಭ್ಯರ್ಥಿಯನ್ನು ಅಂತಿಮಗೊಳಿಸಲು ಎನ್‌ಡಿಎ ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಅಧಿಕಾರ ನೀಡಿತ್ತು.

ಈ ಕುರಿತು ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಪಿ ನಡ್ಡಾ, ಮುಂದಿನ ಉಪಾಧ್ಯಕ್ಷರನ್ನು ಸರ್ವಾನುಮತದಿಂದ ಆಯ್ಕೆ ಮಾಡಬೇಕೆಂದು ನಾವು ಬಯಸುತ್ತೇವೆ, ▶ 6ನೇ ಪುಟಕ್ಕೆ



ಚಿನ್ನದಂಗಡಿ ದರೋಡೆ ನೋಡಿದ ಹೋಟೆಲ್ ಮಾಲೀಕನ ಹತ್ಯೆಗೈದ ಡಕಾಯಿತರು

ಕಿರುಗಾವಲಿನಲ್ಲಿ ಭೀಕರ ಘಟನೆ, ಆರೋಪಿಗಳ ಪತ್ತೆಗೆ ನಾಲ್ಕು ತಂಡ ರಚನೆ



ದರೋಡೆ ನಡೆದ ಚಿನ್ನದಂಗಡಿ ಮುಂದೆ ನೆರೆದಿರುವ ಜನತೆ.



ಮಾದಪ್ಪ

ಮಳವಳ್ಳಿ, ಆ.17– ದರೋಡೆಕೋರರ ತಂಡವೊಂದು ಚಿನ್ನಾಭರಣಗಳ ಅಂಗಡಿಗೆ ನುಗ್ಗಿ ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ ವೇಳೆ ಅದನ್ನು ನೋಡಿದ ಪಕ್ಕದ ಅಂಗಡಿಯ ಹೋಟೆಲ್ ಮಾಲೀಕನನ್ನು ಕತ್ತು ಹಿಸುಕಿ ಧಾರುಣವಾಗಿ ಕೊಲೆ ಮಾಡಿದ ಘಟನೆ ತಾಲೂಕಿನ ಕಿರುಗಾವಲಿನಲ್ಲಿ ಭಾನುವಾರ ಮುಂಜಾನೆ ನಡೆದಿದೆ.


ವಿವರ: ದರೋಡೆಕೋರರ ತಂಡ ಕಿರುಗಾವಲು ಗ್ರಾಮದ ಮಹಾಲಕ್ಷ್ಮಿ ಜ್ಯುವೆಲರ್ಸ್ ಅಂಡ್ ಬ್ಯಾಂಕರ್ಸ್‌ನಲ್ಲಿ ಭಾನುವಾರ ಮುಂಜಾನೆ ಅಂಗಡಿ ಬಾಗಿಲನ್ನು ಗ್ಯಾಸ್ ಕಟ್ಟರ್ ಮೂಲಕ ಕಟ್ ಮಾಡಿ, ಒಳ ನುಗ್ಗಿ ಚಿನ್ನಾಭರಣ ದೋಚಿ ಪರಾರಿಯಾಗುವಾಗ ಶಬ್ದ ಕೇಳಿ ಪಕ್ಕದಲ್ಲಿದ್ದ ಶ್ರೀ ಮಹದೇಶ್ವರ ಹೋಟೆಲ್ ಮಾಲೀಕ ಮಾದಪ್ಪ ಹೊರಗೆ ಬಂದು ದರೋಡೆಕೋರರನ್ನು ನೋಡಿದ್ದಾರೆ. ಇದರಿಂದ ಗಾಬರಿಗೊಂಡ ದುಷ್ಕರ್ಮಿಗಳ ತಂಡ 67 ವರ್ಷದ ಮಾದಪ್ಪ ಅವರ ಮೇಲೆ ಹಲ್ಲೆ ನಡೆಸಿ, ಕತ್ತು ಹಿಸುಕಿ ಕೊಲೆ ಮಾಡಿ ಪರಾರಿಯಾಗಿದೆ.

ದರೋಡೆಕೋರರು ಜ್ಯುವೆಲರಿ ಅಂಗಡಿಯಲ್ಲಿದ್ದ ಚಿನ್ನಾಭರಣ, ಹಣ ಜೊತೆಗೆ ಸಿಸಿ ಕ್ಯಾಮರಾದ ಡಿವಿಆರ್ ಅನ್ನು ಹೊತ್ತೊಯ್ದಿದ್ದೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್ಪಿ ಕೃಷ್ಣಪ್ಪ ಸಿಪಿಐ ಶ್ರೀಧರ್, ಪಿಎಸ್‌ಐ ರವಿಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ.

ಘಟನೆ ಸಂಬಂಧ ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇನ್ನು ದರೋಡೆ ನಡೆದ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲೇ 1 ತಿಂಗಳ ಹಿಂದೆ ದುಷ್ಕರ್ಮಿಗಳು ಮಹಿಳೆಯೊಬ್ಬರ ಮಾಂಗಲ್ಯ ಸರ ಕಿತ್ತು ಪರಾರಿಯಾಗಿದ್ದ ಘಟನೆ ನಡೆದಿತ್ತು.

ಕಿರುಗಾವಲು ಗ್ರಾಮದ ರಸ್ತೆಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಅಳವಡಿಸಿದ್ದ ಸಿಸಿಟಿವಿಗಳಿಗೆ ರೀಚಾರ್ಜ್ ▶ 6ನೇ ಪುಟಕ್ಕೆ

ಆಸ್ತಿ ವಿವಾದ: ಪತ್ನಿಯನ್ನು ಭೀಕರವಾಗಿ ಕೊಚ್ಚಿ ಕೊಲೆಗೈದು ಪೊಲೀಸರಿಗೆ ಶರಣಾದ ರಿಯಲ್ ಎಸ್ಟೇಟ್ ಉದ್ಯಮಿ



ಪಾಪಣ್ಣ



ಗಾಯಿತ್ರಿ

ಮೈಸೂರು, ಆ.17(ಆರ್‌ಕೆ, ಬಿಎಲ್‌ಯು)– ಆಸ್ತಿ ವಿಚಾರವಾಗಿ ಉಂಟಾದ ಜಗಳದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯೋರ್ವ ಪತ್ನಿಯನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಿ, ಪೊಲೀಸರಿಗೆ ಶರಣಾಗಿರುವ ಘಟನೆ ಮೈಸೂರಿನ ಹೆಬ್ಬಾಳಿನ ಮಹದೇಶ್ವರ ಬಡಾವಣೆಯಲ್ಲಿ ಶನಿವಾರ ಸಂಭವಿಸಿದೆ.

ವಿವರ: ನಗರದ ಮಹದೇಶ್ವರ ಬಡಾವಣೆಯ ಪಾಪಣ್ಣ (64) ಎಂಬಾತ ಪತ್ನಿ ಗಾಯಿತ್ರಿ (54)ಯನ್ನು ಕೊಲೆ ಮಾಡಿದ್ದಾನೆ. ಈತನಿಗೆ ಮೂವರು ಮಕ್ಕಳಿದ್ದು, ಒಬ್ಬ ಗಂಡು ಮಗ ಹಾಗೂ ಒಬ್ಬ ಹೆಣ್ಣು ಮಗಳಿಗೆ ಮದುವೆ ಮಾಡಿದ್ದ. ಮತ್ತೊಬ್ಬ ಮಗನಿಗೆ ಮದುವೆ ಮಾಡಿರಲಿಲ್ಲ.

ಸೈಟ್ ಖರೀದಿ ಮಾಡಿ, ಮನೆ ನಿರ್ಮಿಸಿ ಮಾರಾಟ ಮಾಡುವ ರಿಯಲ್ ಎಸ್ಟೇಟ್ ವ್ಯವಹಾರವನ್ನು ಪಾಪಣ್ಣ ನಡೆಸುತ್ತಿದ್ದ. ಆದರೆ ಇತ್ತೀಚಿಗೆ ವ್ಯವಹಾರದಲ್ಲಿ ನಷ್ಟವಾಗಿ ಸಾಲ ಮಾಡಿಕೊಂಡಿದ್ದ ಎನ್ನಲಾಗಿದೆ. ಸಾಲ ತೀರಿಸಲು ಪತ್ನಿ ಹೆಸರಿನಲ್ಲಿದ್ದ ಆಸ್ತಿ ಮಾರಾಟ ಮಾಡಲು ಪಾಪಣ್ಣ ತೀರ್ಮಾನಿಸಿದ.

ಆದರೆ, ಆಸ್ತಿ ಮಾರಾಟಕ್ಕೆ ಪತ್ನಿ ಹಾಗೂ ಮೂವರು ಮಕ್ಕಳು ಒಪ್ಪಲಿಲ್ಲ ಎಂದು ಹೇಳಲಾಗಿದೆ. ಈ ವಿಚಾರವಾಗಿ ಮನೆಯಲ್ಲಿ ಪ್ರತಿ ದಿನ ಜಗಳ ನಡೆಯುತ್ತಿತ್ತು. ಸಹಿ ಹಾಕುವಂತೆ ಮನವೊಲಿಸುವ ಪಾಪಣ್ಣನ ಪ್ರಯತ್ನ ವಿಫಲವಾಯಿತು. ಆಸ್ತಿ ಮಾರಾಟಕ್ಕೆ ಸಹಿ ಹಾಕಲಿಲ್ಲವೆಂದರೆ ಕೊಲೆ ಮಾಡುತ್ತೇನೆ ಎಂದು ಪಾಪಣ್ಣ ಮಚ್ಚು ತೋರಿಸಿ ಆಗಾಗ್ಗೆ ಬೆದರಿಕೆ ಹಾಕುತ್ತಿದ್ದ. ಪಾಪಣ್ಣನ ಪ್ರಾಣ ಬೆದರಿಕೆಗೆ ಮಣಿಯದ ಕುಟುಂಬಸ್ಥರು ಸಹಿ ಮಾಡಲು ನಿರಾಕರಿಸಿದರು. ಶನಿವಾರ ಮಧ್ಯಾಹ್ನ ಮನೆಯಲ್ಲಿ ಮಕ್ಕಳು ಇಲ್ಲದ ವೇಳೆ ಪಾಪಣ್ಣ ಹಾಗೂ ಗಾಯತ್ರಿ ನಡುವೆ ಜೋರಾದ ಜಗಳವಾಗಿ ಅತಿರೇಕಕ್ಕೆ ಹೋಯಿತು. ಈ ವೇಳೆ ಕೋಪೋದ್ರಿಕ್ತನಾದ ಪಾಪಣ್ಣ ಪತ್ನಿ ಗಾಯತ್ರಿಯನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಿದ್ದಾನೆ. ನಂತರ ವಿಜಯನಗರ ಪೊಲೀಸ್ ಠಾಣೆಗೆ ಹೋಗಿ ಪತ್ನಿಯನ್ನು ▶ 6ನೇ ಪುಟಕ್ಕೆ

ಕುಕ್ಕರಹಳ್ಳಿ ಕೆರೆ ಸಂರಕ್ಷಣೆ, ಅಭಿವೃದ್ಧಿ ಸಂಬಂಧ ಮೈವಿವಿ ಕುಲಪತಿಗಳಿಗೆ ಮೈಗ್ರಾಪ ಮನವಿ




ಮೈಗ್ರಾಪ ತಜ್ಞರ ಸಮಿತಿ ಸದಸ್ಯರು ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿ ಸಂಬಂಧ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್‌ರಿಗೆ ಮನವಿ ಸಲ್ಲಿಸಿದರು.

ಮೈಸೂರು,ಆ.17–ಮೈಸೂರಿನ ಕುಕ್ಕರ ಹಳ್ಳಿ ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿ ಆಶಯ ಹೊಂದಿರುವ ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ)ನ ತಜ್ಞರ ಸಮಿತಿಯು ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರಿಗೆ ಮನವಿ ಸಲ್ಲಿಸಿತು.

ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ದೃಷ್ಟಿಯಿಂದ ತಮ್ಮನ್ನು(ಕುಲಪತಿ) ಒಳಗೊಂಡಂತೆ ಮೈಸೂರು ವಿವಿ ಹಾಗೂ ಮೈಗ್ರಾಪ ತಜ್ಞರ ಕಾರ್ಯಪಡೆಯನ್ನು ರಚಿಸಬೇಕು. ಕೆರೆ ನೀರು ಕಲುಷಿತವಾಗದಂತೆ ನೋಡಿಕೊಳ್ಳುವುದರ ಜೊತೆಗೆ ಇಲ್ಲಿನ ಪರಿಸರ ಸಂಪತ್ತನ್ನು ಸಂರಕ್ಷಿಸಿಕೊಳ್ಳಬೇಕು. ಅಭಿವೃದ್ಧಿ ಭರದಲ್ಲಿ ಇಲ್ಲಿನ ಪ್ರಕೃತಿ ಹಾಗೂ ಜೀವಿಗಳಿಗೆ ತೊಂದರೆ ಮಾಡಬಾರದು ಸೇರಿದಂತೆ ಹಲವು ಮಹತ್ವದ ಸಲಹೆಗಳಿರುವ ಮನವಿ ಪತ್ರ ಸಲ್ಲಿಸಿ, ಚರ್ಚಿಸಲಾಯಿತು.

ಜಿಲ್ಲಾಧಿಕಾರಿಗಳು, ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ಹಾಗೂ ಮೈಸೂರು ಪಾಲಿಕೆ ಆಯುಕ್ತರ ಶೀಘ್ರದಲ್ಲೇ ಭೇಟಿಯಾಗಿ ಕುಕ್ಕರಹಳ್ಳಿಕೆರೆ ಸಂರಕ್ಷಣೆಗೆ ಗಮನ ಸೆಳೆದ ನಂತರ ತಾಂತ್ರಿಕ ಹಾಗೂ ಬೌದ್ಧಿಕ ನೆಲೆಗಟ್ಟಿನಲ್ಲಿ ಕೆರೆ ಅಭಿವೃದ್ಧಿ ಸಂಬಂಧ ಸಭೆ ನಿಗದಿಪಡಿಸಲು ನಿರ್ಧರಿಸಲಾಯಿತು. ವಿವಿ ಕುಲಪತಿ ಅವರೊಂದಿಗಿನ ಸಭೆಯಲ್ಲಿ ಮೈಗ್ರಾಪದ ಡಾ.ಭಾಮಿ ವಿ.ಶೆಣೈ, ಶೋಭನ, ಸುಧೀರ್, ರವಿಕುಮಾರ್, ರಶ್ಮಿಕೋಟಿ, ದಯಾನಂದ್ ಸಾಗರ್ ಪಾಲ್ಗೊಂಡಿದ್ದರು.

ಶ್ರೀ ಮಹಾ ಸುದರ್ಶನ, ಶ್ರೀ ಲಕ್ಷ್ಮಿನರಸಿಂಹ, ಶ್ರೀ ಧನ್ವಂತರಿ ಮಹಾಯಜ್ಞ



ಮೈಸೂರಿನ ಮಹಾಜನ ಕಾಲೇಜು ಮೈದಾನದಲ್ಲಿ ಅಮೃತ ರಕ್ಷಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕ ಕಲ್ಯಾಣಾರ್ಥಕ್ಕಾಗಿ ಹಾಗೂ ವೀರಯೋಧರ ಹೆಸರಲ್ಲಿ ದೇಶದ ಒಳಿತಿಗಾಗಿ ನಡೆದ ಶ್ರೀ ಮಹಾ ಸುದರ್ಶನ, ಶ್ರೀ ಲಕ್ಷ್ಮಿ ನರಸಿಂಹ ಹಾಗೂ ಶ್ರೀ ಧನ್ವಂತರಿ ಮಹಾಯಜ್ಞದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಾಗವಹಿಸಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಪುರೋಹಿತರಾದ ನರಸಿಂಹಮೂರ್ತಿ, ಆನಂದಬಾಬು, ವರುಣ್, ಪಿಬಿ ಕಣ್ಣನ್, ಎಸ್.ಆರ್.ರವಿಕುಮಾರ್, ನಿರೂಪಕ ಅಜಯ್ ಶಾಸ್ತ್ರಿ, ನವೀನ್ ಇತರರಿದ್ದರು.

ನೋಂದಾಯಿತ ಸದಸ್ಯತ್ವ ಅರ್ಜಿಗಳ ಹಸ್ತಾಂತರ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ಹೊಸದಾಗಿ ನೋಂದಾಯಿಸಿದ ಸದಸ್ಯತ್ವದ ಅರ್ಜಿಗಳನ್ನು ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಅವರಿಗೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ ನೇತೃತ್ವದ ತಂಡ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಅನಿಲ್‌ಕುಮಾರ್, ಜಂಟಿ ಕಾರ್ಯದರ್ಶಿ ಎಂ.ಎಸ್.ಪ್ರಶಾಂತ್, ಕೇಂದ್ರ ಕಾರ್ಯಕಾರಿಣಿ ಸಮಿತಿ ಸದಸ್ಯ ಎನ್.ವಿಶ್ವನಾಥ್, ಶ್ರೀಮತಿ ಅನು ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

ಜಾವಗಾಲ್ ಶ್ರೀನಾಥ್‌ಗೆ ಮಾತೃ ವಿಯೋಗ



ಮೈಸೂರು, ಆ.17(ಜಿಎ)–ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಜಾವಾಗಲ್ ಶ್ರೀನಾಥ್ ತಾಯಿ ಜೆ.ಸಿ.ಭಾಗ್ಯಲಕ್ಷ್ಮಿ (88) ಭಾನುವಾರ ಯಾದವಗಿರಿಯಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪುತ್ರರಾದ ಸಿ.ಜೆ.ಶ್ರೀನಿವಾಸ್, ಜವಾಗಲ್ ಶ್ರೀನಾಥ್, ಪುತ್ರಿಯರಾದ ಸಿ.ಜೆ.ಶ್ರೀಲಕ್ಷ್ಮಿ, ಸಿ.ಜೆ. ಶ್ರೀಲತಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜಾವಾಗಲ್ ಶ್ರೀನಾಥ್ ಅವರ ತಂದೆ ಜೆ.ಕೆ.ಚಂದ್ರಶೇಖರ್ 2018ರಲ್ಲಿ ನಿಧರಾಗಿದ್ದರು. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ನಿಧನ

ವೆಂಕಟರಾಮಯ್ಯ ಶೆಟ್ಟಿ



ಮೈಸೂರಿನ ವಾಸವಿ ಕೋಚಿಂಗ್ ಕ್ಲಾಸ್ ಮತ್ತು ವಾಸವಿ ಗ್ರಾಫಿಕ್ಸ್ ಮಾಲೀಕರಾದ ವೆಂಕಟರಾಮಯ್ಯ ಶೆಟ್ಟಿ(85) ಅವರು ಭಾನುವಾರ ಮುಂಜಾನೆ ಗೋಕುಲಂ 2ನೇ ಹಂತದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಪತ್ನಿ ಸಿ.ವಿ.ನಾಗರತ್ನಂ, ಪುತ್ರರಾದ ಬಾಬು ನರೇಂದ್ರಪ್ರಸಾದ್, ಬಾಬು ಅಜೇಯ್ ಪ್ರಸಾದ್, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ಯಾಪ್ಟನ್ ಡಾ.ಜಿ.ಎಸ್.ವೆಂಕಟೇಶ್



ಮೈಸೂರು, ಆ.17– ಮೈಸೂರಿನ ಯಾದವಗಿರಿ ಎರಡನೇ ಮೇನ್ ನಿವಾಸಿ, ಕ್ಯಾಪ್ಟನ್ ಡಾ.ಜಿ.ಎಸ್.ವೆಂಕಟೇಶ್(84) ಅವರು ಭಾನುವಾರ ನಿಧನರಾದರು.

ಇವರು ಸೇನೆಯಿಂದ ನಿವೃತ್ತರಾದ ಬಳಿಕ ಕೆ.ಆರ್.ಆಸ್ಪತ್ರೆ ಅಧೀಕ್ಷಕರಾಗಿ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆ ಹೋಂಗಾರ್ಡ್ ಕಮಾಂಡಂಟ್ ಆಗಿಯೂ ಸೇವೆ ಸಲ್ಲಿಸಿದ್ದರು. ಉತ್ತಮ ನಾಗರಿಕ ಸೇವೆಯನ್ನು ಪರಿಗಣಿಸಿ ಇವರಿಗೆ ರಾಷ್ಟ್ರಪತಿ ಪ್ರಶಸ್ತಿ ನೀಡಿ, ಗೌರವಿಸಲಾಗಿತ್ತು. ಡಾ.ಜಿ.ಎಸ್.ವೆಂಕಟೇಶ್ ಅವರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಗೋಕುಲಂ ರುದ್ರಭೂಮಿಯಲ್ಲಿ ಸೋಮವಾರ(ಆ.18) ಮಧ್ಯಾಹ್ನ 12ಕ್ಕೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದಯ್ಯ (ಮೊಗಣ್ಣ)



ಮೈಸೂರು, ಆ.17– ಮೈಸೂರಿನ ಜಯನಗರದ ನಿವಾಸಿಯಾದ ಹಿರಿಯ ಪೈಲ್ವಾನ್ ಸಿದ್ದಯ್ಯ (ಮೊಗಣ್ಣ) ಅವರು ಭಾನುವಾರ ನಿಧನರಾಗಿದ್ದಾರೆ. ಅವರಿಗೆ 97 ವರ್ಷ ವಯಸ್ಸಾಗಿತ್ತು.

ದಿವಂಗತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ(ಆ.18) ಮಧ್ಯಾಹ್ನ 12 ಗಂಟೆಗೆ ಕೆ.ಜಿ.ಕೊಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ ಚುನಾವಣೆಯಲ್ಲಿ ಹಿಂದಿದೆ; ಆದರೆ ಹೋರಾಟಗಳಲ್ಲಿ ಬಲಿಷ್ಠವಾಗಿದೆ

ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಮೈಸೂರು ಜಿಲ್ಲಾ ಸಮ್ಮೇಳನದ ಪ್ರತಿನಿಧಿ ಸಮಾವೇಶ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಮೈಸೂರು ಜಿಲ್ಲಾ ಮಂಡಳಿಯಿಂದ ಏರ್ಪಡಿಸಿದ್ದ 14ನೇ ಮೈಸೂರು ಜಿಲ್ಲಾ ಸಮ್ಮೇಳನದ ಪ್ರತಿನಿಧಿ ಸಮಾವೇಶದಲ್ಲಿ ರಾಜ್ಯ ಸಹ ಕಾರ್ಯದರ್ಶಿ ಅಮ್ಜದ್ ಖಾನ್ ಮಾತನಾಡಿದರು.

ಮೈಸೂರು, ಆ.17(ಜಿಎ)–ಭಾರತ ಕಮ್ಯೂನಿಸ್ಟ್ ಪಕ್ಷ ಚುನಾವಣೆಯಲ್ಲಿ ಹಿಂದಿದೆ; ಆದರೆ, ಹೋರಾಟಗಳಲ್ಲಿ ಬಲಿಷ್ಠವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ ರಾಜ್ಯ ಸಹ ಕಾರ್ಯದರ್ಶಿ ಅಮ್ಜದ್ ಖಾನ್ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಮೈಸೂರು ಜಿಲ್ಲಾ ಮಂಡಳಿ ವತಿಯಿಂದ ಭಾನುವಾರ ಏರ್ಪಡಿಸಿದ್ದ 14 ನೇ ಮೈಸೂರು ಜಿಲ್ಲಾ ಸಮ್ಮೇಳನದ ಪ್ರತಿನಿಧಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಗತ್ತು ಅತ್ಯಂತ ಬಿಕ್ಕಟ್ಟಿನಲ್ಲಿ ನಡೆಯುತ್ತಿದ್ದು, ಸಾಮ್ರಾಜ್ಯ ಶಾಹಿಗಳು ಯುದ್ಧ, ಸುಂಕ ಏರಿಕೆ ಸೇರಿದಂತೆ ವಿವಿಧ ರೀತಿ ದಾಳಿ ಮಾಡುವ ಮೂಲಕ ಬೇರೆ ರಾಷ್ಟ್ರಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಕೆಲಸ ಹೆಚ್ಚಳವಾಗುತ್ತಿದೆ. ಅದರ ಪರಿಣಾಮ ಭಾರತದ ಮೇಲೆಯೂ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾಮ್ರಾಜ್ಯ ಶಾಹಿಗಳು ರಷ್ಯಾ ಮತ್ತು ಯುಕ್ರೇನ್ ನಡುವಿನ ಯುದ್ಧ ನಾಗರಿಕರ ಬದುಕಿನಲ್ಲಿ ಆತಂಕ ಸೃಷ್ಟಿ ಮಾಡುತ್ತಿವೆ. ಭಾರತ ದೇಶಕ್ಕೆ ತನ್ನದೇ ಆದ ವಿದೇಶಾಂಗ ನೀತಿ ಇದೆ. ಆದರೆ, ಭಾರತ ದೇಶದ ರಾಜಕೀಯ ವ್ಯವಸ್ಥೆ ಹದಗೆಡುತ್ತಿದೆ. ಈ ನಿಟ್ಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ದುಡಿಯುವ ವರ್ಗ, ಕೂಲಿ ಕಾರ್ಮಿಕರು ಹಾಗೂ ಈ ದೇಶದ ಅತ್ಯಂತ ಕೆಳ ವರ್ಗ, ಕಾರ್ಮಿಕರ ಪರವಾಗಿ ಕಾರ್ಯ ನಿರ್ವಹಿಸುತ್ತಿದೆ. ರೈತರು ಹಾಗೂ ಕಾರ್ಮಿಕರು ಒಗ್ಗಟ್ಟು ಪ್ರದರ್ಶಿಸಿದರೆ ನಮಗೆ ಈ ದೇಶವನ್ನು ಆಳ್ವಿಕೆ ಮಾಡುವ ಶಕ್ತಿ ದೊರಕಲಿದೆ ಎಂದರು.

ಬಿಜೆಪಿಯ ನರೇಂದ್ರ ಮೋದಿ ಅಧಿಕಾರಕ್ಕೆ ಬಂದಾಗ ದೇಶದಲ್ಲಿ ಭ್ರಷ್ಟಾಚಾರ ವಿರುದ್ಧ ಹೋರಾಡಿ ನಿರುದ್ಯೋಗ ತೊಡೆದು ಹಾಕುತ್ತೇನೆ. ವಿದೇಶದಲ್ಲಿರುವ ಕಪ್ಪು ಹಣ ವಾಪಸ್ ತರುತ್ತೇನೆ ಎಂದು ಹೇಳಿದ್ದು ಅರದಲ್ಲಿ ಈಗ ಅವರು ವಿಫಲರಾಗಿದ್ದಷ್ಟೇ ಅಲ್ಲ. ದಿನ ಬಳಕೆ ಪದಾರ್ಥಗಳ ಬೆಲೆ ಕೂಡ ಏರಿಕೆಯಾಗಿದ್ದು ಇನ್ನಿತರೆ ಅಂಶಗಳನ್ನು ಹೇಳಿದ್ದು ಕೇಳಿದ್ದು ಮಾತಿಗಷ್ಟೇ ಅನುವಂತಾಗಿದೆ ಎಂದು ಕಿಡಿಕಾರಿದರು.

ಡಾ.ಬಿ.ಆರ್.ಅಂಬೇಡ್ಕರ್ ಬರೆದಿರುವ ಸಂವಿಧಾನದ ಒಳಗೆ ಇರುವಂತಹ ಅಂಶಗಳನ್ನು ಧಿಕ್ಕರಿಸುವಂತಹ ಕೆಲಸವನ್ನು ಬಿಜೆಪಿ ಪಕ್ಷ ಮಾಡುವಲ್ಲಿ ನಿಸ್ಸೀಮವಾಗಿದೆ. ಮೋದಿ ಸರ್ಕಾರ ಹೇಳಿರುವ ಏಕತ್ವ ಇಡೀ ಸಂವಿಧಾನವನ್ನು ನಾಶ ಮಾಡುವಂತಿದೆ. ಚುನಾವಣೆ ರಾಜಕಾರಣದಲ್ಲಿ ಕಮ್ಯೂನಿಸ್ಟ್ ಪಕ್ಷ ಹಿಂದುಳಿದಿದ್ದರು ಜನಪರ ಹೋರಾಟದಲ್ಲಿ ಸದಾ ಮುಂದುವರೆದು ಸಮಾಜವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಲಿದ್ದೇವೆ ಎಂದರು. ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ರಾಮಕೃಷ್ಣ, ಖಜಾಂಚಿ ಎನ್.ಕೆ.ದೇವದಾಸ್, ರಾಜು, ಸೋಮರಾಜ್ ಅರಸ್ ಉಪಸ್ಥಿತರಿದ್ದರು.

'ಕುರಿಗಾಹಿಗಳ ನಡೆ ವಿಧಾನಸೌಧದ ಕಡೆ': ನಾಳೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ

ಬೆಂಗಳೂರು, ಆ.17– ಕುರಿಗಾಹಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ತರಬೇಕೆಂದು ಆಗ್ರಹಿಸಿ ಆ.19ರಂದು 'ಕುರಿ ಗಾಹಿಗಳ ನಡೆ, ವಿಧಾನಸೌಧದ ಕಡೆ' ಹೆಸರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಸಾವಿರಾರು ಕುರುಬರು ತಮ್ಮ ಕುರಿ ಹಿಂಡುಗಳೊಂದಿಗೆ ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ಸೇರಿ ವಿಧಾನಸೌಧದ ಮೆಟ್ಟಿಲುಗಳವರೆಗೆ ಮೆರವಣಿಗೆ ನಡೆಸಲಿದ್ದಾರೆ.

ಕುರುಬರ ರಕ್ಷಣೆ ಮತ್ತು ದೌರ್ಜನ್ಯ ತಡೆ ಮಸೂದೆಯನ್ನು ತಕ್ಷಣ ಅಂಗೀಕರಿಸುವುದು ಅವರ ಪ್ರಮುಖ ಬೇಡಿಕೆಯಾಗಿದೆ. ಸಾಂಪ್ರದಾಯಿಕ ಉಡುಪಿನಲ್ಲಿ ಕುರಿಗಾಹಿಗಳು ಬೆಂಗಳೂರಿನ ಬೀದಿಗಳಲ್ಲಿ ಕುರಿಗಳನ್ನು ಮೇಯಿಸಲಿದ್ದಾರೆ. ಇದು ಕೇವಲ ಪ್ರತಿಭಟನೆಯಲ್ಲ, ಉಳಿವಿಗಾಗಿ ಒಂದು ಚಳುವಳಿ ಎಂದು ವಕೀಲ ಮತ್ತು ಸಮುದಾಯದ ನಾಯಕ ಯಲ್ಲಪ್ಪ ಹೆಗ್ಡೆ ಹೇಳಿದರು.

ಕರ್ನಾಟಕದ ಜನಸಂಖ್ಯೆಯ ಸುಮಾರು ಶೇ.8ರಷ್ಟಿರುವ ಭಾರತದ ಅತಿದೊಡ್ಡ ಒಬಿಸಿ ಕುರುಬ ಸಮುದಾಯವಾಗಿದೆ. ಕುರುಬರ ಗುರುತು, ಜೀವನೋಪಾಯ ಮತ್ತು ಘನತೆಯನ್ನು ರಕ್ಷಿಸುವ ಬಗ್ಗೆ ಈ ಆಂದೋಲನ ನಡೆಸುವುದಾಗಿ ತಿಳಿಸಿದ್ದಾರೆ.

ಈ ಪ್ರತಿಭಟನೆಯನ್ನು ಶ್ರೀ ತಿಂಥಿಣಿ ಮಠದ ಮಠಾಧೀಶರು ಬೆಂಬಲಿಸುತ್ತಾರೆ. ತಲೆಮಾರುಗಳಿಂದ, ಕುರುಬರು ಮೇವು ಹುಡುಕುತ್ತಾ ಪ್ರಯಾಣಿಸುವಾಗ ಕಿರುಕುಳಕ್ಕೆ ಬಲಿಯಾಗುತ್ತಿದ್ದಾರೆ. ಬಲವಾದ ಕಾನೂನುಗಳಿಲ್ಲದೆ, ಅವರು ಅಪರಾಧಿಗಳಿಗೆ ಸುಲಭವಾದ ಬೇಟೆಯಾಗುತ್ತಾರೆ. ನಾವು ತಕ್ಷಣದ ಕಾನೂನು ರಕ್ಷಣೆಗಳನ್ನು ಕೋರುತ್ತೇವೆ ಎಂದು ತಿಳಿಸಿದರು.

ರಾಜ್ಯದ ಮೂಲೆ ಮೂಲೆಗಳಿಂದ ಒಂದೂವರೆ ಲಕ್ಷಕ್ಕೂ ಹೆಚ್ಚು ಆದಿವಾಸಿ, ಅಲೆಮಾರಿ, ಸಂಚಾರಿ ಬುಡಕಟ್ಟು, ಅಸಂಘಟಿತ ಮೂಲನಿವಾಸಿ ಕುರಿಗಾಹಿಗಳ ಹೋರಾಟ ಸಮಿತಿ ಹಾಗೂ ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ಹೋರಾಟ ಸಮಿತಿ ಸಹಯೋಗದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿದೆ. ಮುಂಗಾರು ಅಧಿವೇಶನ ಮುಗಿಯುವುದರೊಳಗೆ ಮಸೂದೆ ಮಂಡಿಸಿ ಕಾಯ್ದೆಯಾಗಿ ಜಾರಿಗೆ ತರಬೇಕು. ಶೋಷಿತರು, ದಮನಿತರ ಹಿತ ಕಾಪಾಡಲು ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬಜೆಟ್ ಭಾಷಣದಲ್ಲಿ ಸಮುದಾಯಕ್ಕೆ ರಕ್ಷಣಾತ್ಮಕ ಕಾನೂನು ಜಾರಿಗೆ ತರುವುದಾಗಿ ಪ್ರತಿಜ್ಞೆ ಮಾಡಿದ್ದರು. ಆ ಭರವಸೆಯನ್ನು ಮರೆಯಬಾರದು ಎಂದು ಖಚಿತಪಡಿಸಿಕೊಳ್ಳಲು ನಾವು ವಿಧಾನ ಸಭೆ ಅಧಿವೇಶನದ ಸಮಯದಲ್ಲಿ ಇಲ್ಲಿದ್ದೇವೆ ಎಂದು ಹೆಗ್ಡೆ ಹೇಳಿದರು.

ಮೈಸೂರಲ್ಲಿ ತಾತಯ್ಯ ಜಯಂತಿ ಆಚರಣೆ



ಶ್ರೀ ಕೃಷ್ಣ ಲಲಿತ ಕಲಾಮಂದಿರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾತಯ್ಯ (ಎಂ.ವೆಂಕಟಕೃಷ್ಣಯ್ಯ) ಜಯಂತಿ ಆಚರಿಸಿ, ಮಕ್ಕಳಿಗೆ ಪುಸ್ತಕ, ಸಿಹಿ ವಿತರಿಸಲಾಯಿತು.

ಮೈಸೂರು, ಆ.17(ಜಿಎ)–ಮೈಸೂರಿನ ಶ್ರೀ ಕೃಷ್ಣ ಲಲಿತ ಕಲಾಮಂದಿರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ತಾತಯ್ಯ (ಎಂ.ವೆಂಕಟಕೃಷ್ಣಯ್ಯ) ಜಯಂತಿಯನ್ನು ಆಚರಿಸಿ, ಮಕ್ಕಳಿಗೆ ಪುಸ್ತಕ ಮತ್ತು ಸಿಹಿ ವಿತರಿಸಲಾಯಿತು.

ಈ ವೇಳೆ ಸಮಾಜ ಸೇವಕ ರಘುರಾಮ್ ವಾಜಪೇಯಿ ಮಾತನಾಡಿ, ಪತ್ರಿಕೋದ್ಯಮ ಭೀಷ್ಮ ಎಂದು ಖ್ಯಾತರಾಗಿದ್ದ ತಾತಯ್ಯ ಅವರು ಮೈಸೂರಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ ಅವರಿಗೆ ಶಿಕ್ಷಣ ಕಲಿಸಿದ ಸ್ವತಃ ಗುರುವಾಗಿದ್ದರು ಮತ್ತು ವಿಶ್ವೇಶ್ವರಯ್ಯರನ್ನು ಮುಂಬೈಯಿಂದ ಮೈಸೂರಿಗೆ ಕರೆತಂದಿದ್ದರು ಮಹಾತ್ಮ ಗಾಂಧೀಜಿಯವರು ಸ್ವಾಮಿ ವಿವೇಕಾನಂದರು ಇವರೆಲ್ಲರಿಗೂ ಮೆಚ್ಚುಗೆ ಪಡೆದುಕೊಂಡಿದರು. ಬಹುಶಃ ಮಹಾತ್ಮ ಗಾಂಧೀಜಿ ಅವರು ಇವರನ್ನು ತಾತ ಶ್ರೀ ಎಂದು ಬಿರುದು ನೀಡಿದರು ಎಂದು ಸ್ಮರಿಸಿದರು.

ದೀನ ದಲಿತರಿಗಾಗಿ ಬಡವರಿಗಾಗಿ ಅನಾಥಾಶ್ರಮವನ್ನು ಕಟ್ಟಿದರು. ಇಲ್ಲಿ ಓದಿದಂತವರು ಭಾರತಾದ್ಯಂತ ಒಳ್ಳೆಯ ಉದ್ಯೋಗದಲ್ಲಿದ್ದಾರೆ. ಈಗಲೂ ಸಹ ಅನಾಥಾಲಯದಲ್ಲಿ ವಿದ್ಯೆಯನ್ನು ಕಲಿಸಿ ಕೊಡುತ್ತಿದ್ದಾರೆ. ತಮ್ಮ ಸ್ವಂತ ಪತ್ರಿಕೆ ಸಾಧ್ವಿ, ಚಿಂತಾಮಣಿ, ವಿದ್ಯೋದಯ ನಡೆಸುತ್ತಿದ್ದರು ಆಗಿನ ಕಾಲದಲ್ಲಿ ಆ ಪತ್ರಿಕೆಗಳು ಬಹಳಷ್ಟು ಹೆಸರು ಮಾಡಿತ್ತು. ಆಗಿನ ಕಾಲದಲ್ಲಿ ಶಿಕ್ಷಣದ ಚಳುವಳಿಯನ್ನೇ ಮಾಡಿದರು. ತಾವೇ ಸ್ವತಃ ಶಾಲೆಯನ್ನು ತೆರೆದಿದ್ದರು. ಇವರ ಕೈಗೂಸು ಶಾಲೆಗಳಾದ ಮರಿಮಲ್ಲಪ್ಪ ಶಾಲೆ, ಶಾರದಾ ವಿಲಾಸ ಕಾಲೇಜು, ಮಹಾರಾಣಿ ಕಾಲೇಜು, ಇಂದಿಗೂ ಅವರ ಹೆಸರನ್ನು ಹೇಳುತ್ತಿದೆ ಎಂದರು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಬೀಡ ಬಾಬು, ಗೋಪಿ, ಮಾದಪ್ಪ, ಸಿದ್ದೇಗೌಡ, ಶಿಕ್ಷಕ ಪರಮೇಶ್, ಶಾಲಾ ಮಕ್ಕಳು ಇದ್ದರು.

ಕೆಆರ್ ಪೊಲೀಸ್ ಠಾಣೆಯಲ್ಲಿ ಕೃಷ್ಣ ಜನ್ಮಾಷ್ಟಮಿ



ಮೈಸೂರಿನ ಅಗ್ರಹಾರದಲ್ಲಿರುವ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಧನರಾಜ್ ನೇತೃತ್ವದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಸಬ್ ಇನ್ಸ್‌ಪೆಕ್ಟರ್ ವಿನೋದ್, ಮುಖ್ಯ ಪೇದೆ ಶ್ರೀನಿವಾಸ್‌ಪ್ರಸಾದ್, ರಾಜಶೇಖರ್, ಅರುಣ್‌ಕುಮಾರ್ ಮತ್ತು ಸಿಬ್ಬಂದಿ, ಮುಖಂಡರಾದ ಜಿ.ರಾಘವೇಂದ್ರ, ನಜರ್‌ಬಾದ್ ನಟರಾಜ್, ರಮೇಶ್ ರಾಮಪ್ಪ, ಹರೀಶ್‌ನಾಯ್ಡು, ರವಿಚಂದ್ರ, ರುದ್ರಮೂರ್ತಿ, ನಾಗೇಶ್, ಎಸ್.ಎನ್.ರಾಜೇಶ್, ರಾಕೇಶ್ ಇನ್ನಿತರರಿದ್ದರು.

ಧಾರ್ಮಿಕ ಕ್ಷೇತ್ರದ ಅಪ್ಪ ಅವರ ನಿಧನಕ್ಕೆ ಸುತ್ತೂರು ಶ್ರೀ ಸಂತಾಪ



ಸುತ್ತೂರು ಶ್ರೀಗಳು

ಮೈಸೂರು: ಕಲಬುರಗಿಯ ಜ್ಞಾನ ದಾಸೋಹಿಗಳಾಗಿದ್ದ ಸಂತಸದೃಶ ವ್ಯಕ್ತಿತ್ವದ ಡಾ.ಶ್ರೀ ಶರಣ ಬಸಪ್ಪ ಅಪ್ಪ ಅವರ ಅಗಲುವಿಕೆಯಿಂದ ಧಾರ್ಮಿಕ ಕ್ಷೇತ್ರಕ್ಕೆ ದೊಡ್ಡ ನಷ್ಟವಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ಶ್ರೀ ಶರಣ ಬಸವೇಶ್ವರ ಮಹಾದಾಸೋಹ ಸಂಸ್ಥಾನದ 8ನೇ ಪೀಠಾಧಿಪತಿಗಳಾಗಿದ್ದ ಶ್ರೀ ಶರಣ ಬಸಪ್ಪ ಅಪ್ಪರವರು ಶೈಕ್ಷಣಿಕ ಕ್ಷೇತ್ರಕ್ಕೆ ಸಲ್ಲಿಸಿದ ಅಸಾಧಾರಣವಾದ ಸಾಧನೆಯಿಂದ ಕರ್ನಾಟಕದ ಮದನ ಮೋಹನ ಮಾಳವೀಯ ಎಂಬ ಪ್ರಶಂಸೆಗೆ ಪಾತ್ರರಾಗಿದ್ದವರು. ಧರ್ಮಜಾಗೃತಿ, ಸಮಾಜಸೇವೆ, ಶೈಕ್ಷಣಿಕ ಕ್ಷೇತ್ರಗಳಿಗೆ ಸಾರ್ಥಕ ಸೇವೆ ಸಲ್ಲಿಸಿದ ಕಾಯಕಯೋಗಿಗಳಾಗಿದ್ದರು. ಸದಾ ಸಮಾಜದ ಒಳಿತಿಗಾಗಿಯೇ ಚಿಂತಿಸುತ್ತಿದ್ದವರು.

ಅವರ ಅಗಲುವಿಕೆಯಿಂದ ದಾಸೋಹ ಪರಂಪರೆಯ ಮಹಾನ್ ಕೊಂಡಿಯೊಂದು ಕಳಚಿದಂತಾಗಿದೆ. ಧಾರ್ಮಿಕ ಸಂಸ್ಥೆಗಳಿಗೆ ಹಿರಿಯಣ್ಣನಂತೆ ಮಾರ್ಗದರ್ಶಕರಾಗಿದ್ದರು. ನಡೆ–ನುಡಿಗಳಲ್ಲಿ ಏಕತೆ, ಸರಳತೆ, ಭಕ್ತಿಪಾರಾಯಣತೆಗಳ ಸಂಗಮದಂತಿದ್ದು, ಉನ್ನತ ಜೀವನ ನಡೆಸಿದ್ದರು. ಅವರ ಅಗಲುವಿಕೆಯಿಂದ ಕರ್ನಾಟಕದ ಧಾರ್ಮಿಕ ಕ್ಷೇತ್ರ ಬಡವಾಗಿದೆ.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯನ್ನು ಅಧ್ಯಕ್ಷರಾಗಿ ಸಮರ್ಥವಾಗಿ ಮುನ್ನಡೆಸಿದ್ದರು. ನವದೆಹಲಿಯ ಸಂಸತ್ ಭವನದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀ ಬಸವೇಶ್ವರ ಪುತ್ಥಳಿಯನ್ನು ಕೊಡುಗೆಯಾಗಿ ನೀಡಿದ್ದರು. ಶ್ರೀಮಠದೊಂದಿಗೆ ನಿಕಟವಾದ ಬಾಂಧವ್ಯ ಹೊಂದಿದ್ದರು. 1974ರಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1014ನೇ ಜಯಂತಿ ಮಹೋತ್ಸವದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಧರ್ಮ ಸಿಂಹಾಸನಾರೋಹಣದಂದು ಅಪ್ಪ ಅವರಿಗೆ ಸಮಾಜ ಸೇವಾ ರತ್ನ ಎಂಬ ಬಿರುದು ನೀಡಿ ಅಭಿನಂದಿಸಿ ಸತ್ಕರಿಸಿದ್ದರು. ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಗುಲ್ಬರ್ಗಾ ವಿವಿ ಗೌರವ ಡಾಕ್ಟರೇಟ್, ಲಲಿತಕಲಾ ಅಕಾಡೆಮಿಯಿಂದ ಕಲಾ ಪೋಷಕ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಸಂದಿದ್ದವು. ಅಪ್ಪ ಅವರ ಆತ್ಮಕ್ಕೆ ಚಿರಶಾಂತಿಯನ್ನು, ಅವರ ಕುಟುಂಬ ವರ್ಗದವರಿಗೆ ಮತ್ತು ಲಕ್ಷಾಂತರ ಭಕ್ತಾದಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು, ಅವರ ಉತ್ತರಾಧಿಕಾರಿಗಳು ಸಂಸ್ಥಾನವನ್ನು ಯಶಸ್ವಿಯಾಗಿ ನೆರವೇರಿಸಿಕೊಂಡು ಹೋಗಲು ಶರಣಬಸವೇಶ್ವರರ ಅನುಗ್ರಹ ಸದಾ ಇರಲೆಂದು ಹಾರೈಸುತ್ತೇವೆ ಎಂದು ಹೇಳಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.08.2025 ಸೋಮವಾರ, ಮಳೆ ನಕ್ಷತ್ರ: ಮಖ 17.08.2025ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಕೃಷ್ಣ ಯಾದವ ಗೊಲ್ಲರ ಬಳಗ :** ಶ್ರೀ ಕೃಷ್ಣಜನ್ಮಾಷ್ಟಮಿ, ಶ್ರೀ ಮಹಾಗಣಪತಿ ಮತ್ತು ಶ್ರೀ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನೆ, ಮಕ್ಕಳಿಗೆ ವೇಷಭೂಷಣ ಸ್ಪರ್ಧೆ, ತೊಟ್ಟಿಲು ಪೂಜೆ, ಸುಮಂಗಲೆಯರಿಗೆ ಮಂಗಳ ದ್ರವ್ಯ ವಿತರಣೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಕೆ.ಆರ್. ಮೊಹಲ್ಲಾ. ಸಂಜೆ 5 ಗಂಟೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳುಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಟಕ್ಕೆ ಚಿಕಿತ್ಸಾ ಶಿಬಿರ. ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನು ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಶೃತಿಮಂಜರಿ ಪ್ರತಿಷ್ಠಾನ ಮತ್ತು ರೋಟರಿ ಪಶ್ಚಿಮ (ಮೈಸೂರು) :** ಅಮೋಘ ದ್ವಂದ್ವ ವೀಣಾವಾದನ ಅಯ್ಯರ್ ಸಹೋದರರು (ಮೆಲ್ಬೋರ್ನ್), ವಿದ್ವಾನ್ ರಾಮನಾಥ ಅಯ್ಯರ್–ವೀಣಾವಾದನ, ವಿದ್ವಾನ್ ಗೋಪಿನಾಥ್ ಐಯ್ಯರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜನ್ ಮತ್ತು ವಿದ್ವಾನ್ ವಿ.ಎಸ್. ರಮೇಶ್–ಮೃಚ್ಚಂಗಿ, ಸ್ಥಳ: ರೋಟರಿ ಸಂಸ್ಥೆ ಪಶ್ಚಿಮ, ಕಾಮಾಕ್ಷಿ ಆಸ್ಪತ್ರೆ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಾಚನ–ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

ಮೈಸೂರು ಆಕಾಶವಾಣಿ



6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, ಇಂದು ವಿಶ್ವನಾಥ್, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) 10.00–ಕರ್ನಾಟಕ ಶಾಸ್ತ್ರೀಯ ಸಂಗೀತ –ಡಾ.ಕೆ.ವಾಗೀಶ್, ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು, ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಲಭ್ಯವಿರುವ ವಿಶೇಷ ಆರೋಗ್ಯ ಸೌಲಭ್ಯಗಳು ಮತ್ತು ಆರೈಕೆ ಕುರಿತು, ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ.ಮಲ್ಲಿಕಾ.ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಕುರಿತು ಮಾಹಿತಿ, 1.20– ಭಾವಗೀತೆಗಳು, ಕೆ.ಎಸ್.ಸುರೇಖ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಆರ್.ಸುಧಾ– ಹಾಡುಗಾರಿಕೆ, 4.00–ಮಹಿಳಾರಂಗ–ನನ್ನ ಹಕ್ಕು; ನನ್ನ ಜವಾಬ್ದಾರಿ, ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ –ಮೈಸೂರಿನ ವಕೀಲರಾದ ಎಂ.ಎನ್.ಸುಮನಾ, ಪ್ರಸ್ತುತಿ: ಸಹನ, 4.45–ಹಿಂದಿ ಪಾಠ, ಪ್ರಸ್ತುತಿ : ಡಾ.ಸ್ಮಿತಾ ಚಿಪ್ಳೂಣ್‌ಕರ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಕಾರ್ಯಚಟುವಟಿಕೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರಿನ ಕೆ.ಎಂ.ಎಫ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್.ಸುರೇಶ್ ನಾಯಕ್. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15–ಯುವವಾಣಿ–ಶ್ರೀರಂಗಪಟ್ಟಣದ ಗಾಯನ ಪ್ರತಿಭೆ ಅನಘಾ ಭಾರದ್ವಾಜ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್.ಬಿ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ನಿರ್ಮಲಾ ರಾಜಶೇಖರ್ –ವೀಣಾವಾದನ, 10.00–ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ.

ಮೈಸೂರು ಮಿತ್ರ

ಸ.ರ.ಸುದರ್ಶನ್ ಅಗಲಿಕೆಗೆ ಡಾ.ಬಿ.ಜೆ.ವಿಜಯ್‌ಕುಮಾರ್ ಸಂತಾಪ



ಸ.ರ.ಸುದರ್ಶನ್

ಮೈಸೂರು, ಆ.17– ಕನ್ನಡಪರ ಹಿರಿಯ ಹೋರಾಟಗಾರ ಸ.ರ.ಸುದರ್ಶನ್ ಅಗಲಿಕೆಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಕಂಬನಿ ಮಿಡಿದಿದ್ದಾರೆ.

ಹಿರಿಯ ಚಳವಳಿಗಾರರಾಗಿದ್ದ ಸ.ರ.ಸುದರ್ಶನ್ ಅವರು ಕನ್ನಡ ಭಾಷೆ, ನೆಲ, ಜಲದ ವಿಚಾರದಲ್ಲಿ ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲ ಹೋರಾಟ ನಡೆಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಲೇಬೇಕೆಂದು ನಿರಂತರ ಹೋರಾಟ ನಡೆಸಿದ ಪ್ರಮುಖರಲ್ಲಿ ಸುದರ್ಶನ್ ಅವರು ಪ್ರಮುಖರಾಗಿದ್ದರು. ವಿದ್ಯಾರ್ಥಿ ಜೀವನದಲ್ಲಿ ನಾನೂ ಕೂಡ ಅವರೊಂದಿಗೆ ಹಲವು ಪ್ರಗತಿಪರ ಹೋರಾಟದಲ್ಲಿ ಭಾಗಿಯಾಗಿದ್ದೆ. ಮೈಸೂರಿನ ಪ್ರಗತಿಪರ ಹೋರಾಟದ ಹಿರಿಯ ಕೊಂಡಿಯಾಗಿದ್ದ ಸುದರ್ಶನ್ ಅವರ ಅಗಲಿಕೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಹಾಗೂ ವೈಯಕ್ತಿಕವಾಗಿ ತೀವ್ರ ಸಂತಾಪ ವ್ಯಕ್ತಪಡಿಸುವುದಾಗಿ ತಿಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವ; ಅಭಿನಂದನೆ



ಬನ್ನೂರು ಲಯನ್ಸ್ ಎಜುಕೇಷನ್ ಸೊಸೈಟಿ ವತಿಯಿಂದ ಆಚರಿಸಲಾದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ನಿವೃತ್ತ ಶಿಕ್ಷಕ ಕೆ.ಸಿದ್ದಯ್ಯ ಹಾಗೂ ನಿವೃತ್ತ ಇಇ ಕೆ.ಜೆ.ಶಿವಣ್ಣ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಲಯನ್ಸ್ ಕ್ಲಬ್ ಬನ್ನೂರು ಅಧ್ಯಕ್ಷ ಬಿ.ಬಸವರಾಜ್, ಕಾರ್ಯದರ್ಶಿ ಎಸ್.ರಾಮಚಂದ್ರ, ಖಜಾಂಚಿ ಹೆಚ್.ಎಂ.ಸ್ವಾಮಿ, ಮಾಜಿ ಅಧ್ಯಕ್ಷ ಎಸ್.ಕೃಷ್ಣಪ್ಪ ಹಾಗೂ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು.

ಅಭಿನಂದನೆ



ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನಕ್ಕೆ 79ನೇ ಸ್ವಾತಂತ್ರ್ಯೋತ್ಸವದ ಮುಖ್ಯ ಭಾಷಣಕಾರರಾಗಿ ಆಗಮಿಸಿದ ಎಐಸಿಸಿಯ ಕಾರ್ಯದರ್ಶಿಗಳು ಹಾಗೂ ಮಹಾರಾಷ್ಟ್ರದ ಉಸ್ತುವಾರಿ ಸಂದೀಪ್ ಕುಮಾರ್ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಜಿ ಮೇಯರ್ ಚಿಕ್ಕಣ್ಣ, ಗ್ರಾಮಾಂತರ ಕಾರ್ಯದರ್ಶಿ ಶಿವಪ್ರಸಾದ್, ಜಿಪಂ ಮಾಜಿ ಸದಸ್ಯ ಮಂಜು, ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಸೇವಾದಳದ ಅಧ್ಯಕ್ಷ ಅಶೋಕ್, ಇಂದಿರಾ ಗಾಂಧಿ ಬ್ಲಾಕಿನ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲ್ ಉಪಸ್ಥಿತರಿದ್ದರು.

ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಚರಿಸಲಾದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಸಂಘದ ನಿರ್ದೇಶಕರು, 35ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. ಇದೇ ವೇಳೆ ಆಟೋಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ ಗೌರಿ–ಗಣೇಶ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅರಿಶಿನ–ಕುಂಕುಮ, ಹೂ–ಬಳೆ ವಿತರಣೆ ಮಾಡಲಾಯಿತು.

ಧರ್ಮಸ್ಥಳದ ಅಪಪ್ರಚಾರಕ್ಕೆ ಸರ್ಕಾರ ತಕ್ಷಣ ಕಡಿವಾಣ ಹಾಕಲಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹ

ಧರ್ಮಸ್ಥಳ, ಆ.17– ಧರ್ಮಸ್ಥಳ ಗ್ರಾಮದಲ್ಲಿ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡ (ಎಸ್.ಐ.ಟಿ) ನಡೆಸುತ್ತಿರುವ ತನಿಖೆಯ ನೆಪದಲ್ಲಿ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಕೆಲವು ದಿನಗಳಿಂದ ಸಮೂಹ ಮಾಧ್ಯಮಗಳಲ್ಲಿ ಅಪಪ್ರಚಾರ ನಡೆಯುತ್ತಿದೆ. ಇದಕ್ಕೆ ಸರ್ಕಾರ ತಕ್ಷಣ ಕಡಿವಾಣ ಹಾಕಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು.

ಧರ್ಮಸ್ಥಳಕ್ಕೆ ಭಾನುವಾರ ಭೇಟಿ ನೀಡಿ ಶ್ರೀಮಂಜುನಾಥ ಸ್ವಾಮಿಯ ದರ್ಶನ ಪಡೆದು ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ಧರ್ಮಸ್ಥಳ ಕ್ಷೇತ್ರ, ಇಲ್ಲಿನ ಅಣ್ಣಪ್ಪಸ್ವಾಮಿ ಹಾಗೂ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಕುರಿತು ಸಮೂಹ ಮಾಧ್ಯಮಗಳಲ್ಲಿ ಆಧಾರರಹಿತ ಆರೋಪ ಮಾಡಲಾಗುತ್ತಿದೆ. ಸುಳ್ಳು ಸುದ್ದಿ ಪ್ರಸಾರ ಮಾಡಲಾಗುತ್ತಿದೆ. ಇದರಿಂದ ಅಸಂಖ್ಯಾತ ಭಕ್ತರು ಹಾಗೂ ಅಭಿಮಾನಿಗಳಲ್ಲಿ ಗೊಂದಲ ಮೂಡಿದೆ ಎಂದರು.

ಎಸ್.ಐ.ಟಿ. ತನಿಖೆಯನ್ನು ಬಿಜೆಪಿ ಸ್ವಾಗತಿಸುತ್ತದೆ. ಆದರೆ, ತನಿಖೆ ಪಾರದರ್ಶಕವಾಗಿ ನಡೆಯಬೇಕು ಎಂದು ಅವರು ಸಲಹೆ ನೀಡಿದರು. ಕ್ಷೇತ್ರದ ಕುರಿತು ಷಡ್ಯಂತ್ರ ನಡೆಸಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಆದರೆ, ಈ ಬಗ್ಗೆ ಯಾವುದೇ ಮಾಹಿತಿಯನ್ನು ಅವರು ಬಹಿರಂಗಪಡಿಸಿಲ್ಲ. ಈ ಷಡ್ಯಂತ್ರದ ಹಿಂದೆ ಯಾರಿದ್ದಾರೆ ಎಂಬ ಕುರಿತು ತನಿಖೆ ಯಾಗಬೇಕು. ಸಾಕ್ಷಿ ದೂರುದಾರನ ಹಿನ್ನೆಲೆ ಹಾಗೂ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡುವವರ ಕುರಿತೂ ತನಿಖೆ ಯಾಗಲಿ ಎಂದು ಅವರು ಒತ್ತಾಯಿಸಿದರು.



ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತು ಹಾಕಿದ ಪ್ರಕರಣ ಕಪೋಲಕಲ್ಪಿತ. 17 ಕಡೆಗಳಲ್ಲಿ ಹೊಂಡ ತೋಡಿದರೂ ಸಾಕ್ಷಿ, ಪುರಾವೆ ಏನೂ ಸಿಗಲಿಲ್ಲ. ಪ್ರಕರಣದ ಹಿಂದೆ ವ್ಯವಸ್ಥಿತ ಷಡ್ಯಂತ್ರ ಇರುವುದು, ಅಪಪ್ರಚಾರ ಹಾಗೂ ಶ್ರದ್ಧಾಭಂಗದ ಹುನ್ನಾರವೂ ನಡೆದಿದೆ ಎಂದು ಅವರು ಆರೋಪಿಸಿದರು.

ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಹರೀಶ್ ಪೂಂಜ, ಭಾಗೀರಥಿ ಮುರುಳ್ಯ, ಡಾ.ವೈ.ಭರತ್ ಶೆಟ್ಟಿ, ವೇದವ್ಯಾಸ ಕಾಮತ್, ರಾಜೇಶ್ ನಾಯ್ಕ್ ಉಳಿಪಾಡಿ, ಉಮಾನಾಥ ಕೋಟ್ಯಾನ್, ಯಶಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ಗುರುರಾಜ್ ಗಂಟಿಹೋಳಿ, ಕಿರಣ್ ಕೊಡ್ಗಿ, ಎಸ್.ಆರ್. ವಿಶ್ವನಾಥ್, ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಧನಂಜಯ ಸರ್ಜಿ, ಕಿಶೋರ್ ಕುಮಾರ್ ಬೊಟ್ಯಾಡಿ, ಪ್ರತಾಪಸಿಂಹ ನಾಯಕ್, ರವಿಕುಮಾರ್ ದಕ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಸತೀಶ್ ಕುಂಪಲ, ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಘಟಕದ ಅಧ್ಯಕ್ಷ ನಂದನ ಮಲ್ಯ ಹಾಗೂ ಬಿ.ಜೆ.ಪಿ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಳಿಕ ಬಿ.ವೈ ವಿಜಯೇಂದ್ರ ಅವರು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

ಬಿಜೆಪಿ ತನ್ನ ರಾಜಕೀಯ ಲಾಭಕ್ಕಾಗಿ ಧರ್ಮಸ್ಥಳ ಪ್ರಕರಣವನ್ನು ಬಳಸಿಕೊಳ್ಳುತ್ತಿದೆ

ಡಿಸಿಎಂ ಡಿ.ಕೆ.ಶಿವಕುಮಾರ್ ಆರೋಪ

ಬೆಂಗಳೂರು, ಆ.17– ಬಿಜೆಪಿ ತನ್ನ ರಾಜಕೀಯ ಲಾಭಕ್ಕಾಗಿ ಧರ್ಮಸ್ಥಳ ಪ್ರಕರಣವನ್ನು ಬಳಸಿಕೊಳ್ಳುತ್ತಿದೆ ಎಂದು ಡಿಸಿಎಂ ಡಿಕೆ.ಶಿವಕುಮಾರ್ ಆರೋಪಿಸಿದ್ದಾರೆ.

ದೂರು ದಾಖಲಾಗುವಾಗ ಬಿಜೆಪಿ ಒಂದು ಮಾತನ್ನೂ ಹೇಳಲಿಲ್ಲ. ಈಗ ರಾಜಕೀಯ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅವರು ಹಿಂದುತ್ವವನ್ನು ಅವರ ಮನೆ ಆಸ್ತಿ ಎಂದು ಭಾವಿಸಿದ್ದಾರೆ. ಇದು ಯಾರೊಬ್ಬರ ಆಸ್ತಿಯಲ್ಲ. ಅವರವರ ಭಕ್ತಿ, ನಂಬಿಕೆ ಭಾವನೆಗೆ ಸಂಬಂಧಿಸಿದ್ದು. ಬಿಜೆಪಿಯವರದ್ದು ರಾಜಕಾರಣ ಬಿಟ್ಟರೆ ಬೇರೇನೂ ಇಲ್ಲ ಎಂದು ಹೇಳಿದ್ದಾರೆ.ಮುಸುಕುಧಾರಿ ದೂರು ಕೊಟ್ಟ ದಿನ ಬಿಜೆಪಿಯವರು ಯಾಕೆ ಮಾತನಾಡಲಿಲ್ಲ? ಆತನ ದೂರು ಸರಿಯಿಲ್ಲ ಎಂದು ಯಾಕೆ ಹೇಳಲಿಲ್ಲ? ಎಸ್‌ಐಟಿ ರಚಿಸಿದ ಮೊದಲ ದಿನ ಯಾಕೆ ಮಾತನಾಡಲಿಲ್ಲ. ನಮಗೆ ರಾಜಕೀಯಕ್ಕೆ ಧರ್ಮಸ್ಥಳ ಬೇಡ. ಧರ್ಮಸ್ಥಳದ ಗೌರವ ಕಾಪಾಡುವುದು ನಮ್ಮ ಚಿಂತನೆ. ತಪ್ಪು ಯಾರೇ ಮಾಡಿದ್ದರೂ ಶಿಕ್ಷೆ ಆಗಲಿ ಎನ್ನುವವರು ನಾವು. ನ್ಯಾಯಾಲಯದ ಮುಂದೆ ದೂರು ನೀಡಿದ ನಂತರವೂ ಸರ್ಕಾರ ತನಿಖೆ ಮಾಡದಿದ್ದರೇ ಬಿಜೆಪಿಯವರು ಏನು ಹೇಳುತ್ತಿದ್ದರು, ಅವರೇ ಟೀಕೆ ಮಾಡುತ್ತಿರಲಿಲ್ಲವೇ? ಈಗ ಈ ರೀತಿ ರಾಜಕಾರಣ ಮಾಡುತ್ತಿದ್ದು, ನಾವು ಇದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು.

ಮುಸುಕುಧಾರಿ ದೂರುದಾರನಿಗೆ ಮಂಪರು ಪರೀಕ್ಷೆ ಮಾಡಬೇಕು ಎಂಬ ಬೇಡಿಕೆ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ಅವರು ಏನಾದರೂ ಆಗ್ರಹ ಮಾಡಲಿ, ಮಂಪರು ಪರೀಕ್ಷೆ ಅಥವಾ ಬೇರೆ ಯಾವುದೇ ತನಿಖೆಗೆ ಬೇಕಾದರೂ ಆಗ್ರಹಿಸಲಿ. ಅದು ತಪ್ಪಲ್ಲ. ಎಸ್‌ಐಟಿ ತನಿಖೆ ಸ್ವಾಗತಿಸಿದವರು ಇಂದು ಈ ರೀತಿ ಮಾತನಾಡುತ್ತಿದ್ದಾರೆ. ಎಷ್ಟು ಗುಂಡಿ ತೆಗೆಯಬೇಕು, ಬೇಡ ಎಂದು ತನಿಖಾಧಿಕಾರಿಗಳು ನಿರ್ಧರಿಸುತ್ತಾರೆ. ಅವರ ತನಿಖೆಯಲ್ಲಿ ನಾವೇಕೆ ಹಸ್ತಕ್ಷೇಪ ಮಾಡಬೇಕು? ಎಂದು ಮರುಪ್ರಶ್ನಿಸಿದರು.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಡೆಸುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜೈನ ಸಮುದಾಯದಿಂದ ಪ್ರತಿಭಟನೆ



ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ದಿಗಂಬರ ಜೈನ ಸಮುದಾಯದಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಆ.17(ಎಂಟಿವೈ)– ಧರ್ಮಸ್ಥಳ ಹಾಗೂ ಜೈನ ಧರ್ಮದ ಬಗ್ಗೆ ಅಪಪ್ರಚಾರ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ದಿಗಂಬರ ಜೈನ ಸಮುದಾಯದಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮಹಾತ್ಮ ಗಾಂಧಿ ವೃತ್ತದ ಬಳಿ ಮೌನ ಪ್ರತಿಭಟನೆ ನಡೆಸಿದ ಜೈನ ಸಮುದಾಯ ದಿಗಂಬರ ಪಂಗಡದ ವಿವಿಧ ಸಂಘಟನೆಗಳ ಕಾರ್ಯಕರ್ತರು, ಧರ್ಮವನ್ನು ಉಳಿಸಿ, ಶ್ರೀ ಕ್ಷೇತ್ರಕ್ಕೆ ಜಯವಾಗಲಿ, ಧರ್ಮ ವಿರೋಧಿಗಳ ವಿರುದ್ಧ ಕ್ರಮ ವಹಿಸಿ, ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಬೇಡ, ಅಲ್ಪಸಂಖ್ಯಾತ ಜೈನ ಧರ್ಮ ಉಳಿಸಿ, ಬೆಳೆಸಿ, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಗೌರವಿಸಿ ಎಂದು ಘೋಷಣೆ ಕೂಗಿದರು.

ಇದೇ ವೇಳೆ 108 ಆಚಾರ್ಯ ಪುಣ್ಯ ಸಾಗರ ಮುನಿ ಮಾತನಾಡಿ, ಧರ್ಮ ಇಲ್ಲದೆ ಭಾರತ ಊಹಿಸಲು ಅಸಾಧ್ಯ. ಆದರೆ ಸುಳ್ಳು ಆರೋಪದಿಂದ ಅದಕ್ಕೆ ಹಾನಿಯಾಗುತ್ತದೆ. ರಾಗಾ, ದ್ವೇಷಗಳಿದ್ದಾಗ ಪ್ರತಿಭಟನೆಗಳಾಗುತ್ತವೆ. ಧರ್ಮಸ್ಥಳ ಪ್ರಾಚೀನ ಮಂದಿರ. ಮತ್ತೊಬ್ಬರ ಮೇಲೆ ಆರೋಪ ಹೊರಿಸುವುದು ಪಾಪ ಕಾರ್ಯ, ಹೀಗಾಗಿ ಸುಳ್ಳು ಆರೋಪ ಮಾಡದೇ ಸತ್ಯಮಾರ್ಗದಿಂದ ನಡೆಯಿರಿ ಎಂದು ಹೇಳಿದರು.

ಸಮಾಜದ ಅಧ್ಯಕ್ಷ ಎಂ.ಎನ್. ಸುನೀಲ್ ಕುಮಾರ್ ಮಾತನಾಡಿ, ಕೆಲವು ಯೂಟ್ಯೂಬರ್‌ಗಳು ಹಾಗೂ ಕಿಡಿಗೇಡಿಗಳು ಅನವಶ್ಯಕವಾಗಿ ಧರ್ಮಸ್ಥಳ ಕ್ಷೇತ್ರದ ಹೆಸರನ್ನು ಹಾಳು ಮಾಡುತ್ತಿದ್ದಾರೆ. ವೀರೇಂದ್ರ ಹೆಗ್ಗಡೆ ಮನೆತನಕ್ಕೆ ಮಸಿ ಬಳಿಯಲು ಪ್ರಯತ್ನವಾಗುತ್ತಿದೆ. ಇದು ಜೈನ ಸಮುದಾಯಕ್ಕೆ ನೋವುಂಟು ಮಾಡಿದೆ. ಈ ರೀತಿ ಅಪಪ್ರಚಾರ ಮಾಡುವವರ ವಿರುದ್ಧ ಸರ್ಕಾರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಾಜದ ಮುಖಂಡರಾದ ಹರೀಶ್ ಹೆಗ್ಡೆ, ಸುಮಾ ದಯಾಕರ್, ಲಕ್ಷ್ಮೀಶ್ ಬಾಬು ಭಾಗವಹಿಸಿದ್ದರು.

ಡಾ.ಭ.ನಾಗರಾಜರ 'ನಾಸ್ಟಾಲ್‌ಜಿಯಾ', 'ವಿಟ್ನೆಸ್' ಕೃತಿಗಳ ಬಿಡುಗಡೆ



ಹಿರಿಯ ವೈದ್ಯಲೇಖಕ ಡಾ.ಭ.ನಾಗರಾಜ್ ರಚಿತ 'ನಾಸ್ಟಾಲ್‌ಜಿಯಾ' ಮತ್ತು 'ವಿಟ್ನೆಸ್' ಕೃತಿಗಳನ್ನು ಕವಯಿತ್ರಿ ಸುಕನ್ಯಾ ಮಾರುತಿ ಲೋಕಾರ್ಪಣೆಗೊಳಿಸಿದರು.

ಮೈಸೂರು, ಆ.17(ಎಂಕೆ)– ಹಿರಿಯ ವೈದ್ಯಲೇಖಕ ಡಾ.ಭ.ನಾಗರಾಜ್ ರಚಿತ 'ನಾಸ್ಟಾಲ್‌ಜಿಯಾ' ಮತ್ತು 'ವಿಟ್ನೆಸ್' ಕೃತಿಗಳನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಭದ್ರಶೆಟ್ಟಿ ಬಳಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕವಯತ್ರಿ ಸುಕನ್ಯಾ ಮಾರುತಿ ಎರಡು ಇಂಗ್ಲಿಷ್ ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರೂ ಪುಸ್ತಕ ಓದುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಪುಸ್ತಕಗಳು ಜ್ಞಾನದ ಮೂಲ. ಓದುವಿಕೆಯಿಂದ ಹೊಸ ವಿಷಯ ಕಲಿಯಬಹುದು. ಜೀವನದ ಮೌಲ್ಯಗಳು ತಿಳಿಯಬಹುದು. ಸಮಾಜದ ಒಳಿತಿಗೆ ಬೇಕಾದ ಅಂಶಗಳು, ಬದುಕಿನಲ್ಲಿ ಅನುಸರಿಸಬೇಕಾದ ನೀತಿಗಳು ಅರಿಯಬಹುದು ಎಂದರು.

'ಯಾವ ಭಾಷೆಯೂ ಅಸಮರ್ಥವಲ್ಲ, ಸಮರ್ಥರೊಬ್ಬರು ಬರುವ ತನಕ' ಎಂದು ಕುವೆಂಪು ಹೇಳಿದ್ದಾರೆ. ಅದರಂತೆ ಪ್ರತಿಯೊಂದು ಭಾಷೆಗೆ ತನ್ನದೆ ಸ್ಥಾನಮಾನವಿದೆ. ಕನ್ನಡ ಭಾಷೆ ಶ್ರೀಮಂತವಾದ ಸಾಹಿತ್ಯಿಕ ಪರಂಪರೆ ಹೊಂದಿದೆ ಎಂದು ತಿಳಿಸಿದರು.

'ನಾಸ್ಟಾಲ್‌ಜಿಯಾ' ಕೃತಿ ಕುರಿತು ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಮಾತನಾಡಿ, ಲೇಖಕರು ವೃತ್ತಿಯಲ್ಲಿ ವೈದ್ಯರಾಗಿ ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದಾರೆ. ತಮ್ಮ ಕೃತಿಯಲ್ಲಿ ಸತ್ಯಕಥೆ ದಾಖಲಿದ್ದಾರೆ. ಭಾವನಾತ್ಮಕ ಸಂಬಂಧಗಳನ್ನು ನೆನಪಿಸಿದ್ದಾರೆ. ಅಲ್ಲಲ್ಲಿ ಉಪಮೇಯ ಬಳಸಿದ್ದು, ಭಾಷಾ ಕೌಶಲ ಚೆನ್ನಾಗಿದೆ. ಇದೊಂದು ಅರ್ಥಪೂರ್ಣವಾದ ಕೃತಿಯಾಗಿದ್ದು, ಎಲ್ಲರೂ ಓದಬೇಕು ಎಂದರು.

ಮಾನಸಿಕ ಸ್ಥಿರತೆ ಕಳೆದುಕೊಳ್ಳುತ್ತಿದ್ದಾರೆ: ಇಂದಿನ ಯುವಪೀಳಿಗೆ ಮೊಬೈಲ್‌ನಲ್ಲಿ ಮುಳಗಿ ಮಾನಸಿಕ ಸ್ಥಿರತೆ ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಪುಸ್ತಕ ಓದುವುದನ್ನು ಹವ್ಯಾಸವಾಗಿಸಿಕೊಳ್ಳಬೇಕು. ಸಾಹಿತ್ಯ ಓದುವ ಮನೋಭಾವ ಬೆಳೆಸಿಕೊಳ್ಳಬೇಕು. ಲೇಖಕರು ತಮ್ಮ 82ರ ಹರೆಯದಲ್ಲೂ ಕೃತಿ ರಚಿಸುವ ಮೂಲಕ ಮಾದರಿಯಾಗಿದ್ದಾರೆ ಎಂಬುದನ್ನು ಅರಿಯಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ಭ.ನಾಗರಾಜ್ ಅವರು ವೈದ್ಯ ಲೇಖಕರಾಗಿ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಅವರ ಕಾವ್ಯ, ಕವಿತೆಗಳನ್ನು ಸಂಕಲನವಾಗಿಸಿ ಎರಡು ಕೃತಿಗಳನ್ನು ಹೊರತಂದಿದ್ದಾರೆ. ಎಲೆಮರೆ ಕಾಯಿಯಂತೆ ಸಾಹಿತ್ಯದಾಚೆಗೆ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ ಎಂದು ಪ್ರಶಂಸಿಸಿದರು. ಲೇಖಕ ಡಾ.ಭನಾಗರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಧ್ಯಾಪಕಿ ಬಿ.ಎಂ.ಸುಷ್ಮಾ ಉಪಸ್ಥಿತರಿದ್ದರು.

ವಾಹನಗಳ ಮಾಲಿನ್ಯ ತಡೆಗಾಗಿ ಸೆಸ್ಕ್‌ನಲ್ಲಿ ಇವಿ ಸೆಲ್ ಸ್ಥಾಪಿಸಲು ಚಿಂತನೆ

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು



ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಆದಿತ್ಯ ಟೆಕ್ ಪಾರ್ಕ್ ಆವರಣದಲ್ಲಿ ಅತ್ಯಧಿಕ ಸಾಮರ್ಥ್ಯದ ಖಾಸಗಿ ಇವಿ ಚಾರ್ಜಿಂಗ್ ಸ್ಟೇಷನ್ ಅನ್ನು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಉದ್ಘಾಟಿಸಿದರು.

ಮೈಸೂರು,ಆ.17(ಎಂಟಿವೈ)– ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಭವಿಷ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಾಗುವುದರಿಂದ ಸೆಸ್ಕ್‌ನಲ್ಲಿ ಇವಿ ಸೆಲ್ ಸ್ಥಾಪಿಸಲು ಚಿಂತನೆ ನಡೆಸಲಾಗಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ತಿಳಿಸಿದ್ದಾರೆ.

ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಆದಿತ್ಯ ಟೆಕ್ ಪಾರ್ಕ್ ಆವರಣದಲ್ಲಿ ಬೆಂಗಳೂರಿನ ಎಪಿಕ್ ಎಂಟರ್‌ಪ್ರೈಸನ್ ಸಂಸ್ಥೆ ಝಿಯಾನ್ ಎಲೆಕ್ಟ್ರಿಕ್ ಸಂಸ್ಥೆ ಸಹಯೋಗದಲ್ಲಿ ಸ್ಥಾಪಿಸಿರುವ ಅತ್ಯಧಿಕ ಸಾಮರ್ಥ್ಯದ ಖಾಸಗಿ ಇವಿ ಚಾರ್ಜಿಂಗ್ ಸ್ಟೇಷನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಭವಿಷ್ಯದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಗಣನೀಯ ಸಂಖ್ಯೆಯಲ್ಲಿ ಹೆಚ್ಚಾಗುವುದು ಖಚಿತವಾಗಿದೆ. ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆ ಹೆಚ್ಚಾಗಬೇಕಾಗಿದೆ. ಇದಕ್ಕಾಗಿ ಇವಿ ಚಾರ್ಜಿಂಗ್ ಕೇಂದ್ರ ಹೆಚ್ಚಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸೆಸ್ಕ್‌ನಲ್ಲಿ ಇವಿ ಸೆಲ್ ಸ್ಥಾಪಿಸಲು ಚಿಂತನೆ ನಡೆಸಲಾಗಿದೆ. ಇವಿ ವಾಹನಗಳ ಬಳಕೆಯ ಮೂಲಕ ಎಲ್ಲರೂ ಹಸಿರು ಸಂಚಾರ ಕ್ರಾಂತಿಗೆ ಕೈಜೋಡಿಸಬೇಕು. ಇದರಿಂದ ಗ್ರೀನ್ ಎನರ್ಜಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ 5,880 ಪಬ್ಲಿಕ್ ಚಾರ್ಜಿಂಗ್ ಸ್ಟೇಷನ್‌ಗಳಿವೆ. ಮೈಸೂರು ಇವಿ ಹಬ್ ಆಗಿಯೂ ಬೆಳೆಯುತ್ತಿದ್ದು, ಮೈಸೂರಿನಲ್ಲಿ ಪ್ರಸ್ತುತ 57 ಪಬ್ಲಿಕ್ ಚಾರ್ಜಿಂಗ್ ಸ್ಟೇಷನ್ಸ್ ಹಾಗೂ 20 ಖಾಸಗಿ ಚಾರ್ಜಿಂಗ್ ಕೇಂದ್ರಗಳಿದ್ದು, ಟೆಂಯರ್–2 ಇವಿ ಹಬ್ ಆಗಿ ವೇಗವಾಗಿ ಬೆಳೆಯುತ್ತಿದೆ. ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಆದಿತ್ಯ ಟೆಕ್ ಪಾರ್ಕ್ ಆವರಣದಲ್ಲಿ ನೂತನವಾಗಿ ಆರಂಭಿಸಿರುವ ಖಾಸಗಿ ಇವಿ ಚಾರ್ಜಿಂಗ್ ಸ್ಟೇಷನ್ ಮೈಸೂರು ಜಿಲ್ಲೆಯ ಮೊದಲ ಇ–ಬಸ್ ಚಾರ್ಜಿಂಗ್ ಕೇಂದ್ರವಾಗಿದ್ದು, 180 ಕಿಲೋವ್ಯಾಟ್ ಸಾಮರ್ಥ್ಯದ ಎರಡು ಚಾರ್ಜಿಂಗ್ ಹಬ್‌ಗಳನ್ನು ಈ ಚಾರ್ಜಿಂಗ್ ಸ್ಟೇಷನ್ ಒಳಗೊಂಡಿದೆ ಎಂದರು.

ಈ ಸಂದರ್ಭದಲ್ಲಿ ಸೆಸ್ಕ್‌ನ ತಾಂತ್ರಿಕ ವಿಭಾಗದ ನಿರ್ದೇಶಕ ಡಿ.ಜೆ. ದಿವಾಕರ್, ಸೆಸ್ಕ್‌ನ ಐಟಿ ಮತ್ತು ಎಂಐಎಸ್ ವಿಭಾಗದ ಪ್ರಧಾನ ವ್ಯವಸ್ಥಾಪಕ ರಾಮಸ್ವಾಮಿ ಸೆಸ್ಕ್ ನಿವೃತ್ತ ವ್ಯವಸ್ಥಾಪಕ ನಿರ್ದೇಶಕಿ ಜಿ. ಶೀಲಾ, ಝಿಯಾನ್ ಚಾರ್ಜಿಂಗ್ ಸ್ಟೇಷನ್‌ನ ಮುಖ್ಯಸ್ಥ ಅಖಿಲ್ ಕೃಷ್ಣನ್, ಬೆಂಗಳೂರಿನ ಎಪಿಕ್ ಎಂಟರ್‌ಪ್ರೈಸಸ್‌ನ ಚಿರಾಗ್ ಹಾಗೂ ವಿಶಾಲ್ ಇತರರಿದ್ದರು.

ಇಂದಿನಿಂದ ದೇವಲಾಪುರ ಮಠದಲ್ಲಿ ವಿಶೇಷ ಪ್ರವಚನ

ಮೈಸೂರು, ಆ.17– ತಾಲೂಕಿನ ದೇವಲಾಪುರ ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಸೋಮವಾರ (ಆ.18)ದಿಂದ ಆ.22ರವರೆಗೆ ಸಂಜೆ 6.30ರಿಂದ 9.30ರವರೆಗೆ ವಿಶೇಷ ಪ್ರವಚನ ಆಯೋಜಿಸಲಾಗಿದೆ.

ದೇವನೂರು ಗುರುಮಲ್ಲೇಶ್ವರ ಮಠಾಧೀಶ ಮಹಾಂತ ಸ್ವಾಮೀಜಿ ಹಾಗೂ ಬರಡನಪುರ ಮಹಾಂತೇಶ್ವರ ಮಠಾಧೀಶ ಪರಶಿವಮೂರ್ತಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಸೋಮವಾರ ರಾತ್ರಿ 7.30ಕ್ಕೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಳಿಕ ಶರಣು ವಿಶ್ವ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಪ್ರವಚನ ನೀಡಲಿದ್ದಾರೆ. ರೂಪಾ ಕುಮಾರಸ್ವಾಮಿ ವಚನ ಪಾಠಶಾಲಾ ಉದ್ಘಾಟಿಸಲಿದ್ದಾರೆ.

ಆ.19ರಂದು ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶರಣೆ ಜಯದೇವಿ ತಾಯಿ ಪ್ರವಚನ ನೀಡುವರು. ಆ.20ರಂದು ಗಾವಡಗೆರೆ ಮಠಾಧೀಶ ನಟರಾಜ ಸ್ವಾಮೀಜಿ ಹಾಗೂ ಬಸಳ್ಳಿಹುಂಡಿ ಮಠಾಧೀಶ ಬಸವರಾಜ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪ್ರಶಾಂತ್ ದೇವನೂರು ಪ್ರವಚನ ನೀಡುವರು. ಆ.21ರಂದು ಮೈಸೂರು ಮಡಿವಾಳ ಮಠದ ಇಮ್ಮಡಿ ಮಡಿವಾಳಸ್ವಾಮೀಜಿ ಸಾನ್ನಿಧ್ಯದಲ್ಲಿ ಜಾದೂ, ಯೋಗ ಹಾಗೂ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ. ಆ.22ರಂದು ಕುಂತೂರು ಮಠಾಧ್ಯಕ್ಷ ಶಿವಪ್ರಭು ಸ್ವಾಮೀಜಿ ಸಾನ್ನಿಧ್ಯದಲ್ಲಿ ದೇಚಿ ಕ್ರಿಯೇಷನ್ಸ್ ಹಾಗೂ ಶರಣ ಸಾಹಿತ್ಯ ಪರಿಷತ್ ವತಿಯಿಂದ ರಂಗಭೂಮಿ ಕಲಾ ಪ್ರದರ್ಶನ ನಡೆಯಲಿದೆ ಎಂದು ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಜಡೇಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳೂರು ಡ್ರ್ಯಾಗನ್ಸ್ ಮಣಿಸಿದ ಬೆಂಗಳೂರು ಬ್ಲಾಸ್ಟರ್ಸ್



ಮೈಸೂರು ವಾರಿಯರ್ಸ್–ಶಿವಮೊಗ್ಗ ಲಯನ್ಸ್ ಪಂದ್ಯ ಮಳೆಯಿಂದ ರದ್ದು: ಉಭಯ ತಂಡಗಳಿಗೆ ತಲಾ ಒಂದು ಅಂಕ

ಮೈಸೂರು, ಆ.17(ವಿವಿಹೆಚ್)– ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆಯಬೇಕಿದ್ದ ಮೈಸೂರು ವಾರಿಯರ್ಸ್ ಮತ್ತು ಶಿವಮೊಗ್ಗ ಲಯನ್ಸ್ ನಡುವಣ ಪಂದ್ಯ ಮಳೆಯಿಂದ ರದ್ದಾಗಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 167 ರನ್ ಗಳಿಸಿ, ಎದುರಾಳಿ ತಂಡಕ್ಕೆ 168 ರನ್‌ಗಳ ಟಾರ್ಗೆಟ್ ನೀಡಿತು. ಈ ವೇಳೆ ಮಳೆ ಬಂದ ಕಾರಣ ಲಯನ್ಸ್ ಬ್ಯಾಟಿಂಗ್‌ಗೆ ಇಳಿಯಲಿಲ್ಲ. ಮಳೆಯಿಂದ ಪಂದ್ಯ ರದ್ದಾದ ಕಾರಣ ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಯಿತು. ಇತ್ತ ಮೈಸೂರು ತಾನಾಡಿದ ಐದು ಪಂದ್ಯಗಳಲ್ಲಿ 2 ಸೋಲು, 2 ಡ್ರಾ ಮತ್ತು 1 ಗೆಲುವಿನೊಂದಿಗೆ 4 ಅಂಕ ಗಳಿಸಿ ಐದನೇ ಸ್ಥಾನದಲ್ಲಿದೆ. ಇತ್ತ ಶಿವಮೊಗ್ಗ 5 ಪಂದ್ಯಗಳಲ್ಲಿ 4 ಸೋಲು ಮತ್ತು 1 ಡ್ರಾ ನೊಂದಿಗೆ 1 ಅಂಕ ಪಡೆದು ಕೊನೆಯ ಸ್ಥಾನದಲ್ಲಿದೆ.

ಮೈಸೂರು, ಆ.17(ವಿವಿಹೆಚ್)– ಎಲ್.ಆರ್.ಚೇತನ್ ಅವರ ಅಮೋಘ ಅರ್ಧ ಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರ್ಯಾಗನ್ಸ್ ತಂಡವನ್ನು 3 ವಿಕೆಟ್‌ಗಳ ಅಂತರದಿಂದ ಮಣಿಸಿದೆ.

ಇಲ್ಲಿನ ಗ್ಲೇಡ್ಸ್ ಮೈದಾನದಲ್ಲಿ ಭಾನುವಾರ(ಆ.17) ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮಂಗಳೂರು ತಂಡಕ್ಕೆ ಉತ್ತಮ ಆರಂಭ ದೊರೆಯಿತು. ಲೋಚನ್ ಗೌಡ 49(32) ಹಾಗೂ ಬಿ.ಆರ್.ಶರತ್ 45(22) ಭದ್ರ ಬುನಾದಿ ಹಾಕಿಕೊಟ್ಟರು. ಬಳಿಕ ಬಂದ ತಿಪ್ಪಾರೆಡ್ಡಿ 12(15), ಮ್ಯಾಕ್ನಿಲ್ 12(11), ಆದರ್ಶ್ ಪ್ರಜ್ವಲ್ 5(4), ಕ್ರಾಂತಿ ಕುಮಾರ್ 1(3) ಗಳಿಸಿ ಔಟಾದರು. ಕೊನೆಯಲ್ಲಿ ಹೋರಾಡಿದ ನಾಯಕ ಶ್ರೇಯಸ್ ಗೋಪಾಲ್ ಅಜೇಯ 12(14), ಶಿವರಾಜ್ ಔಟಾಗದೇ 33(15) ರನ್ ಗಳಿಸಿದರು. ಮಂಗಳೂರು ಅಂತಿಮವಾಗಿ 19 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 174 ರನ್ ಬಾರಿಸಿ ಎದುರಾಳಿ ತಂಡಕ್ಕೆ 175 ರನ್‌ಗಳ ಗುರಿ ನೀಡಿತು.

ಬೆಂಗಳೂರು ಪರ ಪ್ರತೀಕ್ ಜೈನ್ ಹಾಗೂ ಮೋಸಿನ್ ಖಾನ್ ತಲಾ 2 ವಿಕೆಟ್ ಪಡೆದು ಗಮನ ಸೆಳೆದರು.ಎಂ.ಜಿ ನವೀನ್ ಹಾಗೂ ವಿದ್ಯಾಧರ್ ಪಾಟೀಲ್ ಒಂದೊಂದು ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ಬೆಂಗಳೂರು ತಂಡ ಆರಂಭಿಕ ಆಟಗಾರ ಎಲ್.ಆರ್.ಚೇತನ್ ಪ್ರಮುಖ ಪಾತ್ರ ವಹಿಸಿದರು. ಚೇತನ್ 46ಎಸೆತ ಎದುರಿಸಿ 3 ಬೌಂಡರಿ, 6 ಸಿಕ್ಸರ್ ಸಹಿತ 74 ರನ್ ಬಾರಿಸಿದರು. ಇವರಿಗೆ ರೋಹನ್ ಪಾಟೀಲ್ 26(13), ಮಯಾಂಕ್ ಅಗರ್‌ವಾಲ್ 20(9), ಭುವನ್ ರಾಜು 14(15) ರನ್ ಗಳಿಸಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ನಾಯಕ ಶುಭಾಂಗ್ ಹೆಗ್ಡೆ 2(3), ಸೂರಜ್ 21(12), ರೋಹನ್ ನವೀನ್ 3(4), ನವೀನ್ ಎಂ.ಜಿ ಔಟಾಗದೇ 4(8) ಮತ್ತು ವಿದ್ಯಾಧರ್ ಪಾಟೀಲ್ ಅಜೇಯ 6(3) ರನ್ ಕಲೆಹಾಕಿ ಗೆಲುವಿನ ನಗೆ ಬೀರಿದರು. ಅಂತಿಮವಾಗಿ ಬೆಂಗಳೂರು 18.30 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 175 ರನ್ ಗಳಿಸಿ, 3 ವಿಕೆಟ್‌ಗಳ ಅಂತರದಿಂದ ಗೆದ್ದು ಬೀಗಿತು.

ಮಂಗಳೂರು ಪರ ಕ್ರಾಂತಿ ಕುಮಾರ್ 2 ವಿಕೆಟ್, ಶ್ರೇಯಸ್ ಗೋಪಾಲ್, ಮ್ಯಾಕ್ನಿಲ್, ಸಚಿನ್ ಶಿಂದೆ ಹಾಗೂ ಶ್ರೀವಸ್ತ ಆಚಾರ್ಯ ತಲಾ 1 ವಿಕೆಟ್ ಪಡೆದರು.

ಪಂದ್ಯಶ್ರೇಷ್ಠ: ಎಲ್.ಆರ್.ಚೇತನ್

ಇಂದಿನ ಪಂದ್ಯಗಳು

ಪಂದ್ಯ–15: ಮೈಸೂರು ವಾರಿಯರ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 3.15)

ಪಂದ್ಯ–16: ಗುಲ್ಬರ್ಗಾ vs ಮಿಸ್ಟಿಕ್ಸ್ ಹುಬ್ಬಳ್ಳಿ ಟೈಗರ್ಸ್ (ಸಂಜೆ 7.15)

ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ ಮೊದಲನೇ ತಿಂಗಳನ್ನು ಏನನ್ನುತ್ತಾರೆ?
ಗುಂಡ : ಜನವರಿ
ಟೀಚರ್ : ಗುಡ್, ಎರಡನೇ ತಿಂಗಳನ್ನು ಏನನ್ನುತ್ತಾರೆ?
ಗುಂಡ : ಫೆಬ್ರವರಿ
ಟೀಚರ್ : ವೆರಿಗುಡ್, ಒಂಬತ್ತನೇ ತಿಂಗಳನ್ನು ಏನನ್ನುತ್ತಾರೆ.
ಗುಂಡ : ಡೆಲಿವರಿ .

ಮೈಸೂರು ಮಿತ್ರ
ಸೋಮವಾರ, 18 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ನೀವು ಜೀವನದಲ್ಲಿ ಏನು ಮಾಡಲು ಬಯಸುತ್ತೀರಿ ಎಂಬುದ ಕುರಿತು ನಿಮಗೊಂದು ವೈಯಕ್ತಿಕ ಗುರಿಯಿರಬೇಕು. ಗುರಿ ಇದ್ದಾಗ, ಬದುಕು ನದಿಯಂತೆ ಹರಿಯುತ್ತದೆ. ಗುರಿ ಇಲ್ಲದಿದ್ದಾಗ ನೀರು ಬಯಲಿನಲ್ಲೆಲ್ಲಾ ತುಂಬುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ನಗುವವರು ನಾಕಕ್ಕೆ
ನಗದವರು ನರಕಕ್ಕೆ'

ನಿಮ್ಮ ಪತ್ರಗಳು

ಇ20 ಮಿಶ್ರಿತ ಇಂಧನದ ಬಗ್ಗೆ ಜಾಗೃತಿ ಅಗತ್ಯ

ಮಾನ್ಯರೆ,

ಇ20 (20% ಎಥೆನಾಲ್ + 80% ಪೆಟ್ರೋಲ್) ಮಿಶ್ರಿತ ಇಂಧನದ ಪರಿಚಯವು ಒಂದು ದೂರದೃಷ್ಟಿಯ ನಿರ್ಧಾರವಾಗಿದೆ. ಆದರೂ, ಸಾಮಾಜಿಕ ಮಾಧ್ಯಮಗಳಲ್ಲಿ ಇದರ ಕುರಿತು ಅನೇಕ ತಪ್ಪು ಮಾಹಿತಿಗಳು ಹರಡುತ್ತಿರುವುದು ಕಳವಳಕಾರಿ. ಇ20 ಇಂಧನದಿಂದಾಗಿ ವಾಹನದ ಮೈಲೇಜ್ ಕುಸಿಯುತ್ತದೆ. ವಿಮೆ ನಿರಾಕರಿಸಲಾಗುತ್ತದೆ ಎಂಬಂತಹ ಭಯ ಹುಟ್ಟಿಸುವ ಮಾತುಗಳು ಜನರಲ್ಲಿ ಗೊಂದಲ ಸೃಷ್ಟಿಸುತ್ತಿವೆ.

ಅಧಿಕೃತ ವರದಿಗಳ ಪ್ರಕಾರ, ಇ20 ಇಂಧನವು ಇ10ಕ್ಕಿಂತ ಉತ್ತಮ ವೇಗ ವರ್ಧನೆ ನೀಡುತ್ತದೆ, 30% ಕಡಿಮೆ ಇಂಗಾಲದ ಹೊರಸೂಸುವಿಕೆ ಉಂಟು ಮಾಡುತ್ತದೆ ಹಾಗೂ ವಿಮೆಯ ಮೇಲೂ ಯಾವುದೇ ಪರಿಣಾಮ ಬೀರುವುದಿಲ್ಲ. 2009ರಿಂದಲೇ ಅನೇಕ ವಾಹನ ಮಾದರಿಗಳು ಇ20 ಹೊಂದಾಣಿಕೆಗೆ ತಯಾರಾಗಿವೆ. ಇ20 ಅನಿಲದಲ್ಲಿ, ಕಬ್ಬು ಅಥವಾ ಮೆಕ್ಕೆಜೋಳ ಆಧಾರಿತ ಎಥೆನಾಲ್ ಬಳಕೆ ಮಾಡುವುದರಿಂದ ಸಾಮಾನ್ಯ ಪೆಟ್ರೋಲ್‌ಗಿಂತ 50–65% ಕಡಿಮೆ ಹಸಿರುಮನೆ ಅನಿಲ ಹೊರಸೂಸುತ್ತದೆ. ಇದರಿಂದ 736 ಲಕ್ಷ ಮೆಟ್ರಿಕ್ ಟನ್ ಕಡಿಮೆಯಾಗುವುದು ಎಂದು ಅಂದಾಜಿಸಲಾಗಿದೆ.

ಇನ್ನು ಇದು 30 ಕೋಟಿ ಮರಗಳನ್ನು ನೆಟ್ಟ ಪರಿಣಾಮಕ್ಕೆ ಸಮಾನ. ಜೊತೆಗೆ, ವಿದೇಶಿ ವಿನಿಮಯದಲ್ಲಿ ದಶಲಕ್ಷ ಕೋಟಿ ಉಳಿತಾಯವಾಗುತ್ತದೆ ಮತ್ತು ರೈತರಿಗೆ ನೇರ ಆದಾಯ ಹೆಚ್ಚಾಗುತ್ತದೆ. ಈ ಪ್ರಯೋಜನಗಳು ಪರಿಸರ ಮತ್ತು ಆರ್ಥಿಕ ಎರಡೂ ಕ್ಷೇತ್ರಗಳಲ್ಲಿ ಶಾಶ್ವತ ಪರಿಣಾಮ ಬೀರುತ್ತವೆ. ಇನ್ನು ಇ20 ಇಂಧನದ ವೈಜ್ಞಾನಿಕ ಮಾಹಿತಿಯನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜನರಿಗೆ ತಲುಪಿಸಲು ಸರ್ಕಾರ ಕಾರ್ಯಕ್ರಮ ಆಯೋಜಿಸಬೇಕು.

ವಾಹನ ತಯಾರಕರು ಹಾಗೂ ಸಂಶೋಧನಾ ಸಂಸ್ಥೆಗಳು ಇ20 ಬಳಕೆದಾರರ ನೈಜ ಮೈಲೇಜ್ ಮತ್ತು ಕಾರ್ಯಕ್ಷಮತೆ ವರದಿಗಳನ್ನು ಸಾರ್ವಜನಿಕರಿಗೆ ನಿರಂತರವಾಗಿ ಹಂಚಬೇಕು. ಅಂತಿಮವಾಗಿ, ಬ್ರೆಜಿಲ್ ಮಾದರಿಯನ್ನು ಅನುಸರಿಸಿ ಮುಂದಿನ 10–15 ವರ್ಷಗಳಲ್ಲಿ ಇ27 ಅಥವಾ ಹೆಚ್ಚು ಎಥೆನಾಲ್ ಮಿಶ್ರಣದತ್ತ ಸಾಗುವ ನೀತಿಯನ್ನು ರೂಪಿಸಬೇಕು. **–ಡಾ.ವಿಜಯಕುಮಾರ್ ಎಚ್.ಕೆ.**

ಅನಾಮುಖ

ಮಾನ್ಯರೆ,

ಹೆಸರು ಮರೆಮಾಚಿದ ಆ ದೂರುದಾರನನ್ನು 'ಅನಾಮಿಕ' ಎಂದು ಕರೆಯಲಾಗುತ್ತಿದೆ. ಹೆಸರಿನೊಂದಿಗೆ ತನ್ನ ಮುಖವನ್ನೂ ಮರೆಮಾಚಿರುವುದರಿಂದ ಆತನನ್ನು 'ಅನಾಮುಖ'ಎಂದೂ ಕರೆಯಬಹುದಲ್ಲವೇ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ನ್ಯಾಯ

ಮಾನ್ಯರೆ,

ನ್ಯಾಯದೇವತೆ
ಕುರುಡು ಎನ್ನಬಹುದೆ?
ತಪ್ಪು, ತಪ್ಪು. ಆಕೆ
ಸಹಸ್ರನೇತ್ರೆ!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ಮೈಸೂರಲ್ಲಿ ಬಡಾವಣೆಗಳ ಸ್ವಚ್ಛತೆ ಕಾಪಾಡಿ

ಮಾನ್ಯರೆ,

ಮೈಸೂರಿನಲ್ಲಿ ನಿರ್ಮಿತವಾಗಿರುವ ವಿಜಯನಗರ 4ನೇ ಹಂತ 2ನೇ ಹಂತದಲ್ಲಿ ಗಿಡಗಳು ರಸ್ತೆಯ ಇಕ್ಕೆಲಗಳಲ್ಲಿ ಕಾಡಿನ ರೀತಿಯಲ್ಲಿ ಬೆಳೆದು ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ಅಲ್ಲದೆ ಕೆಲವು ಖಾಲಿ ನಿವೇಶನಗಳು ಗಿಡಗಂಟಿಗಳಿಂದ ಮುಚ್ಚಿಕೊಂಡಿವೆ. ಈಗಾಗಲೇ ಇಲವಾಲದಲ್ಲಿ ಚಿರತೆಗಳು ಪ್ರತ್ಯಕ್ಷವಾಗಿವೆ. ಇಂತಹ ಜಾಗದಲ್ಲಿ ಕಾಡುಪ್ರಾಣಿಗಳು ಬಂದು ಬೀಡುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಬೆಳೆದಿರುವ ಕಾಡನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಕಸವನ್ನು ಮನೆಗಳಲ್ಲಿ ತೆಗೆದುಕೊಂಡು ಹೋಗಲು ವಾರಕ್ಕೆ ಒಂದು ಅಥವಾ ಎರಡು ದಿವಸಕ್ಕೆ ಒಮ್ಮೆ ಬರುವುದರಿಂದ ಪ್ರತಿ ದಿವಸ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಬೇಕೆಂದು ಮನವಿ. **–ಎ.ವಿ.ರಾಜಶೇಖರ, ಹಿರಿಯ ನಾಗರಿಕರು, ವಿಜಯನಗರ 4ನೇ ಹಂತ, ಮೈಸೂರು.**

ಕೃಷ್ಣರಾಜಸಾಗರ ಹಾಳು ಮಾಡುವುದು ಬೇಡ

ಮಾನ್ಯರೆ,

ನಮ್ಮ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಅವರ ಪರಿಕಲ್ಪನೆಗೆ ತದ್ವಿರುದ್ಧವಾಗಿ ಕೃಷ್ಣರಾಜಸಾಗರದಲ್ಲಿ ಅಮ್ಯೂಸ್ಮೆಂಟ್ ಪಾರ್ಕ್ ಯೋಜನೆಯನ್ನು ನಿರ್ಮಿಸುವುದರಿಂದ ಕೆಆರ್‌ಎಸ್ ಅನ್ನು ಕಸದ ತೊಟ್ಟಿಯಾಗಿ ಮಾರ್ಪಡಿಸುವುದು ಬೇಡ ಎಂದು ಪ್ರೊ.ಬಿ.ಆರ್.ಚಂದ್ರಶೇಖರ್ ಅವರು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಪತ್ರ ಬರೆದಿರುವುದು ತುಂಬಾ ಶ್ಲಾಘನೀಯ. ಈ ಯೋಜನೆಯಿಂದ ಪರಿಸರದ ಮೇಲೆ ಅಧಿಕವಾದ ದುಷ್ಪರಿಣಾಮ ಬೀರುವುದರಲ್ಲಿ ಯಾವುದೇ ಸಂಶಯವಿಲ್ಲ ಹಾಗೂ ಭಾರಿ ಪ್ರಮಾಣದ ತ್ಯಾಜ್ಯ ಸಂಗ್ರಹವಾಗಿ ಪ್ರತಿಕೂಲ ಪರಿಣಾಮ ಉಂಟಾಗಿ, ಕೆಆರ್‌ಎಸ್ ಕಸದ ತೊಟ್ಟಿಯಾಗಿ ಮಾರ್ಪಡುವುದರಲ್ಲಿ ಅನುಮಾನವೇ ಇಲ್ಲ.

ಈ ಯೋಜನೆಗೆ ಸಾರ್ವಜನಿಕರಿಂದ ಹಾಗೂ ರೈತ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಯೋಜನೆಯನ್ನು ಪ್ರಾರಂಭಿಸುವತ್ತಾ ಆಸಕ್ತಿ ತೋರಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಕೃಷ್ಣರಾಜಸಾಗರ ಜಲಾಶಯ ಕರ್ನಾಟಕ ರಾಜ್ಯದ ಜನರ ಜೀವನಾಡಿಯಾಗಿದ್ದು ಜೊತೆಗೆ ಸಾರ್ವಜನಿಕರ ವ್ಯಾಪಕ ವಿರೋಧ ಇರುವುದರಿಂದ ಈ ಯೋಜನೆ ಕೈಬಿಡುವುದೇ ಲೇಸು. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಆಸೆಯೆಂಬ ಕಲ್ಲಿಗಾಗಿ ಕನಸೆಂಬ ವಜ್ರ ಕಳೆದುಕೊಳ್ಳಬೇಡಿ...!



ಪ್ರತಿಯೊಬ್ಬ ಮನುಷ್ಯನಿಗೂ ಆಸೆಗಳು ಇರುತ್ತವೆ. ಆಸೆಗಳು ಇಲ್ಲ ಎಂದರೆ ಮನುಷ್ಯನ ಬದುಕಿನಲ್ಲಿ ಸ್ವಾರಸ್ಯವೇ ಇರುವುದಿಲ್ಲ. ಆಸೆಯೇ ಬದುಕಿನ ಇಂಧನವಾಗಿರುತ್ತದೆ. ಬೆಳಗ್ಗೆ ಎದ್ದಾಕ್ಷಣ ಮನುಷ್ಯ ಚೈತನ್ಯಶೀಲನಾಗಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಬಹುತೇಕ ಆಸೆಗಳನ್ನು ಈಡೇರಿಸಿಕೊಳ್ಳಲು. ಆಸೆಗಳ ಜೊತೆಗೆ ಮನುಷ್ಯನಿಗೆ ಕನಸುಗಳು ಸಹ ಇರುತ್ತವೆ. ಆಸೆಗಳಿಗೆ ಹೋಲಿಸಿಕೊಂಡರೆ ಕನಸುಗಳು ಅಮೂಲ್ಯವಾದವು. ಆಸೆಗಳು ಕಲ್ಲುಗಳಾದರೆ ಕನಸುಗಳು ವಜ್ರಗಳಂತೆ.

ಖ್ಯಾತ ಸಾಹಿತಿ ಗಿರೀಶ್ ಕಾರ್ನಾಡ್ ಅವರು ಬೆಳಕಿಲ್ಲದ ದಾರಿಯಲ್ಲಿ ನಡೆಯಬಲ್ಲೆ, ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾರೆ ಎಂದು ಅರ್ಥಪೂರ್ಣವಾಗಿ ಹೇಳಿದ್ದಾರೆ. ಮನುಷ್ಯನ ಬದುಕು ಸಾರ್ಥಕವಾಗಬೇಕು ಎಂದರೆ ಅವನಿಗೆ ಒಂದು ಕನಸುಗಳಿರಬೇಕು. ಅವುಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸದಾ ಚಿಂತನೆ ನಡೆಸಬೇಕು. ಯಾವ ಆಮಿಷಗಳಿಗೂ, ಆಸೆಗಳಿಗೂ ಬಲಿಯಾಗಬಾರದು.

ಆಸೆಗಳನ್ನು ಹೇಗಾದರೂ ಮಾಡಿ ಈಡೇರಿಸಿಕೊಳ್ಳಬಹುದು. ಆದರೆ ಕನಸುಗಳನ್ನು ಈಡೇರಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಅದು ಶ್ರಮ, ಶ್ರದ್ಧೆ, ಪ್ರಾಮಾಣಿಕ ಪ್ರಯತ್ನ, ನಿರಂತರತೆ, ನಿರ್ಭಯ, ದೃಢತೆ ಅಷ್ಟೇ ಅಲ್ಲದೆ ಆಸೆಗಳ ತ್ಯಾಗ, ನಿದ್ರೆಯ ತ್ಯಾಗ, ಬಂಧುಬಳಗಗಳ ಸಮಾರಂಭಗಳ ತ್ಯಾಗ ಹೀಗೆ ಅನೇಕ ಸಂಗತಿಗಳನ್ನು ಡಿಮ್ಯಾಂಡ್ ಮಾಡುತ್ತದೆ. ಕನಸು ಎಂದರೆ ಒಂದು ತಪಸ್ಸಿನ ಹಾಗೆ. ಎಲ್ಲರಿಗೂ ಕನಸುಗಳಿದ್ದರೂ ಅವುಗಳನ್ನು ಈಡೇರಿಸಿಕೊಳ್ಳುವವರು ಕಡಿಮೆ ಎನ್ನಬಹುದು. ಅವರನ್ನೇ ಸಾಧಕರು ಎಂದು ಕರೆಯಬಹುದು.

ಮನುಷ್ಯನಿಗೆ ಕನಸುಗಳನ್ನು ಈಡೇರಿಸಿಕೊಳ್ಳಲು ಆಸೆಗಳು ದಿಕ್ಕುತಪ್ಪಿಸುತ್ತವೆ. ಕನಸುಗಳನ್ನು ಬೆನ್ನತ್ತುವ ಮಾರ್ಗದಲ್ಲಿ ಆಸೆಗಳು ತಪ್ಪುದಾರಿಗಳಂತೆ ಎದುರುಗೊಂಡು ದಿಕ್ಕುತಪ್ಪಿಸಿಬಿಡುತ್ತವೆ. ಎಷ್ಟೋ ಜನ ಕನಸಿನ ಹಾದಿಯಲ್ಲಿ ಆಸೆಗಳಿಗೆ ಗಂಟು ಬಿದ್ದು, ಕನಸುಗಳನ್ನೇ ತ್ಯಾಗ ಮಾಡಿದ್ದಾರೆ. ಆದರೆ ಸಣ್ಣ ಸಣ್ಣ ಆಸೆಗಳನ್ನು ತ್ಯಾಗ ಮಾಡಿ ಕನಸಿನ ಹಾದಿಯಲ್ಲಿ ಕ್ರಮಿಸಿದರೆ ಕನಸು ನನಸಾಗುವುದರಲ್ಲಿ ಸಂಶಯವೇ ಇಲ್ಲ. ನೆನಪಿರಲಿ ನಿಮ್ಮ ಕನಸುಗಳು ಈಡೇರಿದರೆ ಆಸೆಗಳು ಕಾಲಬಳಿ ಬಂದು ಬೀಳುತ್ತವೆ.

ಇಂದಿನ ಆಧುನಿಕ ಯುಗದಲ್ಲಿ ಮನುಷ್ಯನಿಗೆ ಆದರ್ಶ ಬದುಕಿಗಿಂತ ಆಕರ್ಷಣೆ ಬದುಕು ಸೆಳೆಯುತ್ತಿರುತ್ತದೆ. ನಾಲ್ಕು ಜನ ಬದುಕಿದ ಹಾಗೆ ಬದುಕಬೇಕು ಎಂದು ಬಯಸುತ್ತಾರೆ. ಬೇರೆಯವರ ಬದುಕಿನೊಂದಿಗೆ ಹೋಲಿಸಿಕೊಂಡು, ಸಣ್ಣ ಸಣ್ಣ ಆಸೆಗಳನ್ನು ಈಡೇರಿಸಿಕೊಳ್ಳುವ ಭರದಲ್ಲಿ ದೊಡ್ಡ ಕನಸುಗಳಿಗೆ ತಿಲಾಂಜಲಿ ಹೇಳುತ್ತಾರೆ. ಉದಾಹರಣೆಗೆ ಇಂದಿನ ಕಾಲೇಜು ವಿದ್ಯಾರ್ಥಿಗಳಲ್ಲಿ ಬಹುತೇಕರು ಬದುಕಿನಲ್ಲಿ ಒಂದು ಧ್ಯೇಯ ಅಥವಾ ಕನಸನ್ನೇ ಹೊಂದಿರುವುದಿಲ್ಲ. ಪೋಷಕರು ಅಗತ್ಯಗಳನ್ನು ಈಡೇರಿಸಿದರೆ ಅದಕ್ಕೆ ಸಂತುಷ್ಟರಾಗದೆ, ತಮ್ಮೆಲ್ಲಾ ಆಸೆಗಳನ್ನು ಈಡೇರಿಸಿಕೊಳ್ಳಲು ಆತುರ ಮಾಡುತ್ತಾರೆ.

> ಕನಸು ಕಾಣಲು ಕಾಸು ಕೊಡಬೇಕಿಲ್ಲ. ಕನಸು ಯಾರ ಸ್ವತ್ತು ಅಲ್ಲ. ಆದರೆ ಕನಸನ್ನು ಈಡೇರಿಸಿಕೊಳ್ಳಬೇಕಾದರೆ ಮಾತ್ರ ಬೆವರನ್ನು ಸುರಿಸಬೇಕಾಗುತ್ತದೆ. ಉತ್ತಮ ಗುರುಗಳ ಆಯ್ಕೆ, ಉತ್ತಮ ಸ್ನೇಹಿತರ ಆಯ್ಕೆ ಮುಖ್ಯ ಪಾತ್ರ ವಹಿಸುತ್ತವೆ. ಕನಸಿನ ಹಾದಿಯಲ್ಲಿ ನಡೆಯುವವರಿಗೆ ಹಾದಿ ದುರ್ಗಮವಾಗಿದ್ದರೂ, ಕಠಿಣವಾಗಿದ್ದರೂ, ಕತ್ತಲಾಗಿದ್ದರೂ ಏನೂ ಅನಿಸುವುದಿಲ್ಲ. ಇಲ್ಲಿ ನೆಪಗಳಿಗೆ ಅವಕಾಶವಿಲ್ಲ, ಹಿಂದೆ ಸರಿಯುವ ಅವಕಾಶವಿಲ್ಲ ಎಂದುಕೊಂಡರೆ ಮಾತ್ರ ಕನಸು ನನಸಾಗುತ್ತದೆ. ನಿತ್ಯವೂ ನೆಪಗಳನ್ನು ಹೇಳುತ್ತಾ ಕನಸನ್ನು ಕನವರಿಸುತ್ತಾ ಕುಳಿತರೆ ಅದು ಕೇವಲ ಹಗಲುಗನಸಾಗುತ್ತದೆ.

ಕಾಲೇಜಿಗೆ ಹೋಗುವ ದಿನಗಳಲ್ಲಿ ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ಅಧ್ಯಯನ ಮಾಡಿ ಉತ್ತಮ ಫಲಿತಾಂಶ ಪಡೆಯಲು ಶ್ರಮಿಸದೆ, ಫ್ಯಾಶನ್ ಶೋಗೆ ಹೋಗುವ ಮಾದರಿಯಲ್ಲಿ ಬ್ರಾಂಡೆಡ್ ಬಟ್ಟೆಗಳು, ಶೂಗಳು, ವಾಚ್‌ಗಳು, ಬೈಸಿಕಲ್, ಮೋಟಾರ್ ಸೈಕಲ್‌ಗಳಿಗಾಗಿ ಹಂಬಲಿಸುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿಯೇ ಒಳ್ಳೇ ಹೀರೋ/ಹೀರೋಯಿನ್ ಮಾದರಿಯಲ್ಲಿ ಮೆರೆಯಲು ಹಂಬಲಿಸುತ್ತಾರೆ. ಅಪ್ಪ ಅಮ್ಮನ ಶ್ರಮದ ದುಡ್ಡಿನಲ್ಲಿ ಶೋಕಿ ಮಾಡಲು ಬಯಸುತ್ತಾರೆ. ಎಷ್ಟೋ ಯುವಕರು ತಮ್ಮ ಆಯುಷ್ಯವೇ 25 ವರ್ಷಗಳು, ಅದರೊಳಗೆ ಎಲ್ಲಾ ಆಸೆಗಳನ್ನು ಈಡೇರಿಸಿಕೊಳ್ಳಬೇಕು ಎಂದು ಬಯಸಿದಂತೆ ಕಾಣುತ್ತದೆ. ಇವುಗಳೇ ಆಸೆಗಳೆಂಬ ಕಲ್ಲುಗಳು. ಯಾವ ವಿದ್ಯಾರ್ಥಿಯು ಇವುಗಳಿಗೆ ಹೆಚ್ಚು ಆದ್ಯತೆ ನೀಡದ ಅಭ್ಯಾಸದ ಕಡೆ ಹೆಚ್ಚು ಗಮನ ಕೊಟ್ಟು ಉತ್ತಮ ಸಾಧನೆ ಮಾಡುತ್ತಾನೆಯೋ, ತನ್ನ ಜೀವನದ ದೊಡ್ಡ ಕನಸು, ಅದು ಉದ್ಯಮವಾಗಬಹುದು, ಉದ್ಯೋಗವೇ ಆಗಬಹುದು, ಅದನ್ನು ನನಸು ಮಾಡಿಕೊಂಡ ಮೇಲೆ, ಎಂತಹ ಐಷಾರಾಮಿ ಜೀವನವನ್ನು ಬೇಕಾದರೂ ನಡೆಸಬಹುದು. ಅದರ ಬದಲಿಗೆ ವಿದ್ಯಾರ್ಥಿ ಜೀವನದಲ್ಲಿಯೇ ಎಲ್ಲದಕ್ಕೂ ಆಸೆಪಟ್ಟು, ದೂರಗಾಮಿ ಕನಸುಗಳನ್ನು ಈಡೇರಿಸಿಕೊಳ್ಳಲಾಗದೆ ಪಶ್ಚಾತ್ತಾಪ ಪಡುತ್ತಾರೆ. ತಾವು ಬಯಸಿದ ಬದುಕನ್ನು ನಡೆಸಲಾಗದೆ ಪರಿತಪಿಸುತ್ತಾರೆ.

ಅಲ್ಲಮಪ್ರಭುಗಳು ವಚನವೊಂದರಲ್ಲಿ ಆಸೆಗೆ ಸತ್ತದ್ದು ಕೋಟಿ, ಆಮಿಷಕ್ಕೆ ಸತ್ತದ್ದು ಕೋಟಿ, ಹೊನ್ನು ಹೆಣ್ಣು ಮಣ್ಣಿಂಗೆ ಸತ್ತದ್ದು ಕೋಟಿ...... ಎಂದು ಹೇಳಿರುವುದು ಮಾರ್ಮಿಕವಾಗಿದೆ.

ಅನೇಕರು ತಮ್ಮ ಜೀವನವನ್ನು ಆಸೆಗಳನ್ನು ಈಡೇರಿಸಿಕೊಳ್ಳುವುದರಲ್ಲಿಯೇ ಕಳೆದು ಕನಸುಗಳು ಕೈತಪ್ಪಿ ಹೋಗುವಂತೆ ಮಾಡಿಕೊಳ್ಳುತ್ತಾರೆ. ಕನಸು ಗಳನ್ನು ಈಡೇರಿಸಿಕೊಳ್ಳಲು ಮೊದಲಿಗೆ ಶಿಸ್ತಿನ ಜೀವನ ಅಗತ್ಯವಾಗಿರುತ್ತದೆ. ಸಮಯ ನಿರ್ವಹಣೆ ಮಾಡದಿರುವುದು, ವೃಥಾ ಕಾಲಹರಣ ಮಾಡುವುದು, ಅನಗತ್ಯ ವಿಚಾರಗಳಿಗೆ ಸಮಯ ವ್ಯಯ ಮಾಡುವುದು, ತನ್ನ ಏಳ್ಗೆಯ ಕುರಿತು ಚಿಂತಿಸದೆ, ಅನ್ಯರ ಪ್ರಗತಿ ಕುರಿತು ಈರ್ಷೆ ಪಡುವುದು... ಹೀಗೆ ನೀತಿ ನಿಯಮಾವಳಿಗಳಿಲ್ಲದೆ ಬದುಕು ಸೂತ್ರವಿಲ್ಲದ ಗಾಳಿಪಟದಂತೆ ಹಾರಾಡುತ್ತಿರುತ್ತದೆ. ಬದುಕಿಗೊಂದು ಸೂತ್ರ ಬೇಕು. ಆ ಸೂತ್ರ ಮಾತ್ರವೇ ನಮ್ಮನ್ನು ಬದುಕಿನ ಉನ್ನತಿಗೆ ಕೊಂಡೊಯ್ಯುವುದು.

ಅನೇಕ ಪೋಷಕರು ಮಕ್ಕಳಿಗೆ ಕಿರಿಯ ವಯಸ್ಸಿನಿಂದಲೇ ಆಸೆಗಳನ್ನು ಹುಟ್ಟಿಸುತ್ತಾರೆಯೇ ಹೊರತು, ಕನಸುಗಳನ್ನು ಬಿತ್ತುವುದಿಲ್ಲ. ಮಕ್ಕಳ ಆಸಕ್ತಿ ಹಾಗೂ ಸಾಮರ್ಥ್ಯಕ್ಕೆ ಅನುಸಾರವಾಗಿ ಕನಸುಗಳನ್ನು ಬಿತ್ತಿ, ಅವುಗಳನ್ನು ಪೋಷಿಸುತ್ತಾ ಬಂದಲ್ಲಿ ಮಕ್ಕಳು ತಮ್ಮ ಭವಿಷ್ಯವನ್ನು ಕಂಡುಕೊಳ್ಳುತ್ತಾರೆ. ಅವರಿಗೆ ಆಸೆ ಆಮಿಷಗಳಿಗೆ ಬಲಿಯಾಗದಂತೆ ಎಚ್ಚರಿಕೆ ವಹಿಸಲು ತಿಳಿಸಬೇಕು. ದುರಭ್ಯಾಸ, ದುಶ್ಚಟಗಳ ದಾಸರಾಗದಂತೆ ನೋಡಿಕೊಳ್ಳಬೇಕು. ಎಷ್ಟೋ ಜನ ಅಶಿಸ್ತಿನ ಜೀವನದಿಂದ ತಮ್ಮ ಬದುಕನ್ನು ಹೈರಾಣ ಮಾಡಿಕೊಂಡಿರುತ್ತಾರೆ. ಉದಾಹರಣೆಗೆ ಕ್ರಿಕೆಟ್ ತಾರೆ ಸಚಿನ್ ತೆಂಡೂಲ್ಕರ್ ಸರಿಸಮಾನನಾಗಿ ಕ್ರಿಕೆಟ್ ಕೌಶಲಗಳನ್ನು ಹೊಂದಿದ್ದವರು ಸಹಪಾಠಿ ವಿನೋದ್ ಕಾಂಬ್ಳಿಯವರು. ಕಿರಿಯ ವಯಸ್ಸಿನಲ್ಲಿಯೇ ಆಶ್ಚರ್ಯಪಡುವಂತಹ ಸಾಧನೆ ಮಾಡಿದ್ದವರು. ಎಲ್ಲರೂ ಅವರಿಗೆ ಭವ್ಯವಾದ ಭವಿಷ್ಯವಿದೆ ಎಂದು ನಂಬಿದ್ದರು. ಆದರೆ ತನ್ನ ಕನಸಿನ ಕ್ರಿಕೆಟ್ ಕಡೆ ಹೆಚ್ಚು ಗಮನ ವಹಿಸದೆ ಆಸೆ ಆಮಿಷಗಳಿಗೆ ಕಟ್ಟುಬಿದ್ದು ಇಂದು ಸ್ವಂತ ಶಕ್ತಿಯಿಂದ ನಡೆದಾಡಲಾಗದಷ್ಟು ಆರೋಗ್ಯ ಹಾಳು ಮಾಡಿಕೊಂಡಿದ್ದಾರೆ. ವೈವಾಹಿಕ ಜೀವನವೂ ಸಹ ಹಳ್ಳಹಿಡಿದಿದೆ. ಯಶಸ್ಸಿನ ಅಮಲು ತಲೆಗೆ ಹತ್ತಿದರೆ ಹೀಗೆ ಆಗುತ್ತದೆ. ಆದರೆ ಸಚಿನ್ ಮಾತ್ರ ತನ್ನ ಕನಸಿನ ಕ್ಷೇತ್ರ ಕ್ರಿಕೆಟ್ ಹೊರತಾಗಿ ಇನ್ನಿತರೆ ದುರಭ್ಯಾಸಗಳಿಗೆ ಗಂಟುಬೀಳದೆ ಉತ್ತಮ ಸಾಧಕರಾಗಿ ತಮ್ಮ ಖ್ಯಾತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ.

ಹೌದು, ಕನಸು ಕಾಣಲು ಕಾಸು ಕೊಡಬೇಕಿಲ್ಲ. ಕನಸು ಯಾರ ಸ್ವತ್ತು ಅಲ್ಲ. ಆದರೆ ಕನಸನ್ನು ಈಡೇರಿಸಿಕೊಳ್ಳಬೇಕಾದರೆ ಮಾತ್ರ ಬೆವರನ್ನು ಸುರಿಸಬೇಕಾಗುತ್ತದೆ. ಉತ್ತಮ ಗುರುಗಳ ಆಯ್ಕೆ, ಉತ್ತಮ ಸ್ನೇಹಿತರ ಆಯ್ಕೆ ಮುಖ್ಯ ಪಾತ್ರವಹಿಸುತ್ತವೆ. ಕನಸಿನ ಹಾದಿಯಲ್ಲಿ ನಡೆಯುವವರಿಗೆ ಹಾದಿ ದುರ್ಗಮವಾಗಿ ದ್ದರೂ, ಕಠಿಣವಾಗಿದ್ದರೂ, ಕತ್ತಲಾಗಿದ್ದರೂ ಏನೂ ಅನಿಸುವುದಿಲ್ಲ. ಇಲ್ಲಿ ನೆಪಗಳಿಗೆ ಅವಕಾಶವಿಲ್ಲ, ಹಿಂದೆ ಸರಿಯುವ ಅವಕಾಶವಿಲ್ಲ ಎಂದುಕೊಂಡರೆ ಮಾತ್ರ ಕನಸು ನನಸಾಗುತ್ತದೆ. ನಿತ್ಯವೂ ನೆಪಗಳನ್ನು ಹೇಳುತ್ತಾ ಕನಸನ್ನು ಕನವರಿಸುತ್ತಾ ಕುಳಿತರೆ ಅದು ಕೇವಲ ಹಗಲುಗನಸಾಗುತ್ತದೆ.

ಸಾಧಕರ ಜೀವನ ಚರಿತ್ರೆ ಓದಿದರೆ, ಅಥವಾ ಅವರನ್ನು ಭೇಟಿಯಾಗಿ ಅವರ ಅನುಭವ ಕೇಳಿದರೆ ನಂಬಲು ಅಸಾಧ್ಯವಾದ ಸಂಗತಿಗಳು ತಿಳಿಯುತ್ತಾ ಹೋಗುತ್ತವೆ. ಕೆಲವರು ಅದೃಷ್ಟದ ಕುರಿತು ಮಾತನಾಡುತ್ತಾರೆ. ಕೆಲವೇ ಮಂದಿಗೆ ಅದೃಷ್ಟ ಕೈಹಿಡಿಯಬಹುದು. ಆದರೆ ಪರಿಶ್ರಮ ಯಾರನ್ನೂ ಕೈಬಿಡುವುದಿಲ್ಲ. ಶ್ರಮವಹಿಸುವವನಿಗೆ ಕನಸು ಎಂಬುದು ಕನ್ನಡಿ ಒಳಗಿನ ಗಂಟಾಗುವುದಿಲ್ಲ, ಬದಲಿಗೆ ಕಂಕುಳಲ್ಲಿನ ಗಂಟಾಗುತ್ತದೆ. ಕನಸುಗಳು ಎಂದರೆ ಅದೊಂದು ದುರದೃಷ್ಟಿ, ಅದನ್ನು ಈಡೇರಿಸಿಕೊಳ್ಳುವಾಗ ಅನೇಕರ ದುರಾದೃಷ್ಟಿ ಬೀಳಬಹುದು. ಅನೇಕರು ನಿಮ್ಮ ಕನಸುಗಳಿಗೆ ಕಲ್ಲು ಹಾಕಲು ಆಮಿಷಗಳನ್ನು ಒಡ್ಡಬಹುದು, ನಿಮ್ಮ ಸಾಮರ್ಥ್ಯವನ್ನು ಪ್ರಶ್ನಿಸಬಹುದು. ನಿಮ್ಮ ಮೇಲೆ ನಿಮಗೆ ನಂಬಿಕೆ ಇದ್ದಲ್ಲಿ, ಯಾವುದೇ ಭಯವಿಲ್ಲದೆ ಮುನ್ನುಗ್ಗಿದಲ್ಲಿ ನಿಮ್ಮ ಕನಸನ್ನು ಯಾರೂ ಕಸಿಯಲು ಸಾಧ್ಯವಿಲ್ಲ.

ನಿಮ್ಮ ದೊಡ್ಡ ಕನಸನ್ನು ಈಡೇರಿಸಿಕೊಂಡರೆ ನಿಮ್ಮ ಮೇಲೆ ಸಿಸಿ ಕ್ಯಾಮೆರಾದಂತೆ ನಿಗಾ ವಹಿಸಿದ್ದ ಜನರೆ ನಿಮ್ಮ ಜೊತೆ ಮೊಬೈಲ್ ಕ್ಯಾಮೆರಾದಲ್ಲಿ ಸೆಲ್ಫಿ ತೆಗೆಸಿಕೊಳ್ಳಲು ಬಯಸುತ್ತಾರೆ. ಅಂತಹ ಸಾಧಕರು ನೀವಾಗಬೇಕು. ಕ್ಷುಲ್ಲಕ ಆಸೆಗಳಿಗೆ ತಿಲಾಂಜಲಿ ಹೇಳಿ, ಕನಸುಗಳ ಹಳಿಗಳ ಮೇಲೆ ಹೆಜ್ಜೆ ಇಡಿ. ನಿಮ್ಮ ಬದುಕಿನ ಬಂಡಿ ಸುಗಮವಾಗಿ ಗಮ್ಯ ಸ್ಥಾನವನ್ನು ತಲುಪಿಸುತ್ತದೆ. ನೀವು ಬೆನ್ನಟ್ಟಬೇಕಿರುವುದು ಜನರನ್ನಲ್ಲ, ಜನರು ನಿಮಗೆ ಮೋಸ ಮಾಡಬಹುದು. ಆದರೆ ನಿಮ್ಮ ಕನಸುಗಳು ಎಂದಿಗೂ ನಿಮಗೆ ಮೋಸ ಮಾಡುವುದಿಲ್ಲ.

ಹೂರಣ: ಆಸೆಗಳನ್ನು ಈಡೇರಿಸಿಕೊಳ್ಳಲು
ಆತುರಪಟ್ಟರೆ ಕನಸುಗಳು
ಆತ್ಮಹತ್ಯೆ ಮಾಡಿಕೊಳ್ಳುತ್ತವೆ.

ಕಟ್ಟಡ ಕಾರ್ಮಿಕರ ಹಿತಕಾಯುವಲ್ಲಿ ಕೇಂದ್ರ ಸರ್ಕಾರ ವಿಫಲ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಆರೋಪ

ಮೈಸೂರು, ಆ.17(ಎಂಟಿವೈ)– ಕೇಂದ್ರ ಸರ್ಕಾರ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ನಾಶ ಮಾಡಲು ಹುನ್ನಾರ ನಡೆಸುತ್ತಿದ್ದು, ಕಟ್ಟಡ ಕಾರ್ಮಿಕರು ಸಂಘಟಿತ ಹೋರಾಟ ಮಾಡಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಭಾನುವಾರ ಆಯೋಜಿಸಿದ್ದ ಕಟ್ಟಡ ಕಾರ್ಮಿಕರ 2ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕಟ್ಟಡ ಕಾರ್ಮಿಕರ ಹಿತಕಾಯುವಲ್ಲಿ ವಿಫಲವಾಗಿದೆ. ಕಾರ್ಮಿಕರ ಕಲ್ಯಾಣಕ್ಕೆ ಆದ್ಯತೆ ನೀಡಬೇಕಾಗಿದ್ದ ಕೇಂದ್ರ ಸರ್ಕಾರ, ಹಕ್ಕುಗಳನ್ನು ಕಸಿಯುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಇದರಿಂದ ಕಟ್ಟಡ ಕಾರ್ಮಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ಕಿಡಿಕಾರಿದರು.



ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಭಾನುವಾರ ಆಯೋಜಿಸಿದ್ದ ಕಟ್ಟಡ ಕಾರ್ಮಿಕರ 2ನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ಕಟ್ಟಡ ಕಾರ್ಮಿಕರು ಮೆರವಣಿಗೆ ನಡೆಸಿದರು.

ಕಳೆದ ಮೂರು ವರ್ಷದಲ್ಲಿ ಕಟ್ಟಡ ಕಾರ್ಮಿಕರ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಚರ್ಚಿಸಬೇಕು. 1996ರ ಕಾಯ್ದೆ ಪ್ರಕಾರ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಕಲ್ಯಾಣ ಮಂಡಳಿ ವತಿಯಿಂದ ನಮ್ಮ ಕಾರ್ಮಿಕರಿಗೆ 19 ಬಗೆಯ ಸವಲತ್ತು ಸಿಗಬೇಕು. ಆದರೆ, ಒಂದೊಂದು ಸವಲತ್ತುಗಳನ್ನು ನಾಶ ಮಾಡಲಾಗುತ್ತಿದೆ. ಇತ್ತೀಚೆಗೆ ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ಶೈಕ್ಷಣಿ ಧನ ಸಹಾಯದ ಮೊತ್ತ ಕಡಿಮೆ ಮಾಡಲಾಗಿದೆ. ಈ ಸಂಬಂಧ ನಮ್ಮ ಸಂಘಟನೆ ವತಿಯಿಂದ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ಇದೀಗ ತೀರ್ಪು ನಮ್ಮ ಪರ ಬಂದಿದೆ. ಎಲ್ಲ ಕಟ್ಟಡ ಕಾರ್ಮಿಕರಿಗೆ ಶೈಕ್ಷಣಿಕ ಧನ ಸಹಾಯ ನೀಡಬೇಕು ಎಂದು ಕೋರ್ಟ್ ತೀರ್ಪು ನೀಡಿದೆ ಎಂದು ತಿಳಿಸಿದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಕಿಟ್ ಖರೀದಿ, ವೈದ್ಯಕೀಯ ತಪಾಸಣೆ ಹೆಸರಿನಲ್ಲಿ ಕೋಟ್ಯಾಂತರ ರೂ ದುಂದುವೆಚ್ಚ ಮಾಡಲಾಗಿದೆ. ಆದ್ದರಿಂದ ಇಂತಹ ದುಂದು ವೆಚ್ಚ ಮತ್ತು ಹಣ ದುರುಪಯೋಗವನ್ನು ನಿಲ್ಲಿಸಿ ಕಟ್ಟಡ ಕಾರ್ಮಿಕರಿಗೆ ಸರಿಯಾದ ಸವಲತ್ತು ನೀಡಬೇಕು. 1996ರ ಕಾಯ್ದೆಯನ್ನು ಉಳಿಸುವ ಕೆಲಸ ಆಗಬೇಕು. ಕಲ್ಯಾಣ ಮಂಡಳಿಯನ್ನು ಉಳಿಸಿಕೊಳ್ಳಲು ನಾವು ಹೋರಾಟ ಮಾಡಬೇಕು. ಇದಕ್ಕಾಗಿ ಕಟ್ಟಡ ಕಾರ್ಮಿಕರು ಸಂಘಟಿತರಾಗಬೇಕು ಎಂದರು.

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ 5ನೇ ರಾಜ್ಯ ಸಮ್ಮೇಳನ ಆ.24, 25ರಂದು ಕೊಪ್ಪಳ ಜಿಲ್ಲೆಯಲ್ಲಿ ನಡೆಯಲಿದೆ. ಅದರ ಭಾಗವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮ್ಮೇಳನ ನಡೆಯುತ್ತಿದ್ದು, ಮೈಸೂರು ಜಿಲ್ಲೆಯ ಸಮ್ಮೇಳನವನ್ನು ನೆರವೇರಿಸಿದ್ದೇವೆ ಎಂದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಸುನಂದ, ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಸಿ.ಬಿ.ನವೀನ್‌ಕುಮಾರ್, ಜಿಲ್ಲಾಧ್ಯಕ್ಷ ಹೆಚ್.ಎಂ. ಬಸವಯ್ಯ, ಜಿಲ್ಲಾ ಕಾರ್ಯದರ್ಶಿ ಕೆ.ಸಿ.ಕೃಷ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿ ರಾವ್, ಪ್ರಮುಖರಾದ ಜಗದೀಶ್ ಸೂರ್ಯ, ಬಿ.ಚನ್ನಕೇಶವ, ವಿ. ಸೋಮಶೇಖರ್, ಎಚ್.ಎಸ್.ಜಗದೀಶ್ ಇತರರಿದ್ದರು.

ಸಮ್ಮೇಳನದ ಅಂಗವಾಗಿ ಗನ್‌ಹೌಸ್ ಬಸವೇಶ್ವರ ವೃತ್ತದಿಂದ ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಮೂಲಕ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಆವರಣದವರೆಗೆ ಕಟ್ಟಡ ಕಾರ್ಮಿಕರು ಮೆರವಣಿಗೆಯಲ್ಲಿ ಆಗಮಿಸಿದರು. ಬಳಿಕ ಕಾರ್ಮಿಕ ಸಂಘಟನೆ ಧ್ವಜಾರೋಹಣ ನೆರವೇರಿತು.

ಸ.ರ.ಸುದರ್ಶನ್ ನಿಧನಕ್ಕೆ ರಘು ಕೌಟಿಲ್ಯ ಸಂತಾಪ

ಮೈಸೂರು, ಆ.17– ಕನ್ನಡಪರ ಹೋರಾಟಗಾರ ಸ.ರ. ಸುದರ್ಶನ್ ನಿಧನಕ್ಕೆ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸಂತಾಪ ಸೂಚಿಸಿದ್ದಾರೆ.



ರಘು ಕೌಟಿಲ್ಯ

5 ದಶಕಗಳ ಕಾಲ ಮೈಸೂರಿನ ಕನ್ನಡಪರ ಹೋರಾಟದ ನೈಜ ಸಂತನಾಗಿದ್ದ ಸುದರ್ಶನ್ ಅವರು ಅತ್ಯಂತ ಸಾತ್ವಿಕ, ಸರಳ ಜೀವಿ, ಕನ್ನಡಕ್ಕೆ ಅನ್ಯಾಯ, ಅಪಚಾರವಾದಾಗ ಅವರ ಧ್ವನಿ ಅತ್ಯಂತ ಗಟ್ಟಿಯಾಗಿರುತ್ತಿತ್ತು. ಮೈಸೂರಿನ ಕನ್ನಡ ಕ್ರಿಯಾ ಸಮಿತಿ ಗೋಕಾಕ್ ಚಳುವಳಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು ದಶಕಗಳ ಕಾಲ ಕ್ರಿಯಾ ಸಮಿತಿಯನ್ನು ಮುನ್ನಡೆಸಿದ ಸಾರ್ಥಕತೆಯ ಗೌರವ ಸ.ರ.ಸುದರ್ಶನ್ ಅವರಿಗೆ ಸಲ್ಲಬೇಕು.

ನೃಪತುಂಗ ಕನ್ನಡ ಶಾಲೆಯನ್ನು ಅಸ್ತಿತ್ವಕ್ಕೆ ತರುವಲ್ಲಿ ಮುಂಚೂಣಿಯಲ್ಲಿ ನಿಂತು ಅದನ್ನು ನಿರೂಪಿಸಿ ತೋರಿಸಿದರು. ಇದೀಗ ಮೈಸೂರಿನ ನೈಜ ಕನ್ನಡ ಧ್ವನಿ ನಿಶಬ್ಧಗೊಂಡಿದೆ. ಸ.ರ.ಸುದರ್ಶನ್ ಅವರೊಂದಿಗಿನ ನನ್ನ ಒಡನಾಟ ನಾಲ್ಕು ದಶಕಗಳದ್ದು. ಅವರೊಂದಿಗೆ ಬೆರೆತು ಕನ್ನಡಕ್ಕಾಗಿ ಹೋರಾಡಿದ ದಿನಗಳು, ಮೊನ್ನೆ ಮೊನ್ನೆವರೆಗೂ ಕನ್ನಡಪರ ಚಿಂತನೆಗಳ ಕುರಿತು ಅವರೊಂದಿಗೆ ಚರ್ಚಿಸಿದ್ದ ಕ್ಷಣಗಳು ಎಂದಿಗೂ ಮರೆಯಲಾಗದು ಎಂದು ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸೋಮವಾರ 18 ಆಗಸ್ಟ್ 2025

ನೈಪುಣ್ಯ ಕ್ಯಾಂಪಸ್‌ನಲ್ಲಿ ವಿಜೃಂಭಣೆಯ 79ನೇ ಸ್ವಾತಂತ್ರ್ಯೋತ್ಸವ





ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆರ್.ಟಿ.ನಗರ ಹಾಗೂ ಕನಕದಾಸನಗರ (ದಟ್ಟಗಳ್ಳಿ) ಕ್ಯಾಂಪಸ್‌ಗಳಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಮೈಸೂರು,ಆ.17–ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆರ್.ಟಿ.ನಗರ ಹಾಗೂ ಕನಕದಾಸನಗರ (ದಟ್ಟಗಳ್ಳಿ) ಕ್ಯಾಂಪಸ್‌ಗಳಲ್ಲಿ ಸ್ವಾತಂತ್ರ್ಯ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಆರ್.ಟಿ.ನಗರ ಕ್ಯಾಂಪಸ್: ಆರ್‌ಟಿ ನಗರ ಕ್ಯಾಂಪಸ್‌ನಲ್ಲಿ ಲೆಫ್ಟಿನಂಟ್ ಕರ್ನಲ್ ವಿ.ಎ.ಸತೀಶ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸ್ವಾತಂತ್ರೋತ್ಸವದ ಮಹತ್ವ ಹಾಗೂ ರಾಷ್ಟ್ರ ರಕ್ಷಣೆ ಯಲ್ಲಿ ದೇಶದ ಸೇನೆ ವಹಿಸುತ್ತಿರುವ ಮಹತ್ವದ ಪಾತ್ರದ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ರಾಷ್ಟ್ರಪ್ರೇಮ ಪ್ರತಿಬಿಂಬಿಸುವ ಹಾಗೂ ಸೈನ್ಯದ ಮಹತ್ವ ಸಾರುವ, ಭಾವೈಕ್ಯದ ಸಂಕೇತವನ್ನು ಪಸರಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ನೃತ್ಯ ಪ್ರಕಾರಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್. ರಘು, ಉಪ ಪ್ರಾಂಶುಪಾಲೆ ಶ್ರೀಮತಿ ಶಾಲಿನಿ ಮಾಜೋ, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕನಕದಾಸನಗರ (ದಟ್ಟಗಳ್ಳಿ) ಕ್ಯಾಂಪಸ್: ಕನಕದಾಸನಗರ (ದಟ್ಟಗಳ್ಳಿ) ಕ್ಯಾಂಪಸ್‌ನಲ್ಲಿ ಸಂಜಯ ಕೆ.ಶೆಟ್ಟಿ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆ ಪ್ರಜಾಪ್ರಭುತ್ವದ ಮಹತ್ವ ತಿಳಿಸಿಕೊಟ್ಟರು. ಈ ವೇಳೆ ಮಕ್ಕಳು ದೇಶಭಕ್ತಿ ಕುರಿತಾದ ಕಿರುನಾಟಕ, ನೃತ್ಯ ಪ್ರದರ್ಶನ, ಏರೋಬಿಕ್ಸ್‌ಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಕೌಟಿಲ್ಯ, ಪ್ರಾಂಶುಪಾಲರಾದ ಮಹೇಂದ್ರ ಎಂ.ಎನ್, ಉಪ ಪ್ರಾಂಶುಪಾಲೆ ಶ್ರೀಮತಿ ಶೀನಾ ಕೆ. ಗುರ್ನಾನಿ, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಮತ್ತು ಪೋಷಕರು ಉಪಸ್ಥಿತರಿದ್ದರು.

ಜೆಡಿಎಸ್ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಶೇಷಾದ್ರಿ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ 79ನೇ ಸ್ವಾತಂತ್ರ ದಿನಾಚರಣೆ ಅಂಗವಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಹಿಳಾಧ್ಯಕ್ಷರಾದ ಪ್ರೇಮಾಶಂಕರೇಗೌಡ, ಎಚ್.ಕೆ.ರಮೇಶ್, ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಪಿ.ಮಂಜುನಾಥ್, ಎಂ.ಎನ್.ರಾಮು, ಕೃಷ್ಣಪ್ಪ, ಪ್ರಕಾಶ್ ಪ್ರಿಯದರ್ಶಿನ್ ಮತ್ತಿತರರು ಉಪಸ್ಥಿತರಿದ್ದರು.

ಒಕ್ಕಲಿಗರ ಸಂಘದ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ಜನತಾನಗರದ ಒಕ್ಕಲಿಗರ ಸಂಘದಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಹಾನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಸಂಘದ ಅಧ್ಯಕ್ಷ ಸುರೇಶ್, ಗೌರವಾಧ್ಯಕ್ಷ ಶೇಖರ್, ಚಿಕ್ಕಣ್ಣ, ಕಾರ್ಯದರ್ಶಿ ಲಕ್ಕೇಗೌಡ, ಖಜಾಂಚಿ ಮಂಜು, ನಿರ್ದೇಶಕರಾದ ಗವಿಸಿದ್ದು, ಟೆಂಟ್ ಕುಮಾರ್, ಸೊಸೈಟಿ ಕುಮಾರ್, ಮಹೇಶ್, ವೆಂಕಟೇಶ್, ಶಿವು, ಕಲಾ, ನಾರಾಯಣ್, ಮರಿಗೌಡ, ಮಂಜು ಮತ್ತಿತರರು ಭಾಗವಹಿಸಿದ್ದರು.

ಅನಾಥಾಶ್ರಮದ ಮಕ್ಕಳಿಗೆ ಭೋಜನ ವ್ಯವಸ್ಥೆ



ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಯರಗನಹಳ್ಳಿಯ ಶಿರಡಿ ಸಾಯಿಬಾಬಾ ಮಂದಿರದ ಟ್ರಸ್ಟ್ ಹಾಗೂ ಡಾ.ಫಿಕ್ಸಿಟ್ ಪಿಡಿಲೈಟ್ ಇಂಡಸ್ಟ್ರಿ ವತಿಯಿಂದ ಮೈಸೂರಿನ ದಟ್ಟಗಳ್ಳಿಯಲ್ಲಿರುವ ದಿವ್ಯಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಅನಾಥಾಶ್ರಮ ಮಕ್ಕಳಿಗೆ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ನಾಗರಾಜು, ಶಿರಡಿ ಸಾಯಿಬಾಬಾ ಮಂದಿರ ಟ್ರಸ್ಟ್‌ನ ಮುಖ್ಯಸ್ಥ ವೆಂಕಟೇಶ್, ಪಿ.ರಾಮಚಂದ್ರು, ಡಾ.ಪಿಗ್ಜಿತ್ ಫೀಡಿಲೈಟ್ ಇಂಡಸ್ಟ್ರೀಸ್ ತಾಂತ್ರಿಕ ವ್ಯವಸ್ಥಾಪಕ ಮಹಾಂತೇಶ್, ಮಾರ್ಕೆಟಿಂಗ್ ಅಧಿಕಾರಿಗಳಾದ ಕಿರಣ್‌ಕುಮಾರ್, ಶಶಾಂಕ್ ಇನ್ನಿತರರಿದ್ದರು.

ನೃಪತುಂಗ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ...



ಮೈಸೂರಿನ ಅನ್ಯೋನ್ಯ ಸಂಘದಿಂದ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಅನ್ಯೋನ್ಯ ಸಂಘದ ಪದಾಧಿಕಾರಿಗಳ ಜೊತೆಗೆ ಲೇಖಕ ಹೊರೆಯಾಲ ದೊರೆಸ್ವಾಮಿ, ಕೃಷ್ಣಪ್ಪ, ಮುಖ್ಯ ಶಿಕ್ಷಕಿ ಸೌಮ್ಯ, ಶಿಕ್ಷಕಿ ಚೈತ್ರ, ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಇನ್ನಿತರರು ಉಪಸ್ಥಿತರಿದ್ದರು.

ಸರಗೂರಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ



ಸರಗೂರು ತಾಲೂಕಿನ ಅಡಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ ದಿನ ಆಚರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಸಣ್ಣಸ್ವಾಮೇಗೌಡ ಧ್ವಜಾರೋಹಣ ನೆರವೇರಿಸಿದರು. ಮುಖಂಡ ರಮೇಶ್, ಶಿಕ್ಷಕ ಮಂಜುನಾಥ್, ನಾರಾಯಣಸ್ವಾಮಿ, ಮಂಜುನಾಥ್, ಅಂಗನವಾಡಿ ಶಿಕ್ಷಕಿಯಾದ ಶ್ರೀಮತಿ ಶಾಂತಕುಮಾರಿ, ಮುಖಂಡರಾದ ರಾಜಯ್ಯ, ಅಂಗಡಿ ರಮೇಶ್, ಉಮೇಶ್, ನಾಗೇಶ್, ಕಾಳಿಂಗಸ್ವಾಮಿ, ರಾಜು (ಪುನೀತ್) ಮತ್ತಿತರರು ಉಪಸ್ಥಿತರಿದ್ದರು.

ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಮಿತಿ ಅಧ್ಯಕ್ಷ ಪ್ರೊ.ಡಿ. ನಂಜುಂಡಯ್ಯ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಸಹ ಕಾರ್ಯದರ್ಶಿ ಎಚ್. ಶಿವರಾಜ್, ಉಪಾಧ್ಯಕ್ಷ ಪಿ. ಮಹದೇವ್, ಎಂ. ಸಾವಕಯ್ಯ, ಆರ್. ನಟರಾಜ್, ಪುಟ್ಟಸ್ವಾಮಿ, ನಿಸರ್ಗ ಸಿದ್ದರಾಜು, ಮಾ. ನಾಗಯ್ಯ, ಗಂಗಾಧರ್, ಮಹದೇವಸ್ವಾಮಿ, ಆನಂದ್, ಮಹೇಶ್, ಡಾ.ಮಂಜು ಸತ್ತಿಗೆಹುಂಡಿ, ವಿಜಯ್, ಸದಸ್ಯರು ಹಾಜರಿದ್ದರು.

ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣವನ್ನು ಚಾಮುಂಡಿಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ನೆರವೇರಿಸಿದರು. ಈ ವೇಳೆ ಪ್ರಾಂಶುಪಾಲರಾದ ಡಾ.ದೀಪ್ತಿ ಚತುರ್ವೇದಿ ಮತ್ತು ಶಾಲೆಯ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಡಿಎಂಜಿ ಹಳ್ಳಿ ಗ್ರಾಪಂನಿಂದ 79ನೇ ಸ್ವಾತಂತ್ರ್ಯ ದಿನ ಆಚರಣೆ



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಪಂನಿಂದ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯತು. ಈ ವೇಳೆ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಅಭಿನಂದನಾ ಪ್ರಮಾಣ ಪತ್ರ ವಿತರಿಸಲಾಯಿತು. ಅಧ್ಯಕ್ಷೆ ಶ್ರೀಮತಿ ಎಂ.ವನಿತಾ ಮಂಜು, ಉಪಾಧ್ಯಕ್ಷೆ ಮಂಗಳಮ್ಮ, ಚಾಮಯ್ಯ, ಶಿವಕುಮಾರ್, ಚಿಕ್ಕಮ್ಮ, ಸೋಮನಾಯಕ, ಭಗವಂತ ಸ್ವಾಮಿ, ಟಿ.ಕೃಷ್ಣಪ್ಪ, ಅಭಿವೃದ್ಧಿ ಅಧಿಕಾರಿ ರುಕ್ಮಾಂಗದ, ಮುಖ್ಯ ಶಿಕ್ಷಕಿ ಉಮಾ, ಶಾಲಾ ಮಕ್ಕಳು, ಸಿಬ್ಬಂದಿ ವರ್ಗ, ಹಿರಿಯ ನಾಗರಿಕರು ಇದ್ದರು.

ಇನ್ಸಿಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವ



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸಿಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಲೆಫ್ಟಿನೆಂಟ್ ಕರ್ನಲ್ ಸತೀಶ್ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ದಿನಕರ ಶೆಟ್ಟಿ, ಸಿದ್ದೇಗೌಡ, ರಾಯಣ್ಣ ಗೌಡರ್, ಪ್ರಭಾಕರಯ್ಯ, ಹರಿಯಪ್ಪ ನಾಯಕ್, ಓಂ ಪ್ರಕಾಶ್, ಶಾಲೆಯ ಶಿಕ್ಷಕಿಯರು, ತಾಯಂದಿರು ಹಾಗೂ ಮಕ್ಕಳು ಭಾಗವಹಿಸಿದ್ದರು.

ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಜೆ.ಪಿನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಮೈಸೂರಿನ ಎನ್‌ಸಿಸಿ 14ನೇ ಬೆಟಾಲಿಯನ್‌ನ ಲೆಫ್ಟಿನೆಂಟ್ ಕರ್ನಲ್ ಸಂದೀಪ್ ಆರ್ ಹೆಚ್., ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾ ಎಸ್.ಎನ್ ಧ್ವಜಾರೋಹಣ ನೆರವೇರಿಸಿದರು. ಶಾಲಾ ಶಿಕ್ಷಕರಾದ ಶ್ರೀಮತಿ ನಾಗವೇಣಿ ಎಂ.ಎನ್. ಮತ್ತಿತರರು ಉಪಸ್ಥಿತರಿದ್ದರು.

ಬಿಜೆಎಸ್ ಮೈಸೂರು ಚಾಪ್ಟರ್‌ನಿಂದ ಸ್ವಾತಂತ್ರ್ಯೋತ್ಸವ



ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್ ವತಿಯಿಂದ ವಿದ್ಯಾರಣ್ಯಪುರಂ ಹೊಸ ಇಟ್ಟಿಗೆಗೂಡಿನಲ್ಲಿರುವ ಸರ್ಕಾರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಮಕ್ಕಳಿಗೆ ಸಮವಸ್ತ್ರ, ಲೇಖನಿ ಸಾಮಗ್ರಿಗಳನ್ನು ವಿತರಿಸಲಾಯಿತು. ಮುಖಂಡರಾದ ಶೋಭಾ ಸುನೀಲ್, ಮುಖ್ಯೋಪಾಧ್ಯಾಯಿನಿ ಸಂಧ್ಯಾರಾಣಿ ಇನ್ನಿತರರಿದ್ದರು.

ಮೈಸೂರು,ಆ.17–ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್ ವತಿಯಿಂದ ಮೈಸೂರಿನ ವಿದ್ಯಾರಣ್ಯಪುರಂ ಹೊಸ ಇಟ್ಟಿಗೆಗೂಡಿನಲ್ಲಿರುವ ಸರ್ಕಾರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಬಿಜೆಎಸ್ ಸಂಸ್ಥಾಪಕ ಶಾಂತಿಲಾಲ್‌ಜೀ ಮುತ್ತಾ ಜನ್ಮದಿನ ಆಚರಿಸಲಾಯಿತು. ಬಿಜೆಎಸ್ ಅಧ್ಯಕ್ಷ ರಾಜನ್ ಬಾಗ್‌ಮಾರ್ ಧ್ವಜಾರೋಹಣ ನೆರವೇರಿಸಿದರು.

ಬಿಜೆಎಸ್ ವತಿಯಿಂದ ಸಮವಸ್ತ್ರ, ಲೇಖನಿ ಸಾಮಾಗ್ರಿಗಳನ್ನು, ಶೋಹನ್ ಲಾಲ್ ಬುದ್‌ಮಾಲ್ ಸಂಪತ್‌ರಾಜ್ ರಾಜನ್ ಬಾಗ್‌ಮಾರ್ ಪ್ರಾಯೋಜಕತ್ವದಲ್ಲಿ ವಿತರಿಸಲಾಯಿತು. ಈ ವೇಳೆ ಶೋಭಾ ಸುನೀಲ್, ಮುಖ್ಯೋಪಾಧ್ಯಾಯಿನಿ ಸಂಧ್ಯಾರಾಣಿ, ಕರ್ನಾಟಕ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಗುಲೇಚಾ, ಮೈಸೂರು ವಲಯ ಅಧ್ಯಕ್ಷ ಸುಖ್‌ರಾಜ್ ವಿನಯ್‌ಕಿಯಾ, ಸಂಸ್ಥಾಪಕ ಅಧ್ಯಕ್ಷ ಅಶೋಕ್ ಗುಲೇಚಾ, ಮಾಜಿ ಅಧ್ಯಕ್ಷ ಪ್ರವೀಣ್ ಲುಂಕಾರ್, ಮುಖ್ಯ ಕಾರ್ಯದರ್ಶಿ ದೀಪಕ್ ಬೋಹ್ರಾ, ಖಜಾಂಚಿ ಮನೋಹರ್ ಸಂಕ್ಲಾ, ಉಪಾಧ್ಯಕ್ಷ ನೇಮಿಚಂದ್ ಬಡೋಲಾ ಕುಶಾಲ್ ಪಾಲ್‌ರೇಚಾ, ಕಾರ್ಯದರ್ಶಿ ನವರತನ್ ಪಿಟಲಿಯಾ, ರಾಜೇಂದ್ರ ದೇಸರಾಲ, ಸುನೀಲ್ ಪಟ್ವಾ, ಮಹಿಳಾ ಘಟಕದ ಉಪಾಧ್ಯಕ್ಷ ಸಂತೋಷ್ ಗುಲೇಚಾ, ಕಾರ್ಯದರ್ಶಿ ಸೀಮಾ ಬೋಹ್ರಾ, ಪ್ರಾಯೋಜಕರಾದ ಸಂಪತ್‌ರಾಜ್ ಬಾಗ್‌ಮಾರ್ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಬೋಗಾದಿಯ ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷ ಕೆ.ಎ.ನಾಗಪ್ರಸಾದ್, ಖಜಾಂಚಿ ಎಸ್.ವಿ.ವೆಂಕಟೇಶ್, ಜಂಟಿ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿ ಹೆಚ್.ಎ.ಪ್ರಭಾಕರ, ಧರ್ಮದರ್ಶಿ ನಂ.ಶ್ರೀಕಂಠಕುಮಾರ್, ಎಂ.ಡಿ.ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಕೆ.ಆರ್. ಆಸ್ಪತ್ರೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವ



ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಹೆಚ್.ಪಿ.ಶೋಭಾ, ಮಾಜಿ ಡೀನ್ ಡಾ.ದಿನೇಶ್, ನಿವೃತ್ತ ಪ್ರೊಫೆಸರ್ ಡಾ.ರಂಗಸ್ವಾಮಿ, ಜಯಮಾಧವ್, ನೂತನಶ್ರೀ, ಡಾ.ನಯಾಜ್ ಪಾಶ, ಡಾ.ಚೇತನ್‌ಕುಮಾರ್, ಡಾ.ಕುಸುಮಾ, ಡಾ.ಪ್ರಕಾಶ್, ಶುಶ್ರೂಷಕರು, ಸೆಕ್ಯುರಿಟಿ ಸೂಪರ್‌ವೈಸರ್‌ಗಳಾದ ಮಹದೇವ, ಮಹಾದೇವಸ್ವಾಮಿ, ಸಿಬ್ಬಂದಿ ಇದ್ದರು.

ನಲ್ಲಿ-ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಸ್ವಾತಂತ್ರೋತ್ಸವ



ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ–ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಪ್ರಕಾಶ್, ಉಪಾಧ್ಯಕ್ಷ ಸುರೇಶ್‌ಕುಮಾರ್ ಎಂ.ಎಸ್, ನಿರ್ದೇಶಕರಾದ ಚಂದ್ರೇಗೌಡ, ಶಿವರಾಜ್, ರುದ್ರಸ್ವಾಮಿ, ಸಂತೋಷ್ ಕುಮಾರ್, ಹೆಬ್ಬಾಳ್ ಯೋಗೇಶ್, ಮಾ.ಜಾ.ಹುಸೇನ್, ಸದಸ್ಯರಾದ ಕುಮಾರ್, ರಮೇಶ್ ಉಪಸ್ಥಿತರಿದ್ದರು.

ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಇದೇ ವೇಳೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ವಿಶ್ರಾಂತ ಕುಲಪತಿ ಪ್ರೊ. ಪಿ.ಈಶ್ವರ ಭಟ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಆರ್.ನರಸಿಂಹ, ಆಡಳಿತ ಮಂಡಳಿ ಸದಸ್ಯರಾದ ಆರ್.ಎಸ್.ಮೋಹನ ಮೂರ್ತಿ, ಡಾ.ಟಿ.ಕೆ.ಉಮೇಶ್, ವಕೀಲ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂಸ್ಥಾನ್ ಕಾಲೇಜಿನಲ್ಲಿ 79ನೇ ಸ್ವಾತಂತ್ರೋತ್ಸವ ಆಚರಣೆ



ಹಿಂದೂಸ್ಥಾನ್ ಕಾಲೇಜಿನಲ್ಲಿ 79ನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಸಿಎಫ್‌ಟಿಆರ್‌ಐನ ನಿವೃತ್ತ ವಿಜ್ಞಾನಿ ಡಾ.ಸೌಭಾಗ್ಯ ಎಸ್.ಬಿ ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಜೆ.ಪ್ರಿಯಾ, ಮಾನವ ಸಂಪನ್ಮೂಲ ಮತ್ತು ಮುಖ್ಯ ನಿರ್ವಾಹಕರಾದ ಸುಜಿಮೋನ್ ಜೋಸೆಫ್, ಜನರಲ್ ಮ್ಯಾನೇಜರ್, ತಾಂತ್ರಿಕ ದೃಷ್ಟಿಕೋನ ಕಾರ್ಯನಿರ್ವಹಣಾ ಅಧಿಕಾರಿ ಜರ್ನೈಲ್ ಸಿಂಗ್ ಸಿಧು, ಬೋಧಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಸೋಮವಾರ 18 ಆಗಸ್ಟ್ 2025

ಬೋಳಾರೆ ರಂಗನಾಥ ಸ್ವಾಮಿಯ ಬ್ರಹ್ಮರಥೋತ್ಸವ

ನಾಡಿನ ನಾನಾ ಭಾಗಗಳಿಂದ ಹರಿದು ಬಂದ ಭಕ್ತ ಸಾಗರ

● ಶ್ರೀ ಕ್ಷೇತ್ರಕ್ಕೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ ಭೇಟಿ



ಶ್ರೀ ಉದ್ಭವ ಬೋಳಾರೆ ರಂಗನಾಥಸ್ವಾಮಿಯ ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡಿರುವ ಭಕ್ತ ಸಾಗರ

ಕೆ.ಆರ್.ಪೇಟೆ, ಆ.17– ತಾಲೂಕಿನ ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರ ಬೂಕನಕೆರೆ ಹೋಬಳಿಯ ಬೆಟ್ಟದ ಹೊಸೂರು ಗ್ರಾಮದ ಶ್ರೀ ಉದ್ಭವ ಬೋಳಾರೆ ರಂಗನಾಥಸ್ವಾಮಿಯವರ 11ನೇ ವರ್ಷದ ಬ್ರಹ್ಮರಥೋತ್ಸವವು ಸಡಗರ ಸಂಭ್ರಮದಿಂದ ನಡೆಯಿತು.

ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅವರು ಬೆಟ್ಟದ ಹೊಸೂರು ಗ್ರಾಮದ ಬೋಳಾರೆ ಶ್ರೀರಂಗನಾಥ ಸ್ವಾಮಿ ಸುಕ್ಷೇತ್ರಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಿದರು.

ಬ್ರಹ್ಮರಥೋತ್ಸವದಲ್ಲಿ ಭಾಗವಹಿಸಿದ್ದ ಸಾವಿರಾರು ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡಿದ ಸಚಿವ ಚೆಲುವರಾಯಸ್ವಾಮಿ ಹಬ್ಬ ಹರಿದಿನಗಳು, ಜಾತ್ರೆ, ಉತ್ಸವ ಹಾಗೂ ರಥೋತ್ಸವಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಹಬ್ಬದ ಸಂಭ್ರಮದಲ್ಲಿ ಜಾತಿ, ಮತ ಪಂಥಗಳಿಂದ ಮುಕ್ತವಾಗಿ, ಮೇಲು–ಕೀಳೆಂಬ ಭೇದ ಭಾವವಿಲ್ಲದೇ, ಎಲ್ಲರೂ ಒಂದಾಗಿ ಜಾತ್ರೆಯಲ್ಲಿ ಭಾಗವಹಿಸಿದಾಗ ಪರಸ್ಪರ ಸ್ನೇಹ ಸೌಹಾರ್ದತೆ ಹಾಗೂ ಪ್ರೀತಿ ವಿಶ್ವಾಸ, ಬಾಂಧವ್ಯಗಳು ವೃದ್ಧಿಯಾಗುವುದಲ್ಲದೆ, ಸಮಾಜದಲ್ಲಿ ಶಾಂತಿ ಸೌಹಾರ್ದತೆಯ ವಾತಾವರಣ ನಿರ್ಮಾಣವಾಗಲಿದೆ. ಬೋಳಾರೆ ಶ್ರೀರಂಗನಾಥಸ್ವಾಮಿ ಸುಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಅನುದಾನವನ್ನು ಸರ್ಕಾರದ ವತಿಯಿಂದ ದೊರಕಿಸಿಕೊಡಲು ಪ್ರಾಮಾಣಿಕವಾದ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಶಾಸಕ ಹೆಚ್.ಟಿ.ಮಂಜು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಸಮಾಜ ಸೇವಕ ಮಲ್ಲಿಕಾರ್ಜುನ್, ಜಿ.ಪಂ.ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಹರಳಹಳ್ಳಿ ವಿಶ್ವನಾಥ್, ಮುಜರಾಯಿ ಅಧಿಕಾರಿಗಳು ಹಾಗೂ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ಬೆಟ್ಟದ ಹೊಸೂರು ಉದ್ಭವ ಶ್ರೀ ಬೋಳಾರೆ ರಂಗನಾಥ ಸ್ವಾಮಿ ಕ್ಷೇತ್ರದ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಬೂಕನಕೆರೆ ಬಿ.ಟಿ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಎಂ.ಆರ್.ಸುದರ್ಶನ್, ಜಿಪಂ ಮಾಜಿ ಸದಸ್ಯ ಬಿ.ನಾಗೇಂದ್ರ ಕುಮಾರ್, ಸರ್ವಮಂಗಳ ವೆಂಕಟೇಶ್, ಜಯಮ್ಮ ಸ್ವಾಮಿಗೌಡ, ತಾ.ಪಂ.ಮಾಜಿ ಸದಸ್ಯೆ ಮೀನಾಕ್ಷಿ ಪುಟ್ಟರಾಜು, ಸೇರಿದಂತೆ 10,000ಕ್ಕೂ ಹೆಚ್ಚು ಭಕ್ತಾದಿಗಳು ಬ್ರಹ್ಮರಥೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾಮಿಯ ದರ್ಶನ ಪಡೆದು ಅನ್ನಪ್ರಸಾದ ಸ್ವೀಕರಿಸಿದರು.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಆ.17– ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಆ.19 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದ ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ. ಹೊಸೂರು, ಹಂಪಾಪುರ, ಕಲ್ಮಂಟಿ ದೊಡ್ಡಿ, ಸೌದೇನಹಳ್ಳಿ, ಬೆಟ್ಟ ಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ. ಹೊನ್ನೇನಹಳ್ಳಿ, ಬಿದರಕಟ್ಟೆ, ಬೆನ್ನಹಟ್ಟಿ, ಮನುಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಇದೇ ರೀತಿ ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಪಣಕನ ಹಳ್ಳಿ, ಗೊರವಾಲೆ ಎನ್.ಜೆ.ವೈ ಮಾರ್ಗ ಮತ್ತು ಸಂಪಹಳ್ಳಿ ಐ.ಪಿ ಮಾರ್ಗದಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಗ್ರಾಮಾಂತರ ಪ್ರದೇಶಗಳು ಸಂಪಹಳ್ಳಿ, ಗೊರವಾಲೆ, ಬಿ. ಹೊಸಹಳ್ಳಿ, ಬೀರಗೌಡನಹಳ್ಳಿ, ಶಂಭೂನಹಳ್ಳಿ, ಕೋಣನಹಳ್ಳಿ, ಪಣಕನಹಳ್ಳಿ, ಹೊಳಲು, ಎಂ.ಜಿ. ಬಡಾವಣೆ, ತಂಡಸನಹಳ್ಳಿ, ಸಿದ್ದಯ್ಯನಕೊಪ್ಪಲು, ವೈ.ಯರಹಳ್ಳಿ, ಅವ್ವೇರಹಳ್ಳಿ, ಸಂಪಹಳ್ಳಿ ಐ.ಪಿ ಮಾರ್ಗ ಹಾಗೂ ಈ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೃಷಿ ಸಚಿವರಿಂದ ರೈತರಿಗೆ ಮೇವು ಕತ್ತರಿಸುವ ಯಂತ್ರ ವಿತರಣೆ



ಸಚಿವ ಚಲುವರಾಯಸ್ವಾಮಿ ರೈತರಿಗೆ ಮೇವು ಕತ್ತರಿಸುವ ಯಂತ್ರ ವಿತರಿಸಿದರು.

ನಾಗಮಂಗಲ: ಕೃಷಿ ಇಲಾಖೆಯ ಸಹಯೋಗದಲ್ಲಿ ಪಹಣಿ ಹೊಂದಿದ್ದು, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ಮೇವು ಕತ್ತರಿಸುವ ಯಂತ್ರಗಳನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿತರಿಸಿದರು.

ತಾಲೂಕಿನ ಕಂಚಹಳ್ಳಿ ಮತ್ತು ಚೋಳೇನಹಳ್ಳಿ ಗ್ರಾಮಗಳಲ್ಲಿ 60ಲಕ್ಷ ರೂ. ಅನುದಾನದಲ್ಲಿ ಸುಮಾರು 150ಕ್ಕೂ ಹೆಚ್ಚು ರೈತರಿಗೆ ಮೇವು ಕತ್ತರಿಸುವ ಯಂತ್ರಗಳನ್ನು ವಿತರಿಸಿ ಮಾತನಾಡಿದ ಸಚಿವರು, ಗ್ರಾಮೀಣ ಪ್ರದೇಶದ ರೈತರು ತಮ್ಮ ಎಂದಿನ ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಉಪ ಆದಾಯವನ್ನು ಪಡೆದುಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಹಸು ಎಮ್ಮೆಗಳಿಗೆ ಮೇವು ನೀಡುವುದನ್ನು ಸುಲಭವಾಗಿಸಲು ಮೇವು ಕತ್ತರಿಸುವ ಯಂತ್ರಗಳನ್ನು ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವ ಗ್ರಾಮದ ಎಲ್ಲಾ ರೈತರಿಗೂ ವಿತರಿಸಲಾಗುತ್ತಿದೆ ಎಂದರು.

ಒಂದು ಯಂತ್ರಕ್ಕೆ ತೆರೆದ ಮಾರುಕಟ್ಟೆಯಲ್ಲಿ ಸುಮಾರು 35–40 ಸಾವಿರ ಬೆಲೆಯಿದ್ದು, ಇಲಾಖೆ ವತಿಯಿಂದ ನೀಡುವ ಯಂತ್ರ ನಿಮಗೆ ಉಚಿತವಾಗಿ ಸಿಗುತ್ತದೆ. ರೈತರು 19 ಸಾವಿರ ಹಣ ಕಟ್ಟಿದರೆ ಇಲಾಖೆ 30 ಸಾವಿರ ಹಣವನ್ನು ವಾಪಸ್ ಕೊಟ್ಟು ಯಂತ್ರವನ್ನೂ ಸಹ ಉಚಿತವಾಗಿ ನೀಡಲಾಗುತ್ತದೆ. ಇದರಿಂದ ರೈತರಿಗೆ ಉಚಿತವಾಗಿ ಯಂತ್ರಗಳು ಸಿಗುವುದರ ಜೊತೆಗೆ ಹೆಚ್ಚುವರಿ ಯಾಗಿ 11 ಸಾವಿರ ಹಣವೂ ಸಿಗುತ್ತದೆ ಎಂದರು.

ಈ ಯೋಜನೆಯಡಿ ತಾಲೂಕಿನ ದೇವಲಾಪುರ ಹೋಬಳಿಯ ಕೆಲವು ಗ್ರಾಮಗಳು ಮತ್ತು ಹೊನ್ನಾವರ ಗ್ರಾಮದ ರೈತರಿಗೆ ಈಗಾಗಲೇ ಯಂತ್ರಗಳನ್ನು ವಿತರಿಸಲಾಗಿದ್ದು, ಈಗ ಕಂಚಹಳ್ಳಿ ಮತ್ತು ಚೋಳೇನಹಳ್ಳಿ ಗ್ರಾಮದ ರೈತರಿಗೆ ವಿತರಿಸಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡ ಸುನೀಲ್ ಲಕ್ಷ್ಮೀಕಾಂತ್, ಕದಬಹಳ್ಳಿ ವಿಎಸ್ ಎಸ್‌ಎನ್ ಅಧ್ಯಕ್ಷ ಎನ್.ಟಿ.ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಚೋಳೇನಹಳ್ಳಿ ರಘು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಜಿ.ಮಂಜುನಾಥ್, ಮುಖಂಡರಾದ ಕಂಚಹಳ್ಳಿ ಜಯರಾಂ, ಭೈರೇಗೌಡ, ಅದ್ದಿಹಳ್ಳಿ ಕುಮಾರ್, ಕೆಲಗೆರೆ ದೇವರಾಜು, ಪುಟ್ಟರಾಜು, ಕಾಂತರಾಜು, ಶ್ರೀನಿವಾಸ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್, ಯುವರಾಜ್, ಜಯರಾಮು, ಕಂಚಳ್ಳಿ ಜಯರಾಮ್ ಸೇರಿದಂತೆ ಇತರರು ಇದ್ದರು.

ಆರ್ಥಿಕ ನಾಯಕತ್ವ ದೇಶವನ್ನು ಮುನ್ನಡೆಸಿದರೆ ಪ್ರಜೆಗಳು ಗ್ರಾಹಕರಾಗುತ್ತಾರೆ

ತನಿಖಾ ಪತ್ರಿಕೋದ್ಯಮ ಅಡುಗೆ ಮನೆಯಿಂದ ಬೆಡ್ ರೂಮ್ ಕಡೆಗೆ ತಿರುಗಿದೆ: ಕೆವಿಪಿ



ಪತ್ರಿಕಾ ದಿನಾಚರಣೆ, ಅಭಿನಂದನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕೆಆರ್‌ಎಸ್,ಆ.17– ನಾವು 79ನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿರುವ ಹೊತ್ತಿನಲ್ಲೇ ನಮ್ಮ ದೇಶ ರಾಜಕೀಯ ನಾಯಕತ್ವದಿಂದ ಆರ್ಥಿಕ ನಾಯಕತ್ವದ ಕೈಗೆ ಜಾರಿರುವುದರ ಪರಿಣಾಮಗಳನ್ನು ಪತ್ರಕರ್ತರು ಪತ್ತೆ ಹಚ್ಚಬೇಕಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಕರೆ ನೀಡಿದರು.

ಭಾನುವಾರ ಮಂಡ್ಯ ಜಿಲ್ಲೆಯ ಕೆಆರ್‌ಎಸ್‌ನಲ್ಲಿ ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ಅಭಿನಂದನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯ ಹೋರಾಟವನ್ನು ಯಶಸ್ವಿಯಾಗಿ ಮುನ್ನಡೆಸಿದ್ದ ನಮ್ಮ ಭಾರತೀಯ ಪತ್ರಿಕೋದ್ಯಮ ರೂಪಿಸಿದ್ದ ಮಾದರಿಗಳ ಮೇಲೆ ಧೂಳು ಕುಳಿತಿದೆ. ಈ ಧೂಳನ್ನು ಕೊಡವಿ ಮತ್ತೆ ನಮ್ಮ ಮಾದರಿಗಳಿಗೆ ಜೀವಕೊಡಬೇಕಿದೆ ಎಂದರು.

ಸ್ವಾತಂತ್ರ್ಯ ಹೋರಾಟದ ಹೊಸ್ತಿಲಲ್ಲಿದ್ದ ನಮ್ಮ ಪತ್ರಿಕೋದ್ಯಮಕ್ಕೆ ಹಣಕಾಸಿನ ಬಡತನವಿತ್ತು. ಆದರೆ ದೇಶವನ್ನು ಕಟ್ಟುವ ರಾಜಕೀಯ ಮತ್ತು ಸಾಮಾಜಿಕ ಇಚ್ಛಾಶಕ್ತಿಯಲ್ಲಿ ಶ್ರೀಮಂತಿಕೆ ಇತ್ತು. ಆದರೆ ಇಂದು ಪತ್ರಿಕೋದ್ಯಮ ಹಣಕಾಸಿನ ಬಡತನದಿಂದ ಮೇಲೆ ಬಂದಿದ್ದು ಸಾಮಾಜಿಕ ಇಚ್ಛಾಶಕ್ತಿಯ ಬಡತನಕ್ಕೆ ತುತ್ತಾಗಿದೆ. ಇದಕ್ಕೆ ದೇಶ ರಾಜಕೀಯ ನಾಯಕತ್ವದ ಕೈ ಜಾರಿ ಆರ್ಥಿಕ ನಾಯಕತ್ವದ ಕೈವಶವಾಗಿರುವುದೂ ಮುಖ್ಯ ಕಾರಣ ಎಂದು ವಿವರಿಸಿದರು.


ಮೊದಲೆಲ್ಲಾ ಆರ್ಥಿಕ ಶಕ್ತಿಗಳನ್ನು ಸರ್ಕಾರಗಳು ನಿಯಂತ್ರಿಸುತ್ತಿದ್ದವು. ಹೀಗಾಗಿ ಬ್ಯಾಂಕ್‌ಗಳ ರಾಷ್ಟ್ರೀಕರಣ, ಭೂ ಸುಧಾರಣೆ, ಉಚಿತ ಶಿಕ್ಷಣ, ಕಾರ್ಮಿಕರ ಹಕ್ಕುಗಳು ಮತ್ತು ಕಲ್ಯಾಣ ರಾಜ್ಯದ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಾಧ್ಯವಾಗಿತ್ತು. ಆದರೆ ಇಂದು ಆರ್ಥಿಕ ಶಕ್ತಿಗಳೇ ಸರ್ಕಾರಗಳನ್ನು ನಿಯಂತ್ರಿಸುತ್ತಾ, ದೇಶವನ್ನು ಮುನ್ನಡೆಸುತ್ತಿರುವುದರಿಂದ ಇಡೀ ಸಾಮಾಜಿಕ ವ್ಯವಸ್ಥೆಯೇ ತಲೆ ಕೆಳಗಾಗಿ ಪ್ರಜೆಗಳು ಕೇವಲ ಗ್ರಾಹಕರಾಗಿದ್ದಾರೆ. ನಮ್ಮದೇ ಬ್ಯಾಂಕ್ ಅಕೌಂಟಿನಿಂದ ನಮ್ಮದೇ 500 ರೂಪಾಯಿ ತೆಗೆದರೂ ಅದಕ್ಕೆ ಶುಲ್ಕ ಬೀಳುತ್ತಿದೆ. ಬಡ ಬೋರೇಗೌಡ ಬೆಳಗ್ಗೆ ಎದ್ದು ಮನೆಯಿಂದ ಹೊರಗೆ ಕಾಲಿಟ್ಟರೆ ತೆರಿಗೆ, ಶುಲ್ಕ, GST, ದಂಡ, ಬಡ್ಡಿ, ಚಕ್ರಬಡ್ಡಿಗಳನ್ನು ದಾಟಿಕೊಂಡೇ ವಾಪಾಸ್ ಮನೆಗೆ ಬರಬೇಕು. ಬೀಡಿ ಬೆಂಕಿಪೊಟ್ಟಣ, ಬಾಳೆ ಹಣ್ಣಿಗೂ GST ಕಟ್ಟಿಯೇ ಮನೆಗೆ ಬರಬೇಕಾದ ಪರಿಸ್ಥಿತಿ ಇದೆ. ಯಾಕೆ ಹೀಗಾಯ್ತು ಎನ್ನುವ ಪ್ರಶ್ನೆಯನ್ನು ಕೇಳಬೇಕಾದ ಪತ್ರಿಕೋದ್ಯಮಕ್ಕೆ ಮೈ ಮರೆವು ಬಂದಿರುವುದು ಅಪಾಯದ ಸಂಕೇತ ಎಂದು ಹೇಳಿದರು.

ಹೀಗಾಗಿ ಜನರ ಅನ್ನದ ತಟ್ಟೆ, ಅಡುಗೆ ಮನೆಯ ಕಷ್ಟಗಳ ಮೇಲೆ ಕಣ್ಣಿಟ್ಟಿದ್ದ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ತನಿಖಾ ಪತ್ರಿಕೋದ್ಯಮವನ್ನು ಬೆಡ್ ರೂಮಿನ ಕಡೆಗೆ ತಿರುಗಿಸಿಬಿಟ್ಟಿದ್ದಾರೆ. ಜನರ ಹೊಟ್ಟೆ ಬಟ್ಟೆ ಕಡೆಗೆ ಕಣ್ಣಿಟ್ಟಿದ್ದ ಕ್ಯಾಮರಾಗಳು ಹೊಟ್ಟೆ ಕೆಳಗಿನ ಸೊಂಟಕ್ಕೆ ಗಂಟುಬಿದ್ದಿವೆ. ಇದು ಭಾರತೀಯ ಪತ್ರಿಕೋದ್ಯಮದ ಮಾದರಿ ಅಲ್ಲ. ನಾವೀಗ ಪತ್ರಿಕಾ ದಿನಾಚರಣೆ ಯನ್ನು ಆಚರಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ ನಮ್ಮ ಮಾದರಿಗಳ ಮೇಲೆ ಕುಳಿತಿರುವ ಧೂಳನ್ನು ಕೊಡವಿಕೊಳ್ಳಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಕೆ.ವಿ.ಪ್ರಭಾಕರ್ ಹಾಗೂ ಡಿಯುಡಬ್ಲೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕಾರ್ಯದರ್ಶಿಗಳಾದ ಮತ್ತೀಕೆರೆ ಜಯರಾಂ, ಸೋಮಶೇಖರ್ ಕೆರಗೋಡು, ಜಿಲ್ಲಾ ಸಂಘದ ಮಾಜಿ ಅಧ್ಯಕ್ಷರಾದ ಕೆ.ಸಿ.ಮಂಜುನಾಥ ಮತ್ತು ಬಿ.ಪಿ.ಪ್ರಕಾರ್ ಅವರನ್ನು ಅಭಿನಂದಿಸಲಾಯಿತು. ಮಂಡ್ಯ ಜಿಲ್ಲೆಯ ಹಿರಿಯ ಪತ್ರಕರ್ತರಾದ ರವಿಕುಮಾರ್ ಅವರಿಗೆ ಜೀವಮಾನ ಶ್ರೇಷ್ಠ ಪ್ರಶಸ್ತಿ ಪತ್ರಕರ್ತರಾದ ಎಚ್.ಬಿ.ರವಿ, ಸುನೀಲ್‌ಕುಮಾರ್, ಗೋವಿಂದರಾಜು, ಸೋಮಶೇಖರ್, ಕಾದಲ್ ಮತ್ತು ಶೇಖರ್ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದರೆ, ಎಸ್‌ಎಸ್‌ಎಲ್‌ಸಿ, ಪಿಯುಸಿ ಸೇರಿದಂತೆ ಉನ್ನತ ವಿದ್ಯಾಭ್ಯಾಸದಲ್ಲಿ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳಿಗೆ ನಗದು ಬಹುಮಾನ ವಿತರಿಸಲಾಯಿತು. ಜೊತೆಗೆ ಕ್ರೀಡಾಕೂಟದಲ್ಲಿ ಗೆದ್ದ ಪತ್ರಕರ್ತರ ಕುಟುಂಬಕ್ಕೆ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕರಾದ ರವಿಕುಮಾರ್ ಗಣಿಗ, ದರ್ಶನ್ ಪುಟ್ಟಣ್ಣಯ್ಯ, ಕೆ.ವಿವೇಕಾನಂದ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಹಾಗೂ ನಟ ಸಾಧು ಕೋಕಿಲಾ, ಉದ್ಯಮಿ ಜಫ್ರುಲ್ಲಾಖಾನ್, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಎನ್. ನವೀನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್, ಖಜಾಂಚಿ ನಂಜುಂಡಸ್ವಾಮಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಪತ್ರಕರ್ತರು ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಮರಿಲಿಂಗಯ್ಯ ನಿಧನ



ಮಳವಳ್ಳಿ, ಆ.17– ತಾಲೂಕಿನ ಚೆನ್ನೇಗೌಡನದೊಡ್ಡಿ ಗ್ರಾಮದ ನಿವಾಸಿ ಹಾಗೂ ನಿವೃತ್ತ ಕೆಇಬಿ ನೌಕರ ಮರಿಲಿಂಗಯ್ಯ(84) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 10 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಏಳು ದಿನ ಗಡುವು

ಕೆಲವು ಪಕ್ಷಗಳು ಮತ್ತು ನಾಯಕರು ವಿಶೇಷ ತೀವ್ರ ಪರಿಷ್ಕರಣೆಯ ಬಗ್ಗೆ ತಪ್ಪು ಮಾಹಿತಿ ಹರಡುತ್ತಿರುವುದು ಕಳವಳಕಾರಿ. ಬಿಹಾರದಲ್ಲಿ ಕರಡು ಮತದಾರರ ಪಟ್ಟಿಯ ಕುರಿತು ಹಕ್ಕು ಮತ್ತು ದೂರುಗಳನ್ನು ಸಲ್ಲಿಸಲು ಎಲ್ಲಾ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಅವಕಾಶ ನೀಡಿದೆ. ಇದಕ್ಕೆ ಇನ್ನೂ 15 ದಿನ ಸಮಯಾವಕಾಶವಿದೆ ಎಂದರು. ಭಾರತೀಯ ಚುನಾವಣಾ ಆಯೋಗ ತಾಯಂದಿರು, ಸಹೋದರಿಯರು ಸೇರಿದಂತೆ ಮತದಾರರ ಸಿಸಿಟಿವಿ ವಿಡಿಯೋ ಹಂಚಿಕೊಳ್ಳಬೇಕೇ?. ಮತದಾರರ ಪಟ್ಟಿಯಲ್ಲಿ ಇರುವವರು, ತಮ್ಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ಮಾತ್ರ ಮತ ಚಲಾಯಿಸಬಹುದಷ್ಟೇ. ಲೋಕಸಭಾ ಚುನಾವಣೆಯ ಪ್ರಕ್ರಿಯೆಯಲ್ಲಿ 1 ಕೋಟಿಗೂ ಹೆಚ್ಚು ಉದ್ಯೋಗಿಗಳು, 10 ಲಕ್ಷಕ್ಕೂ ಹೆಚ್ಚು ಬಿಎಲ್‌ಎಗಳು, 20 ಲಕ್ಷಕ್ಕೂ ಹೆಚ್ಚು ಬಿಎಲ್‌ಒಗಳು ಕೆಲಸ ಮಾಡುತ್ತಾರೆ. ಅಂತಹ ಸನ್ನಿವೇಶದಲ್ಲಿ, ಮತ ಕಳ್ಳತನಕ್ಕೆ ಯಾವುದೇ ಅವಕಾಶವಿದೆಯೇ? ಎಂದು ಪ್ರಶ್ನಿಸಿದರು.

ಗಗನಯಾತ್ರಿ ಶುಭಾಂಶು ಶುಕ್ಲಾ

ಎಂದು ಹೇಳಲಾಗಿದೆ. ಐಎಸ್‌ಎಸ್‌ನಲ್ಲಿ 18 ದಿನಗಳನ್ನು ಕಳೆದ ನಂತರ ಗಗನಯಾತ್ರಿ ಕಳೆದ ತಿಂಗಳು ಭೂಮಿಗೆ ಮರಳಿದ್ದರು. ಈ ಅವಧಿಯಲ್ಲಿ ಅವರು ಭಾರತಕ್ಕೆ ಸಂಬಂಧಿಸಿದ 7 ನಿರ್ದಿಷ್ಟ ಪ್ರಯೋಗಗಳನ್ನು ನಡೆಸಿದ್ದಾರೆ. ಅವುಗಳನ್ನು ಈಗ ಭಾರತೀಯ ವಿಜ್ಞಾನಿಗಳು ಪರಿಶೀಲನೆಗಾಗಿ ಮರಳಿ ತರಲಾಗಿದ್ದು, ಫಲಿತಾಂಶಗಳು ಶೀಘ್ರದಲ್ಲೇ ಬರುವ ನಿರೀಕ್ಷೆಯಿದೆ. ಶುಭಾಂಶು ಶುಕ್ಲಾ ಅವರು ಭಾರತಕ್ಕೆ ಮರಳಿರುವ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ಭಾರತದ ಬಾಹ್ಯಾಕಾಶ ವೈಭವ ದೇಶದ ಮಣ್ಣನ್ನು ಸ್ಪರ್ಶಿಸಿದೆ. ಭಾರತ ಮಾತೆಯ ಪುತ್ರ ಗಗನಯಾತ್ರಿ ಶುಭಾಂಶು ಶುಕ್ಲಾ ಇಂದು ಬೆಳಗ್ಗಿನ ಜಾವ ದೆಹಲಿಗೆ ಬಂದಿಳಿದರು. ಅವರೊಂದಿಗೆ ಮತ್ತೊಬ್ಬ ಸಮಾನ ಸಾಧನೆ ಮಾಡಿದ, ಭಾರತದ ಮೊದಲ ಮಾನವ ಗಗನಯಾನಕ್ಕೆ ಆಯ್ಕೆಯಾದ ಗಗನಯಾತ್ರಿಗಳಲ್ಲಿ ಒಬ್ಬರಾದ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಕೂಡ ಭಾರತಕ್ಕೆ ಮರಳಿದ್ದಾರೆ. ಬಾಲಕೃಷ್ಣ ಅವರು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಮಿಷನ್‌ಗೆ ಭಾರತದ ನಿಂಯೋಜಿತ ಬ್ಯಾಕಪ್ ಆಗಿದ್ದರು ಎಂದು ಹೇಳಿದ್ದಾರೆ.

ಏರ್ ಶೋಗೆ ಕೇಂದ್ರ ಮೌಖಿಕ ಅನುಮತಿ

ಈ ಬಗ್ಗೆ ಮೌಖಿಕವಾಗಿ ಒಪ್ಪಿಗೆ ಸೂಚಿಸಿದೆ. ಆದರೆ ಅಧಿಕೃತವಾಗಿ ತಿಳಿಸಿಲ್ಲ. ಜಿಲ್ಲಾಡಳಿತದಿಂದ ಅಧಿಕೃತ ಸಂವಹನಕ್ಕಾಗಿ ಕಾಯುತ್ತಿದ್ದೇವೆ. ಅದು ಬಂದ ನಂತರ, ದಸರಾ ವಾಯು ಪ್ರದರ್ಶನವನ್ನು ಆಯೋಜಿಸಲು ಸಿದ್ಧತೆಗಳು ತಕ್ಷಣವೇ ಪ್ರಾರಂಭವಾಗಲಿದೆ ಎಂದು ದಸರಾ ವಿಶೇಷ ಅಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಮತ್ತೊಂದು ಪ್ರಮುಖ ಆಕರ್ಷಣೆಯಾಗಿರುವ ಬಹುನಿರೀಕ್ಷಿತ ಹೆಲಿ ರೈಡ್ ಕುರಿತು ಪ್ರತಿಕ್ರಿಯಿಸಿದ ಅವರು, ಹೆಲಿ ರೈಡ್ ನಡೆಸುವುದು ಖಾಸಗಿ ಸಂಸ್ಥೆ. ಜಿಲ್ಲಾಡಳಿತಕ್ಕೆ ಖಾಸಗಿ ಸಂಸ್ಥೆಗಳಿಂದ ಯಾವುದೇ ಪ್ರಸ್ತಾವನೆ ಬಂದಿಲ್ಲ. ಬಂದರೆ ಸ್ವೀಕರಿಸಿ, ಪರಿಶೀಲನೆ ನಡೆಸಿ ಅನುಮತಿ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಶರಣಾದ ರಿಯಲ್ ಎಸ್ಟೇಟ್ ಉದ್ಯಮಿ

ತಾನೆ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡು ಪೊಲೀಸರಿಗೆ ಶರಣಾಗಿದ್ದಾನೆ. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುಮಣಿ, ಸುಂದರ ರಾಜ್, ವಿಜಯನಗರ ಉಪವಿಭಾಗದ ಎಸಿಪಿ ರವಿಪ್ರಸಾದ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಸಿ.ಪಿ. ರಾಧಾಕೃಷ್ಣನ್ ಎನ್‌ಡಿಎ ಅಭ್ಯರ್ಥಿ

ನಾವು ವಿರೋಧ ಪಕ್ಷದ ನಾಯಕರನ್ನು ಸಂಪರ್ಕಿಸಿದ್ದೇವೆ ಎಂದು ರಾಧಾಕೃಷ್ಣನ್ ಹೆಸರನ್ನು ಘೋಷಿಸುತ್ತಾ ನಡ್ಡಾ ಹೇಳಿದರು. ಸಿಪಿ. ರಾಧಾಕೃಷ್ಣನ್ ಒಬ್ಬ ಪರಿಪೂರ್ಣ ರಾಜಕಾರಣಿ ಎಂದು ಪರಿಗಣಿಸಲ್ಪಟ್ಟಿದ್ದಾರೆ. ತಮಿಳುನಾಡಿನಲ್ಲಿ ಸಮಾಜದ ಎಲ್ಲಾ ವರ್ಗಗಳಲ್ಲಿ ಗೌರವವನ್ನು ಹೊಂದಿದ್ದಾರೆ ಎಂದು ನಡ್ಡಾ ಹೇಳಿದರು. ಜುಲೈ 21 ರಂದು ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧಂಖರ್ ಅವರ ಹಠಾತ್ ರಾಜೀನಾಮೆಯ ತೆರವಾಗಿದ್ದ ಉಪ ರಾಷ್ಟ್ರಪತಿ ಹುದ್ದೆಗೆ ಚುನಾವಣಾ ಆಯೋಗ ನಂತರ ಇದು ಬಂದಿದೆ. ಆರೋಗ್ಯ ಕಾರಣಗಳನ್ನು ಉಲ್ಲೇಖಿಸಿ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಧಂಖರ್ ರಾಜೀನಾಮೆ ನೀಡಿದ್ದರು.

ಹೋಟೆಲ್ ಮಾಲೀಕನ ಹತ್ಯೆಗೈದ ಡಕಾಯಿತರು

ಮಾಡಿಸದ ಪರಿಣಾಮ ದರೋಡೆಕೋರರ ಚಲನವಲನಗಳು ಕೂಡ ಸೆರೆಯಾಗದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ವಿರುದ್ಧ ಕಿಡಿಕಾರಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಿರುಗಾವಲು ಗ್ರಾಮದಲ್ಲಿ ಬೆಳಗ್ಗಿನ ಜಾವ 2ರಿಂದ 3 ಗಂಟೆ ಸಮಯದಲ್ಲಿ ಈ ಘಟನೆ ಸಂಭವಿಸಿದ್ದು, ಮಹಾಲಕ್ಷ್ಮಿ ಜ್ಯುವೆಲರ್ಸ್‌ನಲ್ಲಿ ಗ್ಯಾಸ್ ಕಟ್ಟರ್‌ನಿಂದ ಶೆಟರ್ ಕತ್ತರಿಸಿ, ನೂರು ಗ್ರಾಂಗೂ ಹೆಚ್ಚು ಚಿನ್ನ, ಸುಮಾರು ಒಂದು ಕೆ.ಜಿ.ಯಷ್ಟು ಬೆಳ್ಳಿ ಕದ್ದು ಪರಾರಿಯಾಗುವಾಗ ಪಕ್ಕದಲ್ಲೇ ಇದ್ದ ಮಹದೇಶ್ವರ ಹೋಟೆಲ್‌ನ ಮಾಲೀಕರ ಮಾದಪ್ಪ ಅವರು ಬೆಳಿಗ್ಗೆಯೇ ಹೋಟೆಲ್ ತೆರೆಯಲು ಸಿದ್ಧತೆಗಾಗಿ 2.30ರ ಸಮಯದಲ್ಲಿ ಹೋಟೆಲ್‌ಗೆ ಬಂದಾಗ ಶಬ್ಧ ಕೇಳಿ ದರೋಡೆಕೋರರನ್ನು ನೋಡಿದ್ದಾರೆ. ಆಗ ಗಾಬರಿಯಾದ ಕಳ್ಳರು ಮಾದಪ್ಪ ಅವರನ್ನು ಉಸಿರುಗಟ್ಟಿಸಿ ಕೊಂದಿದ್ದಾರೆ ಎಂದು ಪ್ರಕರಣದ ಬಗ್ಗೆ ವಿವರಿಸಿದರು.

ಈಗಾಗಲೇ ನಾವು ಎಲ್ಲಾ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸೋಕೋ, ಫಿಂಗರ್‌ಪ್ರಿಂಟ್, ಶ್ವಾನ ದಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಪ್ರಕರಣದ ಬಗ್ಗೆ ತನಿಖೆ ಆರಂಭಿಸಿದ್ದೇವೆ. ಎಲ್ಲಾ ಆಯಾಮಗಳಿಂದ ತನಿಖೆ ಮಾಡುತ್ತಿದ್ದೇವೆ. ಆರೋಪಿತರು ಯಾರೇ ಇದ್ದರೂ ಬಂಧಿಸುವ ಕೆಲಸ ಮಾಡುವುದಾಗಿ ಸ್ಪಷ್ಟಪಡಿಸಿದರು. ಆರೋಪಿಗಳ ಪತ್ತೆಗೆ ನಾಲ್ಕು ತಂಡಗಳನ್ನು ರಚಿಸಿದ್ದು, ಈ ತಂಡವು ಸಾಧ್ಯವಾದಷ್ಟು ಬೇಗ ಆರೋಪಿಗಳನ್ನು ಪತ್ತೆ ಹಚ್ಚಲಿದೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.

ಮಹಾಲಕ್ಷ್ಮಿ ಜುವೆಲರಿ ಅಂಗಡಿ ಬಹಳ ವರ್ಷಗಳಿಂದ ಇಲ್ಲಿದೆ. ಲಾಕರ್‌ನಲ್ಲಿ ಒಂದೂವರೆ ಕೆ.ಜಿ.ಯಷ್ಟು ಆಭರಣಗಳಿದ್ದವು. ಆದರೆ ಕಳ್ಳರು ಅಲ್ಲಿಯವರೆಗೂ ಹೋಗದೇ ಶೋಕೇಸ್ ಬಳಿ ಇದ್ದ ನೂರು ಗ್ರಾಂ ಚಿನ್ನವನ್ನು ಕದ್ದಿದ್ದಾರೆ. ದರೋಡೆಕೋರರು ಗ್ಯಾಸ್‌ಕಟ್ಟರ್, ಗ್ಲೌಸ್ ಬಳಸಿದ್ದಾರೆ. ಜೊತೆಗೆ ಮಾದಪ್ಪ ಅವರ ಮೇಲೆ ಯಾವುದೇ ಆಯುಧಗಳನ್ನು ಬಳಸದೇ ಕೈಯಿಂದ ಹತ್ಯೆ ಮಾಡಿದ್ದಾರೆ. ಉಂಗುರ, ಓಲೆಗಳು, ಇನ್ನಿತರೆ ಸಣ್ಣಪುಟ್ಟ ಚಿನ್ನಾಭರಣಗಳನ್ನು ಕದ್ದಿದ್ದು, ಆರೋಪಿಗಳನ್ನು ಆದಷ್ಟು ಬೇಗ ಬಂಧಿಸುತ್ತೇವೆ ಎಂದು ಹೇಳಿದರು.

ಇನ್ನು ಮುಂದೆ ಪ್ಲಾಸ್ಟಿಕ್ ಬಳಕೆ ನಿಷೇಧ

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ ಅವರು, ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಲ್ಲ, ಅವುಗಳು ಪರಿಸರ ಸ್ವಚ್ಛತೆಯ ಸಂಕೇತವೂ ಆಗಬೇಕು. ಈ ಅಭಿಯಾನದ ಮೂಲಕ ರಾಜ್ಯದ ಎಲ್ಲಾ ದೇವಾಲಯಗಳಲ್ಲಿ ಪರಿಸರ ಸ್ನೇಹಿ ವಾತಾವರಣ ನಿರ್ಮಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು. ಈ ಕ್ರಮವು ಪರಿಸರ ಸಂರಕ್ಷಣೆಗೆ ದೊಡ್ಡ ಮಟ್ಟದಲ್ಲಿ ಸಹಾಯಕವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಅಭಿಯಾನದ ವಿವರಗಳು:

● **ಪ್ಲಾಸ್ಟಿಕ್ ಮುಕ್ತ ದೇವಾಲಯಗಳು:** ರಾಜ್ಯದ 36,000 ಮುಜರಾಯಿ ದೇವಾಲಯಗಳಲ್ಲಿ ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಬೌಲ್, ಪ್ಲಾಸ್ಟಿಕ್ ತಟ್ಟೆ ಮತ್ತು ಪ್ಲಾಸ್ಟಿಕ್ ಬ್ಯಾಗ್‌ಗಳಂತಹ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

● **ಪ್ರಸಾದ ವಿತರಣೆಯಲ್ಲಿ ಬದಲಾವಣೆ:** ಇನ್ಮುಂದೆ ಪ್ರಸಾದವನ್ನು ಪ್ಲಾಸ್ಟಿಕ್ ತಟ್ಟೆ ಅಥವಾ ಲೋಟದಲ್ಲಿ ನೀಡುವಂತಿಲ್ಲ. ದೇವಾಲಯಗಳು ಪರ್ಯಾಯ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಬೇಕಿದೆ.

● **ಪರಿಸರ ಜಾಗೃತಿ:** 'ಪರಿಸರ ಉಳಿಸಿ, ಪರಿಸರ ಬೆಳೆಸಿ' ಎಂಬ ಧ್ಯೇಯ ವಾಕ್ಯದೊಂದಿಗೆ ಈ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ದೇವಾಲಯಕ್ಕೆ ಭೇಟಿ ನೀಡುವ ಭಕ್ತಾದಿಗಳಲ್ಲಿ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಲಾಗುವುದು.

● **ಕಟ್ಟುನಿಟ್ಟಿನ ಕ್ರಮ:** ಒಂದು ವೇಳೆ, ಯಾವುದೇ ದೇವಾಲಯದಲ್ಲಿ ಈ ನಿಯಮವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ವಸ್ತುಗಳು ಕಂಡುಬಂದರೆ, ಆಯಾ ದೇವಾಲಯದ ಆಡಳಿತ ಮಂಡಳಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.

ಸದನದಲ್ಲಿ ಗೃಹ ಸಚಿವರಿಂದ ಉತ್ತರ

ಠಾಣೆಗೆ ದೂರು ದಾರನ್ನು ಕರೆಸಿಕೊಂಡು ಕೋರ್ಟ್‌ಗೆ ತಂದಿದ್ದ ತಲೆ ಬುರುಡೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ ಎಂದು ತಿಳಿಸಿದರು. ಯಾರೂ ಕೂಡ ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾಗುತ್ತಿರುವ ಈ ಪ್ರಕರಣದಲ್ಲಿ ರಾಜಕಾರಣ ಮಾಡಬಾರದು. ಇದು ನ್ಯಾಯ ಮತ್ತು ಕಾನೂನಿಗೆ ಸಂಬಂಧಪಟ್ಟಂತಹ ವಿಚಾರವಾಗಿದೆ. ಯಾರೇ ದೂರು ಕೊಟ್ಟರೂ ಎಫ್‌ಐಆರ್ ದಾಖಲಿಸಿ ತನಿಖೆ ಮಾಡುವುದು ಸಹಜ. ಧಾರ್ಮಿಕ ವಿಚಾರದಲ್ಲಿ ರಾಜಕೀಯ ಮಾಡಬಾರದು. ಎಸ್‌ಐಟಿ ತನಿಖೆ ನಡೆಯುತ್ತಿದೆ, ಅದು ಅಂತಿಮವಾಗಲಿ. ಮಧ್ಯಂತರ ವರದಿ ಬಗ್ಗೆ ಎಸ್‌ಐಟಿ ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಇದರಲ್ಲಿ ಸರಕಾರ ಹಸ್ತಕ್ಷೇಪ ಮಾಡುವುದಿಲ್ಲ. ದೂರುದಾರ ಹೇಳಿದಂತೆ ಕೂರುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಹಿಂದುಳಿದ ವರ್ಗದಲ್ಲಿ ಭಿನ್ನಾಭಿಪ್ರಾಯ ಮೂಡಿಸಲು ಕೋಮುವಾದಿ ಶಕ್ತಿಗಳ ಪ್ರಯತ್ನ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಆರೋಪ



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಭಾನುವಾರ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಮೈಸೂರು, ಆ.17(ಬಿಎಲ್‌ಯು)– ಕೋಮುವಾದಿ ಶಕ್ತಿಗಳು ರಾಜಕೀಯ ಕಾರಣಕ್ಕಾಗಿ ಹಿಂದುಳಿದ ವರ್ಗ ಗಳನ್ನು ಎತ್ತಿಕಟ್ಟಿ ಭಿನ್ನಾಭಿಪ್ರಾಯ ಮೂಡಿಸುತ್ತಿದ್ದು, ಇಂತಹ ಸಂಚಿಕೆಗೆ ಯಾರೂ ಒಳಗಾಗಬಾರದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಲಹೆ ನೀಡಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಇಂದು ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗದಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ಅದನ್ನೆಲ್ಲಾ ಮರೆತು ಒಗ್ಗಟ್ಟಾಗಬೇಕು ಎಂದು ಕಿವಿಮಾತು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಹಿಂದ ಸಮುದಾಯಗಳಿಗೆ ಶಕ್ತಿ ತುಂಬುವ ಪ್ರಯತ್ನ ಮಾಡುತ್ತಿವೆ. ವಿಶ್ವಕರ್ಮ ಸಮುದಾಯ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿದೆ. ಇಂತಹ ಶೋಷಿತ ಸಮುದಾಯಗಳು ಆರ್ಥಿಕವಾಗಿ ಮುಂದುವರೆಯಬೇಕು ಹೇಳಿದರು.

ಟಿ.ಕೆ.ಬಡಾವಣೆಯಲ್ಲಿರುವ ವಿಶ್ವಕರ್ಮ ವಿದ್ಯಾರ್ಥಿ ನಿಲಯದ ಕಾಮಗಾರಿ ಅರ್ಧಕ್ಕೆ ಸ್ಥಗಿತವಾಗಿರುವ ವಿಚಾರವನ್ನು ಈಗ ನನ್ನ ಗಮನಕ್ಕೆ ತಂದಿದ್ದೀರಿ. ವಿದ್ಯಾರ್ಥಿ ನಿಲಯ ಕಾಮಗಾರಿ ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಿಸುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಗೌರವಾಧ್ಯಕ್ಷ ಎನ್.ನಂದಕುಮಾರ್, ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ, ಉಪಾಧ್ಯಕ್ಷ ಎಲ್.ಸತೀಶ್, ಪ್ರಧಾನ ಕಾರ್ಯದರ್ಶಿ ಬಿ.ವಿ.ಸಿದ್ದರಾಜು, ಸಿದ್ದೇಶ್, ಬಿ.ರಾಜು, ಎನ್.ಮಂಜು, ಕೃಷ್ಣ ಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬುರುಡೆ ಕೇಸ್ ಹಿಂದೆ ಕೈ ಸಂಸದ ಶಶಿಕಾಂತ್ ಸೆಂಥಿಲ್ ಇದ್ದಾರೆ: ಯಶ್‌ಪಾಲ್ ಸುವರ್ಣ

ಧರ್ಮಸ್ಥಳ, ಆ.17– ಧರ್ಮಸ್ಥಳದ ಬುರುಡೆ ಪ್ರಕರಣದ ಅನಾಮಿಕನ ಹಿಂದೆ ಕಾಂಗ್ರೆಸ್ ಸಂಸದ ಶಶಿಕಾಂತ್ ಸೆಂಥಿಲ್ ಇದ್ದಾರೆ ಎಂದು ಉಡುಪಿಯ ಬಿಜೆಪಿ ಶಾಸಕ ಯಶ್‌ಪಾಲ್ ಸುವರ್ಣ ಸ್ಫೋಟಕ ಆರೋಪ ಮಾಡಿದ್ದಾರೆ.

ಧರ್ಮಸ್ಥಳ ದೇವಸ್ಥಾನಕ್ಕೆ ಭೇಟಿ ನೀಡಿ ಸುದ್ದಿ ಮಾಧ್ಯಮದ ಜೊತೆ ಮಾತನಾಡಿದ ಅವರು, ಈ ಷಡ್ಯಂತ್ರ ಮಾಡಿದವರ ಮೂಲಕ್ಕೆ ಹೋಗಬೇಕು. ದಕ್ಷಿಣ ಕನ್ನಡದ ಮಾಜಿ ಜಿಲ್ಲಾಧಿಕಾರಿ ಶಶಿಕಾಂತ್ ಸೆಂಥಿಲ್ ಅವರನ್ನು ತನಿಖೆಗೆ ಒಳಪಡಿಸಿದರೆ ಸತ್ಯ ಸಂಗತಿ ಬಯಲಾಗಲಿದೆ ಎಂದು ಹೇಳಿದರು.

ಅಂದು ಬ್ರಿಟಿಷರು ಬಂದು ಹಿಂದೂಗಳನ್ನು ಒಡೆದು ಆಳಿದ್ದರು. ಈಗ ಕಮ್ಯೂನಿಸ್ಟರು ಹಿಂದೂ ಸಮಾಜದ ಒಳಗೆ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ದಬ್ಬಾಳಿಕೆ ಮಾಡಿ ಹಿಂದೂಗಳನ್ನು ಒಡೆಯಲು ಮುಂದಾಗುತ್ತಿದ್ದಾರೆ ಎಂದರು.

ದೇವರ ಸ್ಮರಣೆಯಿಂದ ನಮ್ಮ ದಿನ ಆರಂಭವಾಗುತ್ತದೆ. ಮತ ಬ್ಯಾಂಕ್‌ಗಾಗಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ. ಈ ಷಡ್ಯಂತ್ರಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ತಿಳಿಸಿದರು.

ಗೃಹ ಸಚಿವರು ಸದನದಲ್ಲಿ ರಾಜಕೀಯವನ್ನು ಬಿಟ್ಟು ಸರಿಯಾದ ಉತ್ತರ ನೀಡಲಿ. ಧರ್ಮದ ವಿರುದ್ಧದ ಅವಹೇಳನ, ಷಡ್ಯಂತ್ರವನ್ನು ನಾವು ಸಹಿಸುವುದಿಲ್ಲ. ಮಂಜುನಾಥ ಸ್ವಾಮಿ ಎಲ್ಲಾ ಷಡ್ಯಂತ್ರಗಳಿಗೆ ಉತ್ತರ ಕೊಡುತ್ತಾನೆ ಎಂದು ಹೇಳಿದರು.

ಹೋರಾಟಗಾರ ಸ.ರ.ಸುದರ್ಶನ್ ಇನ್ನಿಲ್ಲ

ಸಂದರ್ಭಗಳಲ್ಲಿ ಹೋರಾಟ, ಹಲವಾರು ಧರಣಿ ಗಳು, ಪ್ರತಿಭಟನೆಗಳನ್ನು ಮಾಡಿ, ಅನೇಕ ಬಾರಿ ಬಂಧನವಾಗಿ ಬಿಡುಗಡೆಯಾಗಿದ್ದರು. ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ಅಂದು ಆಯ್ಕೆಯಾಗಿ ಇಂದಿನವರೆಗೂ ಮುಂದುವರೆದಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ಇಂಗ್ಲಿಷ್ ಕನ್ನಡ ನಿಘಂಟಿನ ಸಹಾಯಕ ಸಂಪಾದಕರಾಗಿ ಮೊದಲ ಬಾರಿ ನೇಮಕಗೊಂಡು ಸುಮಾರು 14 ವರ್ಷ ಕಾಲ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾ ರಾಂಗದ ಯೋಜನೆ ಅಡಿ ಯಲ್ಲಿ ಗೌರವ ಸಂಪಾದಕ ರಾಗಿ ನಾಲ್ಕು ಸಂಪುಟಗಳ ಇಂಗ್ಲಿಷ್–ಕನ್ನಡ ನಿಘಂಟನ್ನು ಸಂಕ್ಷಿಪ್ತಗೊಳಿಸಿ, 25000 ಪದಗಳಿರುವ ಸಂಕ್ಷಿಪ್ತ ಇಂಗ್ಲಿಷ್ ಕನ್ನಡ ನಿಘಂಟು ಸಿದ್ಧಪಡಿಸಿದ್ದರು. ಪ್ರಾರಂಭದಲ್ಲಿ ಸ್ವತಃ ಪ್ರಕಟಿಸಿದ 'ಶಾಲಾ ವಿದ್ಯಾರ್ಥಿಗಳಿ ಗಾಗಿ ಇಂಗ್ಲೀಷ್ ಕನ್ನಡ ನಿಘಂಟು' ನಂತರ ವಿವಿಧ ಪ್ರಕಾಶಕರಿಂದ 15ನೇ ಮುದ್ರಣವನ್ನು ಕಂಡಿದೆ. ಪ್ರಸಾರಾಂಗದಲ್ಲಿ ಸಹಾಯಕ ನಿರ್ದೇ ಶಕನಾಗಿ ಬಡ್ತಿ ಪಡೆದು ಉಪನಿರ್ದೇಶಕ ನಾಗಿ 2014ರಲ್ಲಿ ನಿವೃತ್ತಿಯಾಗಿದ್ದರು. ಅವರ ಮೃತ ದೇಹವನ್ನು ದಾನ ಮಾಡಿರುವು ದಾಗಿ ಕುಟುಂಬ ಮೂಲಗಳು ತಿಳಿಸಿವೆ.

ಅನನ್ಯ ಸಾಮರ್ಥ್ಯದ ಅಭಿಮನ್ಯು!



ಅಭಿಮನ್ಯು ಮುಂದಾಳತ್ವದಲ್ಲಿ ಗಜಪಡೆಗೆ ನಡಿಗೆ ತಾಲೀಮು ನಡೆಸಲಾಯಿತು.

ಮೈಸೂರು,ಆ.17(ಪಿಎಂ)–ಅಭಿಮನ್ಯು ಅನನ್ಯ ಸಾಮರ್ಥ್ಯ ಹೊಂದಿರುವ ಆನೆ. ದಸರಾದಲ್ಲಿ ಅಂಬಾರಿ ಹೊರುವುದರಲ್ಲಿ ಮಾತ್ರವಲ್ಲದೆ ನಾಡಿನತ್ತ ಬರುವ ವನ್ಯಜೀವಿಗಳ ಸೆರೆ ಕಾರ್ಯಾಚರಣೆಯಲ್ಲಿಯೂ ಅದು ಅತ್ಯಂತ ಶಕ್ತಿಶಾಲಿಯಾಗಿ ವರ್ತಿಸುತ್ತದೆ.

ಅರಮನೆ ಗಜಪಡೆ ಶಿಬಿರದ ಆವರಣದಲ್ಲಿ ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ. ಪ್ರಭುಗೌಡ ಈ ವಿಷಯ ತಿಳಿಸಿದರು.

ಅಭಿಮನ್ಯು ಅತ್ಯಂತ ಬಲಶಾಲಿ. ಜಂಬೂಸವಾರಿಯಲ್ಲಿ 750 ಕೆಜಿ ಅಂಬಾರಿ ಸೇರಿದಂತೆ ನಮ್ದ, ಗಾದಿ, ಮಾವುತ ಸೇರಿದಂತೆ ಸಾವಿರ ಕೆಜಿ ಭಾರವನ್ನು ಅಭಿಮನ್ಯು ಹೊತ್ತು ಸಾಗುತ್ತದೆ. 5,500 ಕೆಜಿ ಅಭಿಮನ್ಯುವಿಗೆ ಸಾವಿರ ಕೆಜಿ ಹೊತ್ತು ಸಾಗುವುದು ಅಂತಹ ತ್ರಾಸದಾಯಕವಲ್ಲ. ಮಾವುತನ ಸೂಚನೆಗಳನ್ನು ಕೇಳಿ ಅದರಂತೆ ನಡೆದುಕೊಳ್ಳುವ ಸೌಮ್ಯ ಸ್ವಭಾವದ ಆನೆ ಅಭಿಮನ್ಯು ಎಂದರು.

ಬೆಳಗ್ಗೆ ಮತ್ತು ಸಂಜೆ ಸಯ್ಯಾಜಿರಾವ್ ರಸ್ತೆಯಲ್ಲಿ ನಡಿಗೆ ತಾಲೀಮು ನಡೆಸಲಾಗುತ್ತಿದೆ. ಜಂಬೂಸವಾರಿಯಂದು 10ರಿಂದ 12 ಲಕ್ಷ ಜನ ಸೇರಿರುತ್ತಾರೆ. ಅಂದು ಯಾವುದೇ ತೊಂದರೆ ಆಗಬಾರದು. ಈ ನಿಟ್ಟಿನಲ್ಲಿ ಬೆಳಗ್ಗೆ ಮತ್ತು ಸಂಜೆ ತಾಲೀಮು ಮೂಲಕ ಅವುಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಮೊದಲ ತಂಡದ ಎಲ್ಲಾ ಆನೆಗಳು ದಸರಾದಲ್ಲಿ ಈ ಹಿಂದೆ ಪಾಲ್ಗೊಂಡಿರುವ ಕಾರಣ ಇಲ್ಲಿನ ವಾತಾವರಣಕ್ಕೆ ಅವು ಹೊಂದಿಕೊಳ್ಳುವುದು ಸುಲಭವೇ. ಹಾಗಾಗಿ ಅವುಗಳಿಗೆ ಹೆಚ್ಚುವರಿಯಾಗಿ ಬೇರೇನೂ ಮಾಡುವ ಅಗತ್ಯ ಕಂಡುಬಂದಿಲ್ಲ ಎಂದು ತಿಳಿಸಿದರು.

ತಾಲೀಮು ಸಂದರ್ಭದಲ್ಲಿ ಈವರೆಗೆ ವಾಹನಗಳ ಹಾರ್ನ್‌ಗೂ ಯಾವುದೇ ಆನೆಗಳು ಗಲಿಬಿಲಿಗೊಂಡಿಲ್ಲ. ಎರಡನೇ ತಂಡದಲ್ಲಿ ಎರಡು ಆನೆಗಳು ಹೊಸದಾಗಿ ಬರುತ್ತಿದ್ದು, ದಸರಾ ಮಹೋತ್ಸವಕ್ಕೆ ಅವು ಇದೇ ಮೊದಲ ಬಾರಿ ಪಾಲ್ಗೊಳ್ಳುತ್ತಿರುವ ಕಾರಣ ಅವುಗಳನ್ನು ಈಗಾಗಲೇ ಉತ್ಸವದಲ್ಲಿ ಪಾಲ್ಗೊಂಡಿರುವ ಆನೆಗಳ ಮಧ್ಯೆ ಇರಿಸಿ ತಾಲೀಮು ನಡೆಸಲಾಗುವುದು. ಆನೆ ಅತ್ಯಂತ ಬುದ್ಧಿವಂತ ಪ್ರಾಣಿ. ಹಾಗಾಗಿ ಯಾವುದೇ ವಾತಾವರಣಕ್ಕೂ ಬಹುಬೇಗ ಹೊಂದಿಕೊಳ್ಳುವ ಗುಣ ಹೊಂದಿವೆ. ಪ್ರತಿದಿನ 8ರಿಂದ 9 ಕಿ.ಮೀ. ತಾಲೀಮು (ನಡಿಗೆ) ಇದ್ದೇ ಇರುತ್ತದೆ. ಬನ್ನಿಮಂಟಪದವರೆಗೆ ಹೋದಲ್ಲಿ ಆರೇಳು ಕಿ.ಮೀ. ಹೆಚ್ಚಾಗಲಿದೆ ಎಂದು ವಿವರಿಸಿದರು.

ಗಜಪಡೆಗೆ ರಾಜಾತಿಥ್ಯ; ಬಲವರ್ಧನೆಗೆ ನಿತ್ಯ ರಸಗವಳ!

- ಪ್ರತಿದಿನ ಆನೆಯೊಂದಕ್ಕೆ 10ರಿಂದ 12 ಕೆಜಿ ವಿಶೇಷ ಆಹಾರ ಸೇರಿ ಒಟ್ಟು 750 ಕೆಜಿ ಆಹಾರ
- ಇದರಲ್ಲಿ ಗಂಡಾನೆಗಳಿಗೆ 750 ಕೆಜಿಯಾದರೆ, ಹೆಣ್ಣಾನೆಗಳಿಗೆ 600 ಕೆಜಿಯಷ್ಟು ಪೂರೈಕೆ

ಮೈಸೂರು,ಆ.17(ಪಿಎಂ)– ಅರಮನೆ ಅಂಗಳದಲ್ಲಿ ಗಜಪಡೆಗೆ ರಾಜಾತಿಥ್ಯ ನೀಡುತ್ತಿದ್ದು, ಅವುಗಳ ಬಲವರ್ಧನೆಗೆ ನಿತ್ಯ ರಸಗವಳ ಪೂರೈಸಿ ಆರೈಕೆ ಮಾಡಲಾಗುತ್ತಿದೆ. ಈಗಾಗಲೇ ಅರಮನೆ ಆವರಣದಲ್ಲಿ ವಾಸ್ತವ್ಯ ಹೂಡಿರುವ ಅಂಬಾರಿ ಆನೆ ಅಭಿಮನ್ಯು ಸೇರಿದಂತೆ ಮೊದಲ ತಂಡದ 9 ಆನೆಗಳಿಗೆ ರಾಜಾತಿಥ್ಯ ನೀಡಲಾಗುತ್ತಿದೆ. ಆ ಮೂಲಕ ಅವುಗಳ ಬಲವರ್ಧನೆಗೆ ಅಗತ್ಯವಾದ ವಿಶೇಷ ಪೌಷ್ಟಿಕ ಆಹಾರ ನೀಡಿ ಜಂಬೂಸವಾರಿಗೆ ಸಜ್ಜುಗೊಳಿಸಲಾಗುತ್ತಿದೆ.

ದಸರಾ ಜಂಬೂಸವಾರಿ ಮೆರವಣಿಗೆಯ ಕೇಂದ್ರಬಿಂದು ಗಜಪಡೆ. ಈ ಪಡೆಯ ಮೊದಲ ತಂಡಕ್ಕೆ ಈಗಾಗಲೇ ಭಾರಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವರ್ಷದಂತೆ ಗಜಪಡೆಯ ಸಾಮರ್ಥ್ಯ ವೃದ್ಧಿಗೆ ಪೂರಕವಾಗಿ ಆಹಾರ ಪಟ್ಟಿ ಸಿದ್ಧಪಡಿಸಿ ಅವುಗಳಿಗೆ ನೀಡಲಾಗುತ್ತಿದೆ.

ಈ ಸಂಬಂಧ ಅರಮನೆಯ ಗಜಪಡೆ ಶಿಬಿರದ ಆವರಣದಲ್ಲಿ ಮಾಧ್ಯಮದವರಿಗೆ ಮಾಹಿತಿ ನೀಡಿದ ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಪ್ರತಿದಿನ ಪ್ರತಿ ಆನೆಗೆ 450ರಿಂದ 500 ಕೆಜಿ ಮರದ ಕೊಂಬೆಗಳನ್ನು ನೀಡಲಾಗುತ್ತಿದೆ. ಜೊತೆಗೆ 175ರಿಂದ 200 ಕೆಜಿ ಹಸಿರು ಹುಲ್ಲು ಕೊಡುತ್ತಿದ್ದೇವೆ. ಅಲ್ಲದೆ, 20 ಕೆಜಿ ಭತ್ತ ಹಾಗೂ ಅದರ ಹುಲ್ಲು ಒಳಗೊಂಡಂತೆ ಒಟ್ಟು 35ರಿಂದ 40 ಕೆಜಿ ಕೊಡಲಾಗುತ್ತಿದೆ. ಇದಲ್ಲದೆ, ಪ್ರತಿದಿನ 10ರಿಂದ 12 ಕೆಜಿ ವಿಶೇಷ ಆಹಾರ ಕೊಡಲಾಗುತ್ತಿದೆ. ಸಾಮಾನ್ಯ ಆಹಾರ ಹಾಗೂ ವಿಶೇಷ ಆಹಾರ ಸೇರಿದಂತೆ ದಿನಕ್ಕೆ ಒಂದು ಆನೆಗೆ 750 ಕೆಜಿ ಆಹಾರ ನೀಡಲಾಗುತ್ತಿದೆ. ಇದು ಗಂಡಾನೆಗಳಿಗಾದರೆ, ಹೆಣ್ಣಾನೆಗಳಿಗೆ ಅಂದಾಜು 600 ಕೆಜಿ ಕೊಡಲಾಗುತ್ತಿದೆ.



ಅರಮನೆ ಆವರಣದ ಆನೆ ಶಿಬಿರದಲ್ಲಿ ಭೀಮ ಆನೆಗೆ ವಿಶೇಷ ಆಹಾರವನ್ನು ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ನೀಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಜೊತೆಗೆ ಕಬ್ಬು, ಕೊಬ್ಬರಿ ಸಹ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ರೀತಿಯಲ್ಲಿ ಗಂಡಾನೆಗಳಿಗೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪೂರೈಸಿದರೆ, ಹೆಣ್ಣಾನೆಗಳಿಗೆ ಸ್ವಲ್ಪ ಕಡಿಮೆ ಇರಲಿದೆ. ವಿಶೇಷ ಆಹಾರದಲ್ಲಿ ಹೆಸರುಕಾಳು, ಹುರಳಿಕಾಳು, ಉದ್ದಿನಕಾಳು, ಅನ್ನ, ಉಪ್ಪು ಹಾಗೂ ವಿವಿಧ ರೀತಿಯ ತರಕಾರಿ ಒಳಗೊಂಡಿರುತ್ತವೆ. ಈ ಎಲ್ಲವನ್ನೂ 6ರಿಂದ 7 ಗಂಟೆಗಳ ಕಾಲ ಬೇಯಿಸಲಾಗುತ್ತದೆ. 10ರಿಂದ 12 ಕೆಜಿ ವಿಶೇಷ ಆಹಾರವನ್ನು ಎಲ್ಲಾ ಆನೆಗಳು ತಿನ್ನುತ್ತವೆ. ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಿಲ್ಲ. ಕಾರಣ ಬೊಜ್ಜು ಬೆಳೆಯಲಿದ್ದು, ಇದರಿಂದ ಅವುಗಳು ನಡೆಯುವುದು ಕಷ್ಟಕರವಾಗಲಿದೆ ಎಂದರು.

ಮುಖ್ಯವಾಗಿ ಅವುಗಳಿಗೆ ಅಗತ್ಯವಿರುವಷ್ಟು ಆಹಾರ ನೀಡಿ ನಡಿಗೆ ತಾಲೀಮು ಮೂಲಕ ಅವುಗಳಲ್ಲಿ ಶಕ್ತಿ ಸಾಮರ್ಥ್ಯ ವೃದ್ಧಿಸುವುದು ಉದ್ದೇಶ. ಪ್ರತಿದಿನ 10ರಿಂದ 12 ಕಿ.ಮೀ. ಅವುಗಳು ನಡೆಯುವುದರಿಂದ ಈ ರೀತಿಯಲ್ಲಿ ಆಹಾರ ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಈ ಬಾರಿ ಬೆಣ್ಣೆ–ಗೋಧಿ ಇಲ್ಲ: ಈ ಬಾರಿ ಬೆಣ್ಣೆ ಕೊಡುತ್ತಿಲ್ಲ. ಏಕೆಂದರೆ ಕಳೆದ ಬಾರಿ ನಾಲ್ಕು ಆನೆಗಳು ಮಾತ್ರ ಬೆಣ್ಣೆ ಸೇವನೆ ಮಾಡುತ್ತಿದ್ದವು. ಈ ಕುರಿತು ಪಶುವೈದ್ಯರೊಂದಿಗೆ ಸಭೆ ನಡೆಸಿದಾಗ, ಯಾವುದೇ ಆನೆ ಶಿಬಿರದಲ್ಲಿ ಬೆಣ್ಣೆ ಕೊಡುತ್ತಿಲ್ಲವೆಂಬ ಬಗ್ಗೆ ಪ್ರಸ್ತಾಪವಾಯಿತು.

> ಈರುಳ್ಳಿ ಜೊತೆಗೆ ಹೆಸರುಕಾಳು, ಉದ್ದಿನಕಾಳು ಒಳಗೊಂಡಂತೆ ಉಪ್ಪಿನೊಂದಿಗೆ ಬೇಯಿಸಿ, ಜತೆಗೆ ಸೌತೆಕಾಯಿ ಸೇರಿದಂತೆ ವಿವಿಧ ಹಸಿ ತರಕಾರಿಗಳನ್ನು ಮಿಶ್ರಣ ಮಾಡಿ ಉಂಡೆ ಕಟ್ಟಿ ಆನೆಗಳಿಗೆ ಕೊಡಲಾಗುತ್ತದೆ.

ಜೊತೆಗೆ ಆನೆ ಸಸ್ಯಾಹಾರಿಯಾದ ಕಾರಣ ಬೆಣ್ಣೆ ಕೊಟ್ಟರೆ ಅವುಗಳ ದೇಹಕ್ಕೆ ಯಾವುದೇ ಪ್ರಯೋಜನವಾಗದು. ಕೇವಲ ಸರಾಗವಾಗಿ ಮಲ ವಿಸರ್ಜನೆ ಒಂದಕ್ಕೆ ಸಹಾಯಕವಾಗಲಿದೆ. ಹಾಗಾಗಿ ಈ ವರ್ಷ ನಾವು ಬೆಣ್ಣೆ ಕೊಡುತ್ತಿಲ್ಲ. ಇದರ ಬದಲು ಹುರುಳಿ ಮತ್ತು ರಾಗಿ ಸೇರ್ಪಡೆ ಮಾಡಿದ್ದೇವೆ ಎಂದು ವಿವರಿಸಿದರು.

ಗೋಧಿ ಸಹ ಈ ಬಾರಿ ಕೈಬಿಡಲಾಗಿದೆ. ಗೋಧಿಯು ಲದ್ದಿಯಲ್ಲಿ ಜೀರ್ಣವಾಗದೇ ಬರುತ್ತಿತ್ತು. ಹೀಗಾಗಿ ಇದನ್ನು ಕೈಬಿಡಲಾಗಿದೆ. ಈ ಹಿಂದೆ ರಾಗಿ ಹಿಟ್ಟು ಕೊಡುತ್ತಿರಲಿಲ್ಲ. ಏಕೆಂದರೆ ರೈಸ್ ಐಟಂ ಕೊಡುತ್ತಿರುವ ಕಾರಣ ರಾಗಿ ಕೊಡುತ್ತಿರಲಿಲ್ಲ. ಆದಾಗ್ಯೂ ಈ ವರ್ಷ ರಾಗಿ ಮತ್ತು ಹುರುಳಿ ಸೇರ್ಪಡೆ ಮಾಡಿದ್ದೇವೆ. ಜೀರ್ಣ ವ್ಯವಸ್ಥೆ ಸುಧಾರಣೆಗೆ ಹುರುಳಿ ಉತ್ತಮ ಆಹಾರ. ದಸರಾ ಶಿಬಿರದಿಂದ ಹಿಂತಿರುಗುವವರೆಗೂ ಇದೇ ರೀತಿಯ ಆಹಾರ ಪೂರೈಸಲಾಗುತ್ತದೆ. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಸೇರಿದಂತೆ ಎರಡು ಬಾರಿ ವಿಶೇಷ ಆಹಾರ ಕೊಡಲಾಗುತ್ತದೆ (ತಾಲೀಮು ನಂತರ) ಎಂದರು.

ಎರಡನೇ ತಂಡದ ಆನೆಗಳು ಆ.25ರ ನಂತರದಲ್ಲಿ ಬರಲಿವೆ. ಮುಂದಿನ ದಿನಗಳಲ್ಲಿ ಈ ಆನೆಗಳು ಬರುವ ದಿನಾಂಕ ತಿಳಿಸಲಾಗುವುದು. ಭಾರ ಹೊರುವ ತಾಲೀಮು ಎರಡನೇ ತಂಡದ ಗಜಪಡೆ ಬಂದ ನಂತರದಲ್ಲಿ ಶುರುವಾಗಲಿದೆ ಎಂದು ಡಾ.ಪ್ರಭುಗೌಡ ತಿಳಿಸಿದರು.

ದಸರಾದಲ್ಲಿ ಜಾನಪದ ಕಲೆ ಅಲಕ್ಷ್ಯ

ಪ್ರಸಾರಾಂಗ ನಿರ್ದೇಶಕ ಡಾ.ಎಂ.ನಂಜಯ್ಯ ಹೊಂಗನೂರು ಬೇಸರ



ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಆಯೋಜಿಸಿದ್ದ 'ಯುವಕರಿಗೆ ಜನಪದ ಕಲೆಗಳ ಅವಶ್ಯಕತೆ' ವಿಚಾರ ಸಂಕಿರಣವನ್ನು ಡಾ. ನಂಜಯ್ಯ ಹೊಂಗನೂರು ಉದ್ಘಾಟಿಸಿದರು.

ಮೈಸೂರು,ಆ.17(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾದಲ್ಲಿ ಜನಪದ ಕಲೆ ಅಲಕ್ಷ್ಯಕ್ಕೆ ಒಳಗಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕ ಡಾ.ಎಂ.ನಂಜಯ್ಯ ಹೊಂಗನೂರು ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಾಗೂ ಕನ್ನಡ–ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ನಾಟಕ ಆಧಾರಿತ ರಂಗಭೂಮಿ ಮತ್ತು ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರ–2025ರಲ್ಲಿ 'ಯುವಕರಿಗೆ ಜನಪದ ಕಲೆಗಳ ಅವಶ್ಯಕತೆ' ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವೈವಿಧ್ಯತೆಯಿಂದ ಆಚರಿಸಲಾಗುವ ಮೈಸೂರು ದಸರಾದಲ್ಲಿ ಭಾಗವಹಿಸುವ ಜನಪದ ಕಲಾವಿದರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕೀಳಾಗಿ ನೋಡಲಾಗುತ್ತಿದೆ. ಕನಿಷ್ಠ ಮೂಲಸೌಕರ್ಯವನ್ನು ನೀಡದೆ ಕಡೆಗಣಿಸಲಾಗುತ್ತಿದೆ. ಪ್ರಮುಖವಾಗಿ ಮಹಿಳಾ ಕಲಾವಿದರಿಗೆ ಈ ಬಾರಿಯಾದರೂ ಅಗತ್ಯ ಸಿದ್ಧತೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ರಾಜ್ಯದ ನಾನಾ ಭಾಗಗಳಿಂದ ಆಗಮಿಸುವವರಿಗೆ ಕೇವಲ 2 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿ ಕಲಿತ ಬೇರೆ ರಾಜ್ಯದ ಕಲಾವಿದರಿಗೆ ಲಕ್ಷಾಂತರ ರೂ. ವ್ಯಯಿಸಲಾಗುತ್ತಿದೆ. ಜನಪದರ ಪ್ರೋತ್ಸಾಹ ಧನವನ್ನು 2 ಸಾವಿರದಿಂದ 5 ಸಾವಿರಕ್ಕೆ ಹೆಚ್ಚಳ ಮಾಡಬೇಕು. ಆ ಮೂಲಕ ದಸರಾದಲ್ಲಿ ಜನಪದ ಕಲೆಗೆ ವಿಶೇಷ ಒತ್ತು ನೀಡಬೇಕು ಎಂದರು.

ಪಾಶ್ಚಿಮಾತ್ಯದ ಮೊರೆ ಹೋಗಿರುವ ಸಮಾಜವು ಸಾಹಿತ್ಯ, ಸಂಸ್ಕೃತಿಯಿಂದ ವಿಮುಖವಾಗಿ ಚಲಿಸುತ್ತಿರುವುದು ವಿಷಾದನೀಯ. ಯುವ ಸಮೂಹ ಜನಪದ ಕಲೆಯನ್ನು ಉಳಿಸಿದರೆ ನಮ್ಮ ಸಂಸ್ಕೃತಿ ಉಳಿಯುತ್ತದೆ. ಜನಪದ ಕಲೆಯ ಒಳಗೆ ನಮ್ಮ ಅಸ್ತಿತ್ವವಿದೆ. ಅದನ್ನು ಕಲಿಸುವ, ಉಳಿಸುವ ಕೆಲಸ ಯುವ ಸಮೂಹ ಮಾಡಬೇಕು ಎಂದು ಸೂಚಿಸಿದರು.

ಜನಪದ ವಿದ್ವಾಂಸ ಡಾ.ಅಪ್ಪಗೆರೆ ತಿಮ್ಮರಾಜು ಮಾತನಾಡಿ, ನಮ್ಮ ನೆಲದ ಜನಪದ ಕಲೆಗಳನ್ನು ಕಲಿಯುವ ಮೂಲಕ, ಉಳಿಸಿ–ಬೆಳೆಸುವ ಕಾಯಕವನ್ನು ಯುವ ಸಮೂಹ ತಮ್ಮ ಹೆಗಲಿಗೆ ಹಾಕಿಕೊಳ್ಳಬೇಕು. ಜಾಗತೀಕರಣ ಪ್ರಭಾವ ಎಷ್ಟೆ ಒಡ್ಡಿದರು, ಜಾನಪದ ಕಲೆಗಳು ಒಂದು ಸವಾಲಾಗಿ ನಿಲ್ಲುವಂತೆ ಮಾಡಲು ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಗೌತಮ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಡಾ.ಶ್ರೀಧರ್ ಮೂರ್ತಿ, ಡಾ.ಸೋಮಣ್ಣ, ರಾಮಚಂದ್ರ ಇದ್ದರು.

ಕಡೇ ಶ್ರಾವಣ ಶನಿವಾರದ ಉತ್ಸವ



ಶ್ರಾವಣ ಮಾಸದ ಕಡೇ ಶನಿವಾರ ಮೈಸೂರಿನ ಅಗ್ರಹಾರ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಬಳಿಕ ಪ್ರಮುಖ ಬೀದಿಗಳಲ್ಲಿ ದೇವರ ಉತ್ಸವ ನೆರವೇರಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ದೇವಸ್ಥಾನ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಆ.20ರಂದು ಡಿ.ದೇವರಾಜ ಅರಸು ಜನ್ಮ ದಿನಾಚರಣೆ



ಮೈಸೂರು,ಆ.17–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆ.20ರಂದು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಕರ್ನಾಟಕ ಕಲಾಮಂದಿರದಲ್ಲಿ ಬೆಳಿಗ್ಗೆ 10.30 ಗಂಟೆಗೆ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ, ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಆ.17–2025–26ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಹಾಗೂ ಮೇದಾರ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತೀಸೂಕ್ಷ್ಮ ಹಾಗೂ ಆದಿವಾಸಿ ಮತ್ತು ಮೇದ ಸಮುದಾಯಗಳ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ಸಲ್ಲಿಸಲು ಸೆ.10 ಕೊನೆಯ ದಿನಾಂಕವಾಗಿದೆ.



ಮೊಸರಿನ ಮಡಿಕೆ ಒಡೆಯುವ ಕಾರ್ಯಕ್ರಮ

ಮೈಸೂರಿನ ಶ್ರೀಕೃಷ್ಣ ಯಾದವ ಗೊಲ್ಲರ ಬಳಗದಿಂದ ಹುಲ್ಲಿನ ಬೀದಿಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ಶ್ರೀ ಮಹಾಗಣಪತಿ ಮತ್ತು ಶ್ರೀ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನೆ ಅಂಗವಾಗಿ ಏರ್ಪಡಿಸಿದ್ದ ಮೊಸರಿನ ಮಡಿಕೆ ಒಡೆಯುವ ಕಾರ್ಯಕ್ರಮದಲ್ಲಿ ಮಕ್ಕಳು ಭಾಗವಹಿಸಿ, ಸಂಭ್ರಮಿಸಿದರು.

ಅತಿಯಾದ ಮೊಬೈಲ್ ಬಳಕೆಯಿಂದ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಕಡಿಮೆ

ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ವಲಯದ ಜೆಡಿ ಡಾ.ಡಿ.ಎಸ್.ಪ್ರತಿಮಾ ಆತಂಕ



ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ.ಎಸ್.ವಿ.ಮುರಳೀಧರ ಮತ್ತು ಇತರೆ ಲೇಖಕರು ರಚಿಸಿರುವ 'ಪ್ರಿನ್ಸಿಪಲ್ಸ್ ಆಫ್ ಲಾಜಿಸ್ಟಿಕ್ಸ್ ಮತ್ತು ಸಪ್ಲೈಚೈನ್ ಮ್ಯಾನೇಜ್ಮೆಂಟ್' ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮೈಸೂರು,ಆ.17(ಎಸ್‌ಪಿಎನ್)– ಕಾಲೇಜು ವಿದ್ಯಾರ್ಥಿಗಳು ಅತಿಯಾದ ಮೊಬೈಲ್ ಬಳಕೆಯಿಂದ ಪುಸ್ತಕ ಓದುವ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ವಲಯದ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ ಆತಂಕ ವ್ಯಕ್ತಪಡಿಸಿದರು.

ಮೈಸೂರು ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ವಿ. ಮುರಳೀಧರ ಮತ್ತು ಇತರೆ ಲೇಖಕರು ರಚಿಸಿರುವ 'ಪ್ರಿನ್ಸಿಪಲ್ಸ್ ಆಫ್ ಲಾಜಿಸ್ಟಿಕ್ಸ್ ಮತ್ತು ಸಪ್ಲೈಚೈನ್ ಮ್ಯಾನೇಜ್ಮೆಂಟ್' ಪುಸ್ತಕವನ್ನು ಬಿಡುಗಡೆಗೊಳಿಸಿ, ಮಾತನಾಡಿದರು. ಪ್ರಸ್ತುತ ತಂತ್ರಜ್ಞಾನ ಆವಿಷ್ಕಾರದಿಂದ ಮೊಬೈಲ್ ಬಳಕೆ ಅನಿವಾರ್ಯ. ಆದರೆ, ಅದರ ಬಳಕೆ ಎಷ್ಟು ಎಂಬುದನ್ನು ವಿದ್ಯಾರ್ಥಿಗಳೇ ನಿರ್ಧರಿಸಬೇಕು. ಮೊಬೈಲ್‌ನಲ್ಲಿ ಜ್ಞಾನವೃದ್ಧಿಗೆ ಅಗತ್ಯವಲ್ಲದ್ದನ್ನು ನೋಡುವುದನ್ನು ಕಡಿಮೆ ಮಾಡಬೇಕು. ಈ ಸಮಯವನ್ನು ಅಮೂಲ್ಯ ಪುಸ್ತಕಗಳನ್ನು ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ, ಆಲೋಚನೆಗಳಲ್ಲಿ ಬದಲಾವಣೆ ತರುತ್ತದೆ ಎಂದು ಸಲಹೆ ನೀಡಿದರು.

ಡಾ.ಎಸ್.ವಿ.ಮುರಳೀಧರ ರಚಿತ 'ಪ್ರಿನ್ಸಿಪಲ್ಸ್ ಆಫ್ ಲಾಜಿಸ್ಟಿಕ್ಸ್ ಮತ್ತು ಸಪ್ಲೈಚೈನ್ ಮ್ಯಾನೇಜ್ಮೆಂಟ್' ಪುಸ್ತಕವನ್ನು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳ ಅಧ್ಯಯನಕ್ಕೆ ಉಪಯುಕ್ತ ಪುಸ್ತಕವಾಗಿದ್ದು, ಪ್ರತಿಯೊಬ್ಬರು ವ್ಯಾಸಂಗ ಮಾಡುವಂತೆ ತಿಳಿಹೇಳಿದರು. ಈ ವೇಳೆ ಎನ್‌ಐಇ ಕಾಲೇಜು ಪ್ರಾಧ್ಯಾಪಕಿ ಪ್ರೊ.ಟಿ.ಎಸ್. ನಂದಿನಿ, ಕಾಲೇಜು ಪ್ರಾಂಶುಪಾಲ ಡಾ.ಪಿ.ಬೆಟ್ಟೇಗೌಡ, ಡಾ.ಎಚ್.ಎನ್. ದಿವಾಕರ್, ಎಸ್.ಜೆ.ಮನೀತ್, ನಿವೃತ್ತ ಪ್ರಾಂಶುಪಾಲ ಪುಟ್ಟರಾಜು, ಪತ್ರಾಂಕಿತ ವ್ಯವಸ್ಥಾಪಕ ವಿದ್ಯಾರಣ್ಯ ಉಪಸ್ಥಿತರಿದ್ದರು.

ದೇಶ – ವಿದೇಶ

ಶ್ವೇತಭವನದೆದುರು ಟ್ರಂಪ್ ನಿರ್ಣಯದ ವಿರುದ್ಧ ಪ್ರತಿಭಟನಾ ಮೆರವಣಿಗೆ



ವಾಷಿಂಗ್ಟನ್: ವಾಷಿಂಗ್ಟನ್ ಡಿಸಿಯ ಪೊಲೀಸರನ್ನು ಫೆಡರಲ್ ನಿಯಂತ್ರಣದಲ್ಲಿ ಇರಿಸುವುದಾಗಿ ಮತ್ತು 800 ನ್ಯಾಷನಲ್ ಗಾರ್ಡ್ಸ್‌ಗಳನ್ನು ನಿಯೋಜಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವುದು ಮತ್ತೆ ಪ್ರತಿಭಟನೆಯನ್ನು ಹುಟ್ಟುಹಾಕಿದೆ. ಶ್ವೇತಭವನದೆದುರು ಹಲವರು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಯುನೈಟೆಡ್ ಸ್ಟೇಟ್ಸ್ ನ್ಯಾಷನಲ್ ಗಾರ್ಡ್ ಎಂಬುದು ಅಮೆರಿಕದ ಸಶಸ್ತ್ರ ಪಡೆಗಳೊಳಗಿನ ಒಂದು ಮಿಲಿಟರಿ ಮೀಸಲು ಪಡೆಯಾಗಿದ್ದು, ಇದು ದೇಶದ ರಕ್ಷಣಾ ಮತ್ತು ತುರ್ತು ಪ್ರತಿಕ್ರಿಯೆ ವ್ಯವಸ್ಥೆಯಲ್ಲಿ ವಿಶಿಷ್ಟ ಸ್ಥಾನ ಹೊಂದಿದೆ.

ನಿಯಮಿತ ಸೈನ್ಯ ಅಥವಾ ವಾಯುಪಡೆಯಂತಲ್ಲದೆ, ಇದು ಎರಡು ಕಾರ್ಯ ಹೊಂದಿದೆ. ಇದು ಸ್ಥಳೀಯ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯಿಸಲು ರಾಜ್ಯದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಬಹುದು. ರಾಷ್ಟ್ರೀಯ ಭದ್ರತಾ ಕಾರ್ಯಾಚರಣೆಗಳಿಗಾಗಿ ಅಥವಾ ಸಾಗರೋತ್ತರ ಯುದ್ಧ ನಿಯೋಜನೆಗಳಿಗಾಗಿ ಅಧ್ಯಕ್ಷರು ಇದನ್ನು ಬಳಸಬಹುದು. ನೈಸರ್ಗಿಕ ವಿಕೋಪಗಳಿಗೆ ಪ್ರತಿಕ್ರಿಯಿಸುವುದು, ನಾಗರಿಕ ಅಶಾಂತಿ ಸಮಯದಲ್ಲಿ ಕಾನೂನು ಜಾರಿ ಬೆಂಬಲಿಸುವುದು, ಸಾರ್ವಜನಿಕ ಆರೋಗ್ಯ ಬಿಕ್ಕಟ್ಟುಗಳಲ್ಲಿ ಸಹಾಯ ಮಾಡುವುದು, ಚುನಾವಣೆಗೆ ಭದ್ರತೆ ಒದಗಿಸುವುದು ಇದರಲ್ಲಿ ಸೇರಿದೆ.

ಮಹಾರಾಷ್ಟ್ರದಲ್ಲಿ ಮೊಸರು ಗಡಿಗೆ ಒಡೆಯುವ ಹಬ್ಬ: ಇಬ್ಬರ ಸಾವು

ಮುಂಬೈ/ಥಾಣೆ: ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ



ಆಚರಿಸಲಾಗುವ ಮೊಸರು ಗಡಿಗೆ ಒಡೆಯುವ ಆಚರಣೆಯಲ್ಲಿ ಮುಂಬೈ ಹಾಗೂ ಥಾಣೆಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದು 117 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಮೊಸರು ಗಡಿಗೆ ಒಡೆಯುವ ಆಚರಣೆಯಲ್ಲಿ ಬಾಲಿವುಡ್ ನಟರಾದ ಗೋವಿಂದ, ಚಂಕಿ ಪಾಂಡೆ ಮತ್ತು ಸುನಿಲ್ ಶೆಟ್ಟಿ ಭಾಗವಹಿಸಿದ್ದರು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಶಿವಸೇನೆ (ಯುಬಿಟಿ) ಹಾಗೂ ಮಹಾರಾಷ್ಟ್ರ ನವ ನಿರ್ಮಾಣ ಸೇನೆಯ (ಎಂಎನ್‌ಎಸ್) ಕೆಲ ನಾಯಕರು ಒಂದೇ ವೇದಿಕೆಯಲ್ಲಿ ಸೇರಿ ಸಂಭ್ರಮದಲ್ಲಿ ಪಾಲ್ಗೊಂಡರು. ಹಾಗೇ ಬಿಜೆಪಿ, ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ, ಎನ್‌ಸಿಪಿಯ ಅಜಿತ್ ಪವಾರ್ ಸೇರಿದಂತೆ ಹಲವಾರು ನಾಯಕರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ಯುವಕರು ಹಾಗೂ ಯುವತಿಯರ ತಂಡಗಳು ಮಾನವ ಪಿರಮಿಡ್ ರಚಿಸುತ್ತಾರೆ. ನಂತರ ಹಗ್ಗದಲ್ಲಿ ನೇತಾಡುತ್ತಿದ್ದ ಮೊಸರು ಕುಡಿಕೆ ಒಡೆದು ಸಂಭ್ರಮಿಸುತ್ತಾರೆ.

ಪ್ರೇಯಸಿಯ ಗಂಡನನ್ನು ಕೊಲ್ಲಲು ಪಾರ್ಸೆಲ್‌ನಲ್ಲಿ ಬಾಂಬ್ ಕಳಿಸಿದ ಪ್ರಿಯತಮ



ಖೈರಗಢ(ಛತ್ತೀಸಗಢ): ಕಾಲೇಜು ದಿನಗಳಿಂದಲೂ ಪ್ರೀತಿಸುತ್ತಿದ್ದ ಯುವತಿಯು ಬೇರೊಬ್ಬನ ಜೊತೆಗೆ ಮದುವೆಯಾದ ಕಾರಣ ಆಕೆಯ ಗಂಡನನ್ನು ಕೊಲ್ಲಲು ಪ್ರಿಯತಮನು 'ಬಾಂಬ್ ಗಿಫ್ಟ್' ಪಾರ್ಸೆಲ್ ಮಾಡಿರುವ ಘಟನೆ ಛತ್ತೀಸಗಢದಲ್ಲಿ ನಡೆದಿದೆ. ಎಲೆಕ್ಟ್ರಿಷಿಯನ್ ಆಗಿರುವ ವಿನಯ್ ವರ್ಮಾ(20), ತನ್ನ ಪ್ರೇಯಸಿಯ ಗಂಡನಿಗೆ ಮ್ಯೂಸಿಕ್ ಸ್ಪೀಕರ್ ಅನ್ನು ಉಡುಗೊರೆ ರೂಪದಲ್ಲಿ ಪಾರ್ಸೆಲ್ ಮಾಡಿದ್ದಾನೆ. ಯುಟ್ಯೂಬ್ ನೋಡಿಕೊಂಡು ಅದರೊಳಗೆ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಅಳವಡಿಸಿದ್ದಾನೆ. ಜಿಲೇಟಿನ್ ಕಡ್ಡಿಗಳನ್ನು ಐಇಡಿಗೆ ಸಂಪರ್ಕಿಸಿದ್ದು, ಅದಕ್ಕೆ ವಿದ್ಯುತ್ ತಗುಲಿದ ತಕ್ಷಣವೇ ಬಾಂಬ್ ಸ್ಫೋಟಗೊಳ್ಳುವಂತೆ ತಯಾರಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ನಕಲಿ ಅಂಚೆಯ ಮೂಲಕ ತಲುಪಿದ ಉಡುಗೊರೆಯು ಅನುಮಾನಕ್ಕೆ ಕಾರಣವಾಗಿದ್ದರಿಂದ ಪ್ರೇಯಸಿಯ ಗಂಡ ಅಫ್ಸರ್‌ಖಾನ್ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಾಂಬ್ ನಿಷ್ಕ್ರಿಯ ದಳವು ಉಡುಗೊರೆಯನ್ನು ಪರಿಶೀಲಿಸಿದಾಗ ಸ್ಪೀಕರ್‌ನೊಳಗೆ 2 ಕಿ.ಲೋ ಐಇಡಿ ಇರುವುದು ಪತ್ತೆಯಾಗಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಫೋಟಕಗಳನ್ನು ಸರಬರಾಜು ಮಾಡಿದ ಆರೋಪದ ಮೇಲೆ ಇನ್ನೂ ಆರು ಜನರನ್ನು ಬಂಧಿಸಲಾಗಿದೆ.

65 ವರ್ಷದ ತಾಯಿ ಮೇಲೆ ಮಗನಿಂದಲೇ ಅತ್ಯಾಚಾರ



ನವದೆಹಲಿ: 65 ವರ್ಷದ ತನ್ನ ತಾಯಿಯ ಮೇಲೆ ಎರಡು ಬಾರಿ ಅತ್ಯಾಚಾರ ಎಸಗಿದ ಆರೋಪದ ಮೇಲೆ 39 ವರ್ಷದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಈ ಹಿಂದೆ ಆಕೆ ಹೊಂದಿದ್ದ ಸಂಬಂಧಕ್ಕೆ ತಾನು ಶಿಕ್ಷೆ ನೀಡುತ್ತಿದ್ದೇನೆ ಎಂದು ಆರೋಪಿಸಿ ಕೃತ್ಯ ಎಸಗಿದ್ದಾನೆ. ಮಹಿಳೆ ತನ್ನ 25 ವರ್ಷದ ಮಗಳೊಂದಿಗೆ ತೆರಳಿ ಹೌಜ್ ಖಾಜಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಪ್ರಕಾರ ಜು.17ರಂದು ಮಹಿಳೆ, ಆಕೆಯ ಪತಿ ಮತ್ತು ಕಿರಿಯ ಮಗಳು ಸೌದಿ ಅರೇಬಿಯಾಕ್ಕೆ ಧಾರ್ಮಿಕ ಪ್ರವಾಸಕ್ಕಾಗಿ ಪ್ರಯಾಣ ಬೆಳೆಸಿದರು. ಅವರ ಪ್ರವಾಸದ ಸಮಯದಲ್ಲಿಯೇ ಆರೋಪಿ ತನ್ನ ತಂದೆಗೆ ಕರೆ ಮಾಡಿ ತಕ್ಷಣ ದೆಹಲಿಗೆ ಹಿಂತಿರುಗುವಂತೆ ಮತ್ತು ತನ್ನ ತಾಯಿಗೆ ವಿಚ್ಛೇದನ ನೀಡುವಂತೆಯೂ ಒತ್ತಾಯಿಸಿದ್ದಾನೆ. ತನ್ನ ಬಾಲ್ಯದಲ್ಲಿ ಆಕೆ ಅಕ್ರಮ ಸಂಬಂಧ ಹೊಂದಿದ್ದಳು ಎಂದು ಆರೋಪಿಸಿದ್ದಾನೆ. ಆ.1ರಂದು ಕುಟುಂಬವು ದೆಹಲಿಗೆ ಹಿಂತಿರುಗಿದ ನಂತರ ಆರೋಪಿಯು ತನ್ನ ತಾಯಿಯನ್ನು ಕೋಣೆಯಲ್ಲಿ ಕೂಡಿಹಾಕಿದ್ದಾನೆ. ಆಕೆಯ ಬುರ್ಖಾವನ್ನು ತೆಗೆಯುವಂತೆ ಒತ್ತಾಯಿಸಿ, ಹಲ್ಲೆ ನಡೆಸಿ, ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ರಷ್ಯಾ–ಉಕ್ರೇನ್ ಯುದ್ಧ ಕೊನೆಗೊಳಿಸುವ ಪ್ರಯತ್ನಗಳಿಗೆ ಭಾರತ ಕೊಡುಗೆ ನೀಡುತ್ತದೆ



ಕೀವ್: ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಭಾರತದ ಸ್ವಾತಂತ್ರ್ಯ ದಿನದಂದು ಶುಭ ಹಾರೈಸಿದ್ದಾರೆ. ಇದೇ ವೇಳೆ ಈ ಬಗ್ಗೆ ಮಾತನಾಡಿರುವ ಝೆಲೆನ್ಸ್ಕಿ, ರಷ್ಯಾದೊಂದಿಗಿನ ಯುದ್ಧವನ್ನು ಕೊನೆಗೊಳಿಸುವ ಪ್ರಯತ್ನಗಳಿಗೆ ನವದೆಹಲಿ ಕೊಡುಗೆ ನೀಡುತ್ತದೆ ಎಂದು ಆಶಿಸುವುದಾಗಿ ಹೇಳಿದ್ದಾರೆ.

ಭಾರತದ ನಾಗರಿಕರನ್ನು ಅಭಿನಂದಿಸಿದ ಝೆಲೆನ್ಸ್ಕಿ, ಈ ವಾರ ನಾವು ಪ್ರಧಾನಿ ಮೋದಿ ಅವರೊಂದಿಗೆ ಉತ್ತಮ, ಪ್ರಾಮಾಣಿಕ ಸಂಭಾಷಣೆ ನಡೆಸಿದ್ದೇವೆ. ಈ ಸಂದರ್ಭದಲ್ಲಿ ನನಗೆ ವೈಯಕ್ತಿಕವಾಗಿ ನನ್ನ ಶುಭಾಶಯಗಳನ್ನು ತಿಳಿಸಲು ಅವಕಾಶ ಸಿಕ್ಕಿತು ಎಂದು ಹೇಳಿದರು.

ನಮ್ಮ ರಾಷ್ಟ್ರಗಳು ಸ್ವಾತಂತ್ರ್ಯ ಮತ್ತು ಘನತೆಗಾಗಿ ನಿಲ್ಲುವ ಅನುಭವವನ್ನು ಹಂಚಿಕೊಳ್ಳುತ್ತವೆ. ಜೊತೆಗೆ ಶಾಂತಿ ಮತ್ತು ಅಭಿವೃದ್ಧಿಯ ಅನ್ವೇಷಣೆಯನ್ನು ಹೊಂದಿವೆ ಎಂದು ಉಕ್ರೇನಿಯನ್ ಅಧ್ಯಕ್ಷರು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ವ್ಯಾಪಾರ ಮತ್ತು ಸಂಸ್ಕೃತಿಯಲ್ಲಿ ಪರಸ್ಪರ ಪ್ರಯೋಜನಕಾರಿಯಾಗುವ ಸಂಬಂಧಗಳನ್ನು ಭಾರತದೊಂದಿಗೆ ಮುಂದುವರಿಸುವ ವಿಶ್ವಾಸ ನನಗಿದೆ ಅವರು ಇದೇ ವೇಳೆ ಅವರು ಹೇಳಿದ್ದಾರೆ.

ಸತ್ಯಾಗ್ರಹಿಗಳ ಸ್ಮರಿಸದಿದ್ದರೆ, ನೈಜ ಇತಿಹಾಸ ನಾಶ

ಯುಕೊ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಕಳವಳ

ಮಡಿಕೇರಿ,ಆ.17–ಕೊಡಗಿನ ನೈಜ ಸ್ವಾತಂತ್ರ್ಯ ಹೋರಾಟಗಾರರನ್ನು, ಸತ್ಯಾಗ್ರಹಿಗಳನ್ನು ಗುರುತಿಸಿ ಸ್ಮರಿಸದಿದ್ದರೆ, ಈ ಮಣ್ಣಿನ ನೈಜ ಇತಿಹಾಸಗಳು ಅಳಿಸಿ ಹೋಗಲಿದೆ ಎಂದು ಯುಕೊ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಕಳವಳ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯೋತ್ಸವದ 79ನೇ ವರ್ಷಾಚರಣೆ ಪ್ರಯುಕ್ತ ವಾಯ್ಸ್ ಆಫ್ ಕೊಡವ ಮತ್ತು ಯುನೈಟೆಡ್ ಕೊಡವ ಆರ್ಗನೈಜೇಷನ್ ಸಹಯೋಗದಲ್ಲಿ ಪೊನ್ನಂಪೇಟೆ ಸಮೀಪದ ಕೇವ್ ಇನ್ ಸಭಾಂಗಣದಲ್ಲಿ 'ನೆಪ್ಪುರ ನಳತ್ ಮಾಂಜತ ಮೊಟ್ಟ್' ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರದಿಂದ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಬೆರಳೆಣಿಕೆಯ ಹೋರಾಟಗಾರರನ್ನು ಮಾತ್ರ ಗುರುತಿಸಿ ಗೌರವ ನೀಡಲಾಗುತ್ತಿದೆ. ಜಿಲ್ಲಾಡಳಿತ ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸವಾಗಬೇಕೆಂದು ಅಭಿಪ್ರಾಯ ಪಟ್ಟರು.

ಕೊಡಗಿನ ಗಾಂಧಿ ಪಂದ್ಯಂಡ ಬೆಳ್ಯಪ್ಪ ಶಾಸಕ ಎ. ಎಸ್.ಪೊನ್ನಣ್ಣ ಮಾತನಾಡಿ, ಈ ನಾಡಿನ ಹಿರಿಯರ ತ್ಯಾಗ ಬಲಿದಾನಗಳನ್ನು ಸ್ಮರಿಸುವ, ಕಾರ್ಯಕ್ರಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕ ಪೊನ್ನಣ್ಣ ಯುಕೊ ಸಂಘಟನೆ ಮುಂದಿಟ್ಟಿರುವ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನಿಸುವುದಾಗಿ ಹೇಳಿದರು.


ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಮೆಲುಕು ಹಾಕುವ 'ನೆಪ್ಪುರ ಚೊಪ್ಪ್' ಎಂಬ ಛಾಯಾಚಿತ್ರ ಪ್ರದರ್ಶನವನ್ನು ವೀಕ್ಷಿಸುತ್ತಿರುವುದು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಮನ್ ಸುಬ್ರಮಣಿ ಮಾತನಾಡಿ, ಸ್ವಾತಂತ್ರ್ಯ ಇತಿಹಾಸದಲ್ಲಿ ಕೊಡವರ ಕೊಡುಗೆ ಅಪಾರವಾಗಿದೆ. ತನ್ನ ಸೈನ್ಯದ ಮೂಲಕ 100ಕ್ಕೂ ಅಧಿಕ ಬ್ರಿಟಿಷ್ ಸೈನಿಕರನ್ನು ಸದೆಬಡಿದ ಮಹಾನ್ ವೀರ ಮಾತಂಡ ಅಪ್ಪಚ್ಚು ಅವರಿಗೂ ಸರ್ಕಾರ ಮನ್ನಣೆ ನೀಡಬೇಕು. ಸರ್ಕಾರ ಕೊಡಗಿನ ನೈಜ ಸ್ವಾತಂತ್ರ್ಯ ಹೋರಾಟಗಾರರಿಗೆ ಸೂಕ್ತ ಸ್ಥಾನಮಾನ ನೀಡಿ ಗೌರವಿಸುವಂತಾಗಬೇಕು ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಮೆಲುಕು ಹಾಕುವ 'ನೆಪ್ಪುರ ಚೊಪ್ಪ್' ಎಂಬ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗಿತ್ತು. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಕೊಡವರ ಪಾತ್ರಗಳನ್ನು ಇಲ್ಲಿ ಅನಾವರಣಗೊಳಿಸಲಾಗಿತ್ತು. ಹೆಸರಾಂತ ನಾಯಕರಾದ, ಚೆಕ್ಕೆರ ಪಂಚಮ್ ಬೋಪಣ್ಣ, ಬೊಟ್ಟೋಳಂಡ ಅತಿಶಾ ಬೋಪಣ್ಣ, ಪಳಂಗಂಡ ಮೇಘನಾ ನಾಚಪ್ಪ ರೀಚಾ ನಾಚಪ್ಪ ಮತ್ತು ಶಾನ್ ನಾಚಪ್ಪ ಸಾಯಿಶಂಕರ್ ಶಾಲೆಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರದರ್ಶನ ಕಾರ್ಯಕ್ರಮಕ್ಕೆ ಮೆರಗು ನೀಡಿತು. ಬೊಡಂಗಂಡ ಜಗದೀಶ್, ಕೊಟ್ಟುಕತ್ತಿರ ಸೌಮ್ಯ ಚಿಣ್ಣಪ್ಪ, ಕೊಟ್ಟಮಾಡ ಶೀತಲ್ ಸುಮಂತ್ ಹಾಗೂ ಕಳ್ಳಿಚಂಡ ತನ್ನ ಉತ್ತಪ್ಪ ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರಿಗೆ ನುಡಿ ನಮನ ಸಲ್ಲಿಸಿದರು.

ಲೇಖಕಿ ಬೊಟ್ಟೋಳಂಡ ಸವೇರ ಚಂಗಪ್ಪ, ವಿಧಾನಪರಿಷತ್ ಮಾಜಿ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯ, ಸಾಹಿತ್ಯ ಅಕಾಡೆಮಿ ಸದಸ್ಯ ಚೊಟ್ಟೆಯಂಡ ಸಂಜು ಕಾವೇರಪ್ಪ, ಪಂದ್ಯಂಡ ಬೆಳ್ಯಪ್ಪ ಪುತ್ರ ಪಂದ್ಯಂಡ ವಿಜಯ್, ಚೆಕ್ಕೆರ ಐಪಿನ್ ಪೊಣ್ಣಯ್ಯ, ಮಲ್ಲೇಂಗಡ ಪ್ರಕಾಶ್ ಚಂಗಪ್ಪ, ಕಾಕಮಾಡ ಚಂಗಪ್ಪ, ರಾಷ್ಟ್ರಪತಿ ಪದಕ ಪುರಸ್ಕೃತ ಕಾಕಮಾಡ ಗಂಗಾ ಚಂಗಪ್ಪ, ಬಾಳೆಯಡ ಕರುಣ್ ಕಾಳಪ್ಪ, ಕೊಕ್ಕಲಮಾಡ ಅಜಿತ್ ಅಯ್ಯಪ್ಪ, ಮನೆಯಪಂಡ ಕಾಂತಿ ಸತೀಶ್, ಸಾಯಿಶಂಕರ್ ಸಂಸ್ಥೆ ಮುಖ್ಯಸ್ಥ ಕೋಳೇರ ಝರು ಗಣಪತಿ ಉಪಸ್ಥಿತರಿದ್ದರು.

ಆಟೋದಲ್ಲೇ ಗಂಡು ಮಗುವಿಗೆ ಜನ್ಮ

ಸುಂಟಿಕೊಪ್ಪ: ತುಂಬು ಗರ್ಭಿಣಿ ಮಹಿಳೆಯೊರ್ವರನ್ನು ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಕರೆತರುವಾಗ ಮಾರ್ಗ ಮಧ್ಯದಲ್ಲೇ ಗಂಡು ಮಗುವಿಗೆ ಜನ್ಮ ನೀಡಿರುವ ಘಟನೆ ವರದಿಯಾಗಿದೆ.

ಮಾದಾಪುರ ಗ್ರಾಪಂ ವ್ಯಾಪ್ತಿಯ ಕಾಂಡನ ಕೊಲ್ಲಿ ಗ್ರಾಮ ನಿವಾಸಿ ದಾಸ ಎಂಬವರ ಪತ್ನಿ ಲಕ್ಷ್ಮಿ ಎಂಬಾಕೆಗೆ ಹೆರಿಗೆ ನೋವು ಕಾಣಿಸಿದೆ. ಸುಂಟಿಕೊಪ್ಪದ ಆಟೋ ಚಾಲಕರ ಸಂಘದ ಮಾಜಿ ಅಧ್ಯಕ್ಷ ಸಿ.ಸಿ.ಸುನಿಲ್ ಕಾಂಡನ ಕೊಲ್ಲಿಯಿಂದ ಗರ್ಭಿಣಿ ಮಹಿಳೆ ಹಾಗೂ ಮನೆಯವರನ್ನು ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆ ತರುವಾಗ ಹ್ಯಾಡೋಸ್ ಬಳಿ ಲಕ್ಷ್ಮಿ ಆಟೋದಲ್ಲೇ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

ಲಕ್ಷ್ಮಿ ಅವರ ಪತಿ ಸಹಿತ ಮೂವರು ಮಹಿಳೆಯರು ಆಟೋದಲ್ಲಿದ್ದು, ಮಹಿಳೆಯರು ಪ್ರಸವಕ್ಕೆ ಸಹಕರಿಸಿ ನಂತರ ತಾಯಿ ಮಗುವನ್ನು ಆಟೋರಿಕ್ಷಾದಲ್ಲಿ ಮಾದಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆ ತಂದು ತಾಯಿ ಮಗುವಿಗೆ ಚಿಕಿತ್ಸೆ ನೀಡಿದ್ದು ಆರೋಗ್ಯವಾಗಿದ್ದಾರೆ. ತಾಯಿ ಮಗುವನ್ನು ಸುರಕ್ಷಿತವಾಗಿ ಕರೆದೊಯ್ದು ಮಾದಾಪುರ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಿಸಿದರು.

ಮಲ ತ್ಯಾಜ್ಯ ನಿರ್ವಹಣಾ ಸಂಚಾರಿ ಘಟಕ ಹಸ್ತಾಂತರ


ಮಲ ತ್ಯಾಜ್ಯ ನಿರ್ವಹಣಾ ಸಂಚಾರಿ ಘಟಕ ವಾಹನದ ಕೀಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್‌ಗೆ ಶಾಸಕರು ಹಸ್ತಾಂತರ ಮಾಡಿದರು.

ನಾಪೋಕ್ಲು: ಕೊಡವ ಸಮಾಜದ ಸಮೀಪದ ಅಭಿವೃದ್ಧಿಗೆ ಶಾಸಕ ಎ.ಎಸ್. ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು.

ಅತ್ಯಂತ ಜನಸಂಚಾರ ಹಾಗೂ ವಾಹನ ದಟ್ಟಣೆಯಿರುವ ಈ ರಸ್ತೆ ಹದಗೆಟ್ಟಿರುವುದನ್ನು ಮನಗಂಡ ಶಾಸಕರು 20 ಲಕ್ಷ ರೂ. ಅನುದಾನದಲ್ಲಿ ಈ ರಸ್ತೆ ಉನ್ನತೀಕರಣ ಮಾಡಲು ಅನುದಾನ ನೀಡಿದ್ದರು. ಶನಿವಾರ ಭೂಮಿ ಪೂಜೆ ನೆರವೇರಿಸಿದ ಶಾಸಕರು ಅತಿ ಶೀಘ್ರದಲ್ಲಿ ಗುಣಮಟ್ಟ ಕಾಯ್ದುಕೊಂಡು ಈ ರಸ್ತೆ ನಿರ್ಮಾಣವಾಗಿ ಜನರ ಬಳಕೆ ಮಾಡುವಂತಾಗಲಿ ಎಂದರು.

ನಾಪೋಕ್ಲು ಗ್ರಾ. ಪಂಗೆ ನೀಡಲಾದ ಮಲತ್ಯಾಜ್ಯ ನಿರ್ವಹಣಾ ಸಂಚಾರಿ ಘಟಕವನ್ನು ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್‌ಗೆ ವಾಹನದ ಕೀಯನ್ನು ಶಾಸಕರು ಹಸ್ತಾಂತರ ಮಾಡಿಕೊಳ್ಳಿ ಎಂದು ಶುಭ ಹಾರೈಸಿದರು.

ಗ್ರಾಪಂ ಸದಸ್ಯರಾದ ಮಾಚೆಟಿರ ಕುಸುಕುಶಾಲಪ್ಪ, ಅರುಣ್ ಬೇಬ, ಹೇಮಾವತಿ ಅರುಣ್, ಪ್ರತೀಕ ಬಿ.ಎಂ, ಅಹಮದ್ ಟಿ.ಎ, ಸಾಬಾ ತಿಮ್ಮಯ್ಯ, ಇಸ್ಮಾಯಿಲ್ ಕೆ.ಎ, ಪಂಚಾಯಿತಿ ಪಿಡಿಒ ಚೋಂದಕ್ಕಿ ಸಿಬ್ಬಂದಿ, ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ ನಾಣಯ್ಯ ಹಾಗೂ ನಿರ್ದೇಶಕ ಮಹಿಳಾ ಪರಿಷತ್ ಅಧ್ಯಕ್ಷೆ ನಿಶಾ ಮೇದಪ್ಪ ಹಾಗೂ ನಿರ್ದೇಶಕರು, ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಿದ್ದಾಟಂಡ ತಮ್ಮಯ್ಯ, ಮೇರಿ ಚೆಟ್ಟಿಯಪ್ಪ, ಸದಸ್ಯರು, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ, ಬಾಚ ಮಂಡಂಡ ಚಿನ್ನಪ್ಪ, ನಾಪೋಕ್ಲು ಯೂತ್ ಕಾಂಗ್ರೆಸ್ ಅಧ್ಯಕ್ಷ ಸಿರಾಜ್, ಚರ್ಮದಂಡ ಸೋಮಣ್ಣ, ಸಮಿತಿ ಸದಸ್ಯರು ಸಂಪನ್ ಅಯ್ಯಪ್ಪ, ಕೆಲೆಟೀರ ದೀಪು, ಎಂ.ಎ.ಮನ್ಸೂರ್ ಅಲಿ, ಅಲಿಖಿಜ್, ಲತೀಫ್ ಸಹಿತ ಸದಸ್ಯರು, ಕಾಂಗ್ರೆಸ್ ಪಕ್ಷದ ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ನಾಳೆವರೆಗೆ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್

ಮಡಿಕೇರಿ: ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಳೆ ಮುಂದುವರೆದಿರುವ ನಡುವೆಯೇ ಜಿಲ್ಲೆಯಾದ್ಯಂತ ಆ.19ರವರೆಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಮುನ್ಸೂಚನೆ ಆ.19ರ ಬೆಳಗಿನ 8.30ರವರೆಗೆ ಜಾರಿಯಲ್ಲಿರಲಿದ್ದು, ಜಿಲ್ಲೆಯಲ್ಲಿ ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಈ ಅವಧಿಯಲ್ಲಿ 115.6 ಮಿಲಿ ಮೀಟರ್ ನಿಂದ 204.4 ಮಿ.ಮೀ ವರೆಗೆ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಾಲಾ ಕಾಲೇಜುಗಳಿಗೆ ರಜೆ

ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಇದ್ದು, ಗಾಳಿ ಸಹಿತ ಹೆಚ್ಚಿನ ಮಳೆಯಾಗುತ್ತಿರುವುದರಿಂದ ನಾಳೆ (ಆಗಸ್ಟ್ 18) ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ರಜೆ ನೀಡುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶಿಸಿದ್ದಾರೆ.

ಗ್ಲಾಸ್ ಬ್ರಿಡ್ಜ್ ಯೋಜನೆಯಿಂದ ಹಿಂದಕ್ಕೆ ಸರಿದ ಸರ್ಕಾರ

ಮಡಿಕೇರಿ: ಪ್ರವಾಸಿ ದೃಷ್ಟಿಕೋನಕ್ಕೆ ಮಾತ್ರವೇ ಸೀಮಿತವಾಗಿ ತೀವ್ರ ವಿರೋಧಗಳ ನಡುವೆಯೇ ಸದ್ದಿಲ್ಲದೆ ರೂಪುಗೊಂಡಿದ್ದ ರಾಜಾಸೀಟ್‌ನ 'ಗ್ಲಾಸ್ ಬ್ರಿಡ್ಜ್' ಯೋಜನೆಯಿಂದ ಕೊನೆಗೂ ಸರ್ಕಾರ ಹಿಂದಕ್ಕೆ ಸರಿದಿದೆ. ಆ ಮೂಲಕ ಸುಂದರ ಪರಿಸರದ ಮೇಲೆ ಕವಿದಿದ್ದ ಕಾರ್ಮೋಡಗಳ ಕರಿಛಾಯೆ ಸರಿದಿದ್ದು, ಪರಿಸರ ಪ್ರೇಮಿಗಳಲ್ಲಿ ಮೂಡಿದ್ದ ಆತಂಕ ದೂರವಾಗಿದೆ. ರಾಜಾಸೀಟಿನ ಸುಂದರ ಪ್ರಶಾಂತ ಪರಿಸರವನ್ನು ಕಲಕುವಂತೆ ಕೆಲವು ತಿಂಗಳ ಹಿಂದೆಯೇ ಗ್ಲಾಸ್ ಬ್ರಿಡ್ಜ್ ಯೋಜನೆ ತೆರೆಮರೆಯಲ್ಲಿ ರೂಪುಗೊಳ್ಳುತಿತ್ತು. ಕನಿಷ್ಟ ಇದರ ಬಗ್ಗೆ ಸ್ಥಳೀಯರಿಗೆ ಮಾಹಿತಿಯನ್ನು ನೀಡದೆ ಕಾರ್ಯ ಯೋಜನೆಯನ್ನು ಸಜ್ಜುಗೊಳಿಸಿದ್ದಲ್ಲದೆ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಿದ್ದು ಸಾಕಷ್ಟು ಸಂಶಯಗಳಿಗೆ ಕಾರಣವಾಯಿತು. 'ಗ್ಲಾಸ್ ಬ್ರಿಡ್ಜ್' ಸ್ಕೈ ವಾಕ್ ಯೋಜನೆಗೆ ತೀವ್ರ ಪ್ರತಿರೋಧ ಎದುರಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ.16ರಂದು ತೋಟಗಾರಿಕಾ ಇಲಾಖೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದು, ತಕ್ಷಣವೇ ಯೋಜನೆಯನ್ನು



ಕೈಬಿಡುವಂತೆ ಸೂಚಿಸಿದ್ದಾರೆ.

ಜಾಗೃತರಾದ ಸ್ಥಳೀಯರು : ಪ್ರಕೃತಿಗೆ ಹಾನಿ ಮಾಡುವ ಗ್ಲಾಸ್ ಬ್ರಿಡ್ಜ್ ಯೋಜನೆಯ ಸುಳಿವರಿತ ಸಾರ್ವಜನಿಕರು ತಕ್ಷಣವೇ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಲಾರಂಭಿಸಿದ್ದರು. ನಗರ ಸಭೆ ತುರ್ತು ಸಭೆ ನಡೆಸಿದ ಸಂದರ್ಭ ಯೋಜನೆ ವಿರುದ್ಧ ಕೆಲವು ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಯೋಜನೆ ಜಾರಿಗೆ ಮುಂದಾದಲ್ಲಿ 'ರಾಜಾಸೀಟು ಉಳಿಸಿ' ಅಭಿಯಾನ ನಡೆಸುವುದಾಗಿ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಮಾಜಿ ಅಧ್ಯಕ್ಷ ಮುಕ್ಕೋಡ್ಲು ಗ್ರಾಮದ ಶಾಂತೆಯಂಡ ರವಿ ಕುಶಾಲಪ್ಪ ಎಚ್ಚರಿಸಿದ್ದರು. ಮಾತ್ರವಲ್ಲದೇ ಸಾಕಷ್ಟು ಸಂಘ ಸಂಸ್ಥೆಗಳು ನೇರವಾಗಿಯೇ ಆಡಳಿತ ವ್ಯವಸ್ಥೆಯ ಮೇಲೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಅದರಲ್ಲೂ ಮಾಜಿ ಸಚಿವ ಎಂ.ಸಿ. ನಾಣಯ್ಯ ಅವರು ಆರಂಭದಲ್ಲೆ ಯೋಜನೆಗೆ ತಮ್ಮ ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಕೊನೆಗೂ ಎಚ್ಚೆತ್ತ ಶಾಸಕರು : ಸಾಕಷ್ಟು ಪರ ವಿರೋಧದ ವಿಚಾರಗಳು ಕೇಳಿ ಬರುತ್ತಿದ್ದರು ಸ್ಥಳೀಯ ಶಾಸಕ ಡಾ. ಮಂತರ್ ಗೌಡ ಅವರು ಈ ಕುರಿತು ಮೌನವಾಗಿದ್ದರು. ಇದೀಗ ಅವರು ಮೌನ ಮುರಿದು ಗ್ಲಾಸ್ ಬ್ರಿಡ್ಜ್ ಯೋಜನೆಯನ್ನು ರದ್ದು ಮಾಡಿರುವುದಾಗಿ ತಿಳಿಸಿದ್ದಾರೆ. ಗ್ಲಾಸ್ ಬ್ರಿಡ್ಜ್ ನಿರ್ಮಾಣದಿಂದ ರಾಜಾಸೀಟಿನ ಪರಿಸರಕ್ಕೆ ಹಾನಿಯಾಗುವ ಸಾಧ್ಯತೆಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟ ಹಿನ್ನೆಲೆ ಯೋಜನೆ ರದ್ದುಗೊಂಡಿದೆ. ಟೆಂಡರ್ ಪ್ರಕ್ರಿಯೆ ನಡೆದಿತ್ತಾದರು, ಇನ್ನೂ ಕಾಮಗಾರಿಯನ್ನು ಗುತ್ತಿಗೆ ಯಾರಿಗೂ ನೀಡಿರಲಿಲ್ಲ ಎಂದು ಶಾಸಕ ಡಾ. ಮಂತರ್ ಗೌಡ ಸ್ಪಷ್ಟಪಡಿಸಿದ್ದಾರೆ.


ಟಿಪ್ಪಣಿ
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಇಲಾಖೆ

ಮುಖ್ಯಮಂತ್ರಿಗಳ ಆದೇಶ ಪತ್ರ.

ಅವರೆಗುಂದ ಗ್ರಾಮದಲ್ಲಿ ಹೆಬ್ಬಾವು ಸುರಕ್ಷಿತ ಸೆರೆ



ಸಿದ್ದಾಪುರ,ಆ.17–ವಿರಾಜಪೇಟೆ ತಾಲೂಕಿನ ಮಾಲ್ದಾರೆ ವ್ಯಾಪ್ತಿಯ ಅವರೆಗುಂದ ಗ್ರಾಮದಲ್ಲಿ ಕಾಣಿಸಿಕೊಂಡ ಬೃಹತ್ ಗಾತ್ರದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯಕ್ಕೆ ಬಿಡುವಲ್ಲಿ ಉರಗ ರಕ್ಷಕ ಸುರೇಶ್ ಪೂಜಾರಿ ಹಾಗೂ ಅರಣ್ಯ ಇಲಾಖೆ ಆರ್‌ಆರ್‌ಟಿ ಸಿಬ್ಬಂದಿ ಶಶಿ ಯಶಸ್ವಿಯಾಗಿದ್ದಾರೆ.

ಗ್ರಾಮದ ಸಮುದಾಯ ಭವನ ಪಕ್ಕದ ಅಂಗನವಾಡಿ ಕೇಂದ್ರದ ಬಳಿ ಬೃಹತ್ ಗಾತ್ರದ ಹೆಬ್ಬಾವು ಕಾಣಿಸಿಕೊಂಡಿತ್ತು. ಹೆಬ್ಬಾವನ್ನು ಪ್ರತಕ್ಷವಾಗಿ ಕಂಡ ಗ್ರಾಮಸ್ಥ ಸಂಪತ್ ಕುಮಾರ್ ತಕ್ಷಣವೇ ಪಂಚಾಯಿತಿ ಸದಸ್ಯ ಮಹೇಶ್ ಕುಮಾರ್ ಅವರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಆಗಮಿಸಿದ ಅರ್‌ಆರ್‌ಟಿ ಸಿಬ್ಬಂದಿ ಶಶಿ ಮತ್ತು ಉರಗ ರಕ್ಷಕ ಸುರೇಶ್ ಪೂಜಾರಿ ಅವರುಗಳು ಹರ ಸಾಹಸ ಪಟ್ಟು ಸುಮಾರು 12 ಅಡಿ ಉದ್ದದ 42 ಕೆ.ಜಿ ತೂಕದ ಬೃಹತ್ ಗಾತ್ರದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಬಳಿಕ ಅರಣ್ಯ ಇಲಾಖೆ ಸಿಬ್ಬಂದಿಗಳ ಸಹಕಾರದೊಂದಿಗೆ ಮಾಲ್ದಾರೆ ಅರಣ್ಯ ವ್ಯಾಪ್ತಿಯ ಗೆದ್ದಿಗೆ ಬೆಟ್ಟದ ಬಳಿ ಹಾವನ್ನು ಬಿಡಲಾಯಿತು.

ಕಾಗಲವಾಡಿಯಲ್ಲಿ ಡೈರಿ ನಿರ್ಮಾಣಕ್ಕೆ ಗುದ್ದಲಿಪೂಜೆ


ಕಾಗಲವಾಡಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಹಾಗೂ ಬಿಎಂಸಿ ಕೇಂದ್ರದ ನೂನತ ಕಟ್ಟಡ ನಿರ್ಮಾಣಕ್ಕೆ ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಸಂಘದ ಅಧ್ಯಕ್ಷ ಬಿ.ಚಂದ್ರಶೇಖರ್ ಜೊತೆಯಾಗಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ, ಆ.17– ತಾಲೂಕಿನ ಕಾಗಲವಾಡಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಬಿಎಂಸಿ ಕೇಂದ್ರದ ನೂನತ ಕಟ್ಟಡ ನಿರ್ಮಾಣಕ್ಕೆ ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಸಂಘದ ಅಧ್ಯಕ್ಷ ಬಿ.ಚಂದ್ರಶೇಖರ್ ಜೊತೆಯಾಗಿ ಗುದ್ದಲಿಪೂಜೆ ನೆರವೇರಿಸಿದರು.

ಬಿಎಂಸಿ ಕೇಂದ್ರದ ನೂನತ ಕಟ್ಟಡ ನಿರ್ಮಾಣಕ್ಕೆ ಚಾಮುಲ್ ವತಿಯಿಂದ 3 ಲಕ್ಷ ಅನುದಾನ ನೀಡುತ್ತೇವೆ ಒಂದು ಒಳ್ಳೆಯ ಕಟ್ಟಡ ನಿರ್ಮಾಣವಾಗಲಿ ಎಂದು ಆಶಿಸಿದರೆ, ಸಂಘದ ಅಧ್ಯಕ್ಷ ಕಾಗಲವಾಡಿ ಚಂದು ಮಾತನಾಡಿ, 20 ಲಕ್ಷ ರೂ ವೆಚ್ಚದಲ್ಲಿ ಸಂಘದ ನೂತನ ಕಟ್ಟಡ ನಿರ್ಮಿಸಲು ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ಶಾಸಕ ಸಿ. ಪುಟ್ಟರಂಗಶೆಟ್ಟಿ 10 ಲಕ್ಷ ರೂ. ನೀಡುವುದಾಗಿ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದಿ ಯೋಜನೆಯು 3ಲಕ್ಷ ಅನುದಾನ ನೀಡಲಿದೆ ಉಳಿದ ಅನುದಾನವನ್ನು ಕ್ರೋಢೀಕರಿಸಿ ಒಂದು ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು.

ಶೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ಡಿ.ದಿನೇಶ್, ಚಾಮುಲ್ ಸಹಾಯಕ ನಿರ್ದೇಶಕ ಡಾ. ಎನ್.ಅಮರ್, ವಿಸ್ತರಣಾಧಿಕಾರಿ ರಾಜು ಸಂಘದ ಉಪಾಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ಎಂ.ಮಹದೇವಸ್ವಾಮಿ, ಸಿದ್ದರಾಜು, ನಂಜಶೆಟ್ಟಿ, ಮಹದೇವಸ್ವಾಮಿ, ಎಂ.ಶಿವಸ್ವಾಮಿ, ದಕ್ಷಿಣಮೂರ್ತಿ, ನಾಗರಾಜು, ಎಂ.ಜಗದೀಶ್, ಕೆ.ಎನ್.ಶೋಭ, ಶಶಿಕಲಾ, ಮುಖ್ಯ ಕಾರ್ಯನಿರ್ವಾಹಕ ಎಂ.ಮಹದೇವಸ್ವಾಮಿ ಹಾಲು ಪರೀಕ್ಷಕ ಬಾಬು, ಸಹಾಯಕ ಸುರೇಶ್ ಇತರರು ಹಾಜರಿದ್ದರು.

ನಾಳೆ ಮರಿಯಾಲದಲ್ಲಿ ರಾಷ್ಟ್ರೀಯ ಶಿಶಿಕ್ಷು ಮೇಳ

ಚಾಮರಾಜನಗರ: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಪ್ರಧಾನಮಂತ್ರಿ ರಾಷ್ಟ್ರೀಯ ಶಿಶಿಕ್ಷು ಮೇಳ ಕಾರ್ಯಕ್ರಮದಡಿ ಅಪ್ರೆಂಟಿಶಿಪ್ ಮೇಳವು ಆ.19ರ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮರಿಯಾಲದಲ್ಲಿರುವ ಜೆ.ಎಸ್.ಎಸ್ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಡೆಯಲಿದೆ. ಜಿಲ್ಲೆಯ ಐ.ಟಿ.ಐ, ಪಿ.ಯು.ಸಿ ಹಾಗೂ ಪದವಿ ಉತ್ತೀರ್ಣ ಹೊಂದಿರುವ ವಿವಿಧ ವೃತ್ತಿಗಳ ತರಬೇತಿದಾರರನ್ನು ಅಪ್ರೆಂಟಿಶಿಪ್ ತರಬೇತಿಗೆ ನೇಮಕ ಮಾಡಿಕೊಳ್ಳಲಾಗುವುದು.

ಬಾಣೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ


ಕೊಳ್ಳೇಗಾಲ ತಾಲೂಕಿನ ಬಾಣೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿತು. ಪ್ರಾಂಶುಪಾಲ ಶಶಿಧರ್, ಶಿಕ್ಷಕ ರಾಜೇಂದ್ರ, ಮಾಜಿ ಪ್ರಾಂಶುಪಾಲ ಜ್ಞಾನಪ್ರಕಾಶ್, ಮಾಜಿ ಶಿಕ್ಷಕ ರಾಜಶೇಖರ್, ಸಿಬ್ಬಂದಿವರ್ಗದವರು, ಅಚ್ಯುತಾನಂದ ರವಿ ಶ್ರೀ ರವಿಕುಮಾರ್, ಎಸ್‌ಡಿಎಂ ಡೈರೆಕ್ಟರ್ ವೆಂಕಟಮಧು ಬಾಣೂರಿನ ಹಿರಿಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು

ಸಂವಿಧಾನಕ್ಕಿಂತಲೂ ಮೊದಲೇ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇತ್ತು: ಪರಮೇಶ್ವರ್

ಗುಂಡ್ಲುಪೇಟೆ,ಆ.17 (ಸೋಮ್.ಜಿ)– ಮೈಸೂರು ಸಂಸ್ಥಾನ ಸಂವಿಧಾನಕ್ಕಿಂತಲೂ ಮೊದಲು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿತ್ತು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಭಾನುವಾರ ಅಭಿಮಾನಿಗಳು ಆಯೋಜಿಸಿದ್ದ ತಮ್ಮ 75ನೇ ವರ್ಷದ ಹುಟ್ಟುಹಬ್ಬದ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದ ಜನಪರ ಕೆಲಸಗಳನ್ನು ಜಾರಿಗೆ ತರುವ ಮೂಲಕ ಇತರರಿಗೆ ಮಾದರಿಯಾಗಿದೆ. ದೇಶವನ್ನು ಸಾವಿರಾರು ಅರಸರು ಆಳ್ವಿಕೆ ಮಾಡಿದ್ದರೂ ಮೈಸೂರು ಸಂಸ್ಥಾನ ತನ್ನದೇ ಆದ ಹಿರಿಮೆ ಹೊಂದಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸಂವಿಧಾನದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಮೊದಲೇ 1921 ರಲ್ಲಿ ಮೈಸೂರು ಅರಸರು ಸಂಸ್ಥಾನದ ಬಡ ಹಿಂದುಳಿದ ವರ್ಗಗಳನ್ನು ಮೇಲೆತ್ತಲು ಮೀಸಲಾತಿ ತಂದಿದ್ದರು. ಪರಿಶಿಷ್ಟ ಜಾತಿ ಹಾಗೂ ಜನಾಂಗದ ಜನರ ಸ್ವಾಭಿಮಾನದ ಬದುಕಿಗೆ ನೆರವಾಗಲು ಎಚ್.ಸಿ. ಮಿಲ್ಲರ್ ಕಮೀಷನ್ ನೇಮಿಸಿ ಅದರ ಶಿಫಾರಸ್ಸಿನಂತೆ ಮೀಸಲಾತಿ ಸೌಲಭ್ಯ ಒದಗಿಸಿ ಜನಸಾಮಾನ್ಯರ ಪರವಾಗಿದ್ದರು. ಇದರಿಂದಲೇ ಈ ಭಾಗದ ಹಿಂದುಳಿದ ವರ್ಗಗಳ ಜನರು ಮೈಸೂರು ಸಂಸ್ಥಾನವನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದಾರೆ ಎಂದು ಹೇಳಿದರು.


ಬೆಂಡರವಾಡಿ ಗ್ರಾಮದಲ್ಲಿ ಡಾ.ಜಿ.ಪರಮೇಶ್ವರ್ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಉದ್ಘಾಟಿಸಿದರು. ಡಾ.ಜಿ.ಪರಮೇಶ್ವರ್, ಡಾ.ರಾಜು, ಡಾ.ಬೋಪೆ, ಬಂತೇಜಿ, ಮಹದೇವಸ್ವಾಮಿ ಇದ್ದರು.

ತಮ್ಮ ಮುತ್ತಾತ ಮೈಸೂರು ಸಂಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಅರಮನೆಗೆ ಬೆಂಕಿ ಬಿದ್ದಿತ್ತು. ಅರಸೊತ್ತಿಗೆ ಸುಟ್ಟುಹೋಗದಂತೆ ಜೀವವನ್ನು ಲೆಕ್ಕಿಸದೆ ಪ್ರಮುಖ ವಸ್ತುಗಳನ್ನು ರಕ್ಷಿಸಿದ ಐವರು ಸೈನಿಕರಲ್ಲಿ ಅವರೂ ಒಬ್ಬರಾಗಿದ್ದರು. ನಾನು ಮತ್ತು ಯದುವೀರರು ಬೇರೆ ಬೇರೆ ಪಕ್ಷದಲ್ಲಿದ್ದರೂ ಅವರನ್ನು ಗೌರವದಿಂದ ಕಾಣುತ್ತಿದ್ದೇನೆ ಎಂದು ಡಾ.ಪರಮೇಶ್ವರ್ ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸದ ಯದುವೀರ ಮಾತನಾಡಿ. ಬಂಡೀಪುರ ಸುತ್ತಮುತ್ತಲಿನ ಎಲ್ಲಾ ಊರುಗಳಿಗೂ ಮೈಸೂರು ಅರಮನೆಯ ಅವಿನಾಭಾವ ಸಂಬಂಧವಿದೆ. ಚಿಕ್ಕದೇವರಾಜಒಡೆಯರ್ ಅವರ ಅವಧಿಯಲ್ಲಿ ಗುಂಡ್ಲುಪೇಟೆಯ ಅಭಿವೃದ್ಧಿಗೆ ಹೆಚ್ಚಿನ ನೆರವು ನೀಡಿದ್ದರು. ಅರಸರು ಗುಂಡ್ಲುಪೇಟೆ ಮಾರ್ಗವಾಗಿ ತಮಿಳುನಾಡಿಗೆ ಹೋಗುತ್ತಿದ್ದರು. ಇದರಿಂದ ಇತರ ಭಾಗಗಳಿಗಿಂತ ಗುಂಡ್ಲುಪೇಟೆ ಹೆಚ್ಚಿನ ಬೆಳವಣಿಗೆ ಹೊಂದಿದೆ. ಅರಸರ ಮನೆತನ ಬೆಟ್ಟದ ಕೋಟೆ ಮನೆತನ ಎಂದು ಕರೆಯಲಾಗುತ್ತಿದ್ದು ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಹಂಗಳಕ್ಕೂ ಹತ್ತಿರದ ಸಂಬಂಧವಿದೆ. ಡಾ.ಜಿ.ಪರಮೇಶ್ವರ್ ಅವರ ಹುಟ್ಟುಹಬ್ಬದ ಅಂಗವಾಗಿ ಈ ಗ್ರಾಮದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ. ರಾಜು ಮಾತನಾಡಿ, ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ 1914ರಲ್ಲಿ ವಿದ್ಯೆ ಪಡೆಯುವುದು ಸಾರ್ವಜನಿಕರ ಹಕ್ಕು ಎಂದು ರಾಜಾಜ್ಞೆ ಹೊರಡಿಸಿದ್ದ ವಿರುದ್ದ ಕೆಲವರು ಪ್ರತಿಭಟನೆ ನಡೆಸಿದ್ದರು. ದಲಿತ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕೆ ನರಸಿಂಹರಾಜ ಕಂಠೀರವ ಶಾಲೆ ಮತ್ತು ಹಾಸ್ಟೆಲ್ ತೆರೆದಿದ್ದರು. ಇದರಿಂದಲೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸರ್ಕಾರಿ ಸೇವೆಗೆ ಸೇರಲು ಸಾಧ್ಯವಾಯಿತು. ತಾವು ಬಂಡೀಪುರದ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದಾಗ ಅರಣ್ಯ ರಸ್ತೆಯಲ್ಲಿ ರಾತ್ರಿ ವೇಳೆ ವಾಹನಗಳ ಸಂಚಾರ ನಿಷೇಧ ಮಾಡಿದ್ದು ಈಗಲೂ ಜಾರಿಯಲ್ಲಿದೆ. ಆಗಾಗ ಇದನ್ನು ತೆರವುಗೊಳಿಸುವ ಮಾತುಗಳು ಕೇಳಿಬರುತ್ತಿದ್ದು ಅರಣ್ಯ ಮತ್ತು ವನ್ಯಜೀವಿಗಳ ಹಿತಾಸಕ್ತಿಯಿಂದ ಮುಂದೆ ಯಾವುದೇ ಕಾರಣಕ್ಕೂ ಇದನ್ನು ತೆರವುಗೊಳಿಸಬಾರದು ಎಂದರು.

ಇದೇ ಸಂದರ್ಭದಲ್ಲಿ ಗ್ರಾಮದಲ್ಲಿ ನಿರ್ಮಿಸಿದ ಶೂಲದ ಮಾರಮ್ಮನ ದೇವಾಲಯ ಉದ್ಘಾಟನೆ, ಧ್ವನಿ ಸುರುಳಿ ಬಿಡುಗಡೆ, ನಾನಾ ಕವಿಗಳ ಪುಸ್ತಕಗಳ ಬಿಡುಗಡೆ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಪುರಸ್ಕಾರ, ಸವ್ಯಸಾಚಿ ಗೃಹ ಕೈಗಾರಿಕೆ ನೂತನ ಕಟ್ಟಡ ಉದ್ಘಾಟನೆ, 1001 ಸಸಿ ನೆಡುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಬುದ್ಧ ವಿಹಾರದ ಬಂತೇಜಿ, ಗುಲ್ಬರ್ಗಾ ವಿಶ್ವವಿದ್ಯಾ ನಿಲಯದ ಕನ್ನಡ ವಿಭಾಗದ ನಿರ್ದೇಶಕ ಡಾ.ಬೋಪೆ, ಸಿದ್ದಾರ್ಥ ವಿದ್ಯಾಸಂಸ್ಥೆ ಮೌಲ್ಯ ಮಾಪನ ವಿಭಾಗದ ಡಾ.ಗುಣಶೇಖರ್, ಜಯದೇವ ಆಸ್ಪತ್ರೆಯ ಡಾ.ಶಿವಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಜಾರಿ ನಿರ್ದೇಶನಾಲಯದ ಡಾ. ಆನಂದಕುಮಾರ್, ಗಣಿ ಇಲಾಖೆಯ ಜಂಟಿ ನಿರ್ದೇಶಕಿ ಡಾ.ಲಕ್ಷ್ಮಮ್ಮ, ಜನಪದ ಕಲಾವಿದ ಮಳವಳ್ಳಿ ಮಹದೇವಸ್ವಾಮಿ, ಗ್ರಾಮಸ್ಥರು, ಇದ್ದರು.

ವರ್ಗಾವಣೆಗೊಂಡ ಅಧಿಕಾರಿಗಳಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ


ವರ್ಗಾವಣೆಯಾದ ಬಿ.ಆರ್.ಮಹೇಶ್ ಹಾಗೂ ಯೋಗಾನಂದ್‌ರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ: ಕೊಳ್ಳೇಗಾಲ ಉಪ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸಿ, ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಬಡ್ತಿ ಹೊಂದಿ ವರ್ಗಾವಣೆಯಾದ ಬಿ.ಆರ್. ಮಹೇಶ್ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ ಬೇರೆಡೆಗೆ ವರ್ಗಾವಣೆಯಾದ ಯೋಗನಂದ್ ಅವರಿಗೆ ಪರಿಶಿಷ್ಟ ಜಾತಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ನಗರದ ನ್ಯಾಯಾಲಯ ರಸ್ತೆಯಲ್ಲಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಸಭಾಂಗಣದಲ್ಲಿ ಸನ್ಮಾನ ಸ್ವೀಕರಿಸಿದ ಬಿ.ಆರ್.ಮಹೇಶ್ ಮಾತನಾಡಿ, ಸರ್ಕಾರಿ ಸೇವೆಯಲ್ಲಿ ನಿವೃತ್ತಿ, ವರ್ಗಾವಣೆ ಸರ್ವೆ ಸಾಮಾನ್ಯವಾದದ್ದು. ನಾವು ಎಲ್ಲೆ ಇದ್ದರು ಕೂಡ ಪರಿಶಿಷ್ಟ ಜಾತಿ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸಹಕಾರ ನೀಡುತ್ತೇವೆ. ಸಂಘವು ಬುದ್ಧ, ಅಂಬೇಡ್ಕರ್ ಅವರ ಆಶಯಗಳನ್ನು ಅಳವಡಿಸಿಕೊಂಡಿದೆ. ಈ ಸಂಘವು ಉನ್ನತಮಟ್ಟದಲ್ಲಿ ಬೆಳೆಯಲಿ ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಯೋಗಾನಂದ್ ಮಾತನಾಡಿ, ಪರಿಶಿಷ್ಟ ಜಾತಿ ನೌಕರರ ಕ್ಷೇಮಾಭಿವೃದ್ಧಿ ಸಂಘವು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಜೊತೆಗೆ ಸಮಾಜಮುಖಿ ಕಾರ್ಯದೊಂದಿಗೆ ಬೆಳವಣಿಗೆಯಾಗುತ್ತಿದ್ದು, ಸಂಘದ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಸಿ.ಕೆ. ರಾಮಸ್ವಾಮಿ ಮಾತನಾಡಿ, ಬಿ.ಆರ್.ಮಹೇಶ್ ಮತ್ತು ಯೋಗನಂದ್ ಬೇರೆಡೆಗೆ ವರ್ಗಾವಣೆಗೊಂಡಿರುವುದು ತುಂಬಾ ಬೇಸರದ ಸಂಗತಿಯಾಗಿದೆ ಎಂದರು.

ಸಂಘದ ಜಿಲ್ಲಾ ಶಾಖೆಯ ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ಖಜಾಂಚಿ ಶಿವಕುಮಾರಯ್ಯ, ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ನುಜುಂಡಸ್ವಾಮಿ, ಖಜಾಂಚಿ ಪ್ರಭುಸ್ವಾಮಿ, ಎಂ.ಡಿ.ಮಹದೇವಯ್ಯ, ಪದಾಧಿಕಾರಿಗಳಾದ ನಾರಾಯಣಸ್ವಾಮಿ, ನಂಜುಂಡ, ಮಹೇಂದ್ರ ರವಿಕುಮಾರ್, ಮಧುಕುಮಾರ್, ಹೆಚ್.ಡಿ.ಮಹೇಶ್, ರವಿಕುಮಾರ್, ಈಶ್ವರ್, ನಂದೀಶ್, ರಾಜು.ಎಸ್.ಬಿ, ಕೃಷ್ಣಮೂರ್ತಿ, ನಂದಿನಿ, ಮಹೇಶ್, ರಾಜು.ಎಸ್.ಜಿ. ಇದ್ದರು.

ಯುವ ಕಾಂಗ್ರೆಸ್‌ನಿಂದ ಮತಗಳ್ಳತನ ವಿರುದ್ಧ ಪೋಸ್ಟರ್ ಅಭಿಯಾನ


ಜಿಲ್ಲಾ ಯುವ ಕಾಂಗ್ರೆಸ್ ಪೋಸ್ಟರ್ ಅಂಟಿಸುವ ಮೂಲಕ ಜನಜಾಗೃತಿ ಮೂಡಿಸಿತು.

ಚಾಮರಾಜನಗರ: ಲೋಕಸಭಾ ಚುನಾವಣೆಯಲ್ಲಿ ಲಕ್ಷಾಂತರ ಮತಗಳು ಕಳ್ಳತನವಾಗಿರುವ ಕುರಿತು ಕೇಂದ್ರ ಸರ್ಕಾರ ಮತ್ತು ಚುನಾವಣೆ ಆಯೋಗದ ವಿರುದ್ಧ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸಿ. ಯೋಗೇಂದ್ರ ನೇತೃತ್ವದಲ್ಲಿ ನಗರದಲ್ಲಿ ಪೋಸ್ಟರ್ ಅಂಟಿಸುವ ಮೂಲಕ ಜನಜಾಗೃತಿ ಅಭಿಯಾನ ನಡೆಸಲಾಯಿತು.

ಚುನಾವಣಾ ಆಯೋಗದ ಜತೆ ಬಿಜೆಪಿ ಶಾಮೀಲಾಗಿ 70ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಮತಗಳ್ಳತನ ಮಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಇದನ್ನು ರಾಹುಲ್ ಗಾಂಧಿ ಸಂಪೂರ್ಣ ಸಾಕ್ಷ್ಯಸಮೇತ ದೇಶದ ಜನರ ಮುಂದಿಟ್ಟಿದ್ದಾರೆ ಎಂದರು.

70ಕ್ಕಿಂತ ಹೆಚ್ಚು ಕ್ಷೇತ್ರದಲ್ಲಿ 30 ಸಾವಿರ ಕಡಿಮೆ ಅಂತರದಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿದೆ. ಪ್ರಜಾಪ್ರಭುತ್ವದಲ್ಲಿ ನ್ಯಾಯಯುತ ಚುನಾವಣೆ ನಡೆಸುವುದು ಆಯೋಗದ ಜವಾಬ್ದಾರಿ. ಅದರೆ, ಬಿಜೆಪಿ ಜೊತೆ ಸೇರಿ ಚುನಾವಣೆ ಬುಡಮೇಲು ಮಾಡುತ್ತಿದೆ. ವಾಮಮಾರ್ಗದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಗೆ ಕೇಂದ್ರ ಸರ್ಕಾರ ನಡೆಸಲು ಯಾವುದೇ ನೈತಿಕ ಹಕ್ಕಿಲ್ಲ ಎಂದರು.

ಮೈಸೂರು ಮಿತ್ರ
ಸೋಮವಾರ 18 ಆಗಸ್ಟ್ 2025

ಮಂಚೇಗೌಡನಕೊಪ್ಪಲು ಸರ್ಕಾರಿ ಕಾಲೇಜಲ್ಲಿ ಸ್ವಾತಂತ್ರ್ಯ ದಿನಾಚರಣೆ...




ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಪಿಯು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಉಪಮೇಯರ್ ಮಹದೇವಪ್ಪ ಕಾಲೇಜು ಪ್ರಾಂಶುಪಾಲರಾದ ಶಿವಮಲ್ಲಿ ಹಾಗೂ ಬೋಧಕ, ಬೋಧಕೇತರ ವರ್ಗದವರು ಹಾಜರಿದ್ದರು.

ಕರಾಟೆ ಪಟುಗಳ ಸಾಧನೆ...



ಮೈಸೂರಿನ ಚಾಮುಂಡಿ ವಿಹಾರದಲ್ಲಿ ನ್ಯಾಷನಲ್ ಕರಾಟೆ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ಭಾನುವಾರ ನಡೆದ 'ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್ ಮೈಸೂರು 2025'ರಲ್ಲಿ ಗೊಜು-ರಿಯೂ ಕರಾಟೆ ಡೊ ಅಕಾಡೆಮಿ ಪಟುಗಳು ಉತ್ತಮ ಸಾಧನೆ ಮೂಲಕ ಪ್ರಶಸ್ತಿಗಳಿಗೆ ಭಾಜನರಾದರು.

ಧರ್ಮಸ್ಥಳದಲ್ಲಿ ಮೈಸೂರು ಮುಖಂಡರು



ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಉಳಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಎಂಎಲ್‌ಸಿ ಸಿದ್ದರಾಜು, ನಗರ ವಕ್ತಾರ ಎಂ.ಎ.ಮೋಹನ್, ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಮತ್ತಿತರರು ಧರ್ಮಾಧಿಕಾರಿ ವೀರೇಂದ್ರ ಹೆಗ್ಡೆ ಅವರನ್ನು ಭೇಟಿಯಾಗಿ, ಬೆಂಬಲ ವ್ಯಕ್ತಪಡಿಸಿದರು.

ಜನ್ಮದಿನದ ಶುಭಾಶಯ



ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷರಾದ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಪಕ್ಷದ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ ಹಾಗೂ ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ ಅವರು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ಗುರಿ ಸಾಧನೆಗೆ ಸವಾಲು ಎದುರಿಸಲು ಸಿದ್ಧರಾಗಿ

ವಿದ್ಯಾರ್ಥಿಗಳಿಗೆ ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ರಾಮಚಂದ್ರ ಸಲಹೆ



ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.17– ವಿದ್ಯಾರ್ಥಿ ಜೀವನದಲ್ಲಿ ಪರಿಶ್ರಮ ಅವರ ಮುಂದಿನ ಗುರಿಗೆ ಉತ್ತಮ ಮಾರ್ಗ ಕಲ್ಪಿಸುತ್ತದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕೈಗೊಂಡು ಜೀವನ ರೂಪಿಸಿಕೊಳ್ಳಬೇಕು ಎಂದು ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ರಾಮಚಂದ್ರ ತಿಳಿಸಿದರು.

ಪಟ್ಟಣದ ದಳವಾಯಿ ಅಗ್ರಹಾರದಲ್ಲಿ ತಾಲೂಕು ಗಾಣಿಗರ ಸಂಘದ(ಸೋಸಲೆ) ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಧನೆ, ಯಶಸ್ಸು ಪಡೆಯಲು ಮಾರ್ಗ ಸರಳವಾಗಿಲ್ಲ. ಆದರೆ ಸತತ ಪರಿಶ್ರಮದಿಂದ ಮಾತ್ರ ಯಶಸ್ಸಿನ ಹಾದಿಯತ್ತ ಸಾಗಲು ಸಾಧ್ಯ. ಯಶಸ್ಸಿನಲ್ಲಿ ಜ್ಞಾನ ಶಕ್ತಿ, ಇಚ್ಛಾ ಶಕ್ತಿ, ಕ್ರಿಯಾ ಶಕ್ತಿ ಎಂಬ ಅಂಶ ಅಳವಡಿಕೊಂಡರೆ ವಿದ್ಯಾರ್ಥಿಗಳು ಜೀವನವನ್ನು ಉತ್ತಮವಾಗಿಸಿಕೊಳ್ಳಲು ಸಾಧ್ಯ. ಜೊತೆಗೆ ವಿದ್ಯಾರ್ಥಿಗಳು ಸಿಕ್ಕ ಅವಕಾಶ ಸದುಪಯೋಗ ಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದ ಕಿಚ್ಚು ಸಕ್ರಿಯವಾಗಿದ್ದರೆ ಗುರಿ ಸಾಧನೆಗೆ ಸಹಕಾರಿಯಾಗಲಿದೆ ಎಂದರು.

ನಮ್ಮ ಸಮುದಾಯದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಉನ್ನತ ಶಿಕ್ಷಣ ಪಡೆಯಲು ಮುಂದಾಗಬೇಕು. ವಿದ್ಯಾರ್ಥಿಗಳು ತಮ್ಮ ನಿರ್ದಿಷ್ಟ ಗುರಿ ತಲುಪಲು ಸವಾಲುಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಅಲ್ಲದೇ ಅಧ್ಯಯನದತ್ತ ಗಮನ ಹರಿಸಬೇಕು ಮತ್ತು ಜೀವನದಲ್ಲಿ ಏನನ್ನಾದರೂ ಸಾಧಿಸಲು ಬದ್ಧತೆ ತೋರಿಸಬೇಕು. ಯುವಜನತೆ ಸಮಾಜ ಕಟ್ಟುವ ಕೆಲಸಕ್ಕೆ ಮುಂದಾಗಬೇಕು. ದೂರದೃಷ್ಟಿ, ಗುರಿ ಹೊಂದುವ ಮೂಲಕ ಎಲ್ಲಾ ಸಮಾಜದವರೊಂದಿಗೆ ಬೆರೆತು ಕೆಲಸ ಮಾಡುವ ಉದ್ದೇಶ ಹೊಂದಬೇಕು ಎಂದರು.

> ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದು ಕಷ್ಟವಾಗಿತ್ತು. ಉನ್ನತ ವ್ಯಾಸಂಗವಂತೂ ಬಡ ಮಕ್ಕಳಿಗೆ ಕಬ್ಬಿಣದ ಕಡಲೆಯಂತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗಲು ಸರ್ಕಾರ ಪ್ರೋತ್ಸಾಹ, ನೆರವು ನೀಡುತ್ತಿದೆ. ಐಎಎಸ್, ಐಪಿಎಸ್‌ನಂತಹ ಶಿಕ್ಷಣಕ್ಕೂ ಸರ್ಕಾರ ಹಣಕಾಸಿನ ಸಹಕಾರ ನೀಡುತ್ತಿದ್ದು, ಇದರ ಸದುಪಯೋಗಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕು.
> – ಎಂ.ವೆಂಕಟರಮಣಶೆಟ್ಟಿ, ಗಾಣಿಗರ ಸಂಘದ ಸಲಹೆಗಾರ.

ಸಂಘದ ಗೌರವಾಧ್ಯಕ್ಷ ಎಸ್.ಮಹದೇವಶೆಟ್ಟಿ ಮಾತನಾಡಿ, ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಯ ಮುಂದಿನ ಶಿಕ್ಷಣ ಸಾಧನೆಗೆ ಉತ್ತೇಜನ ನೀಡುತ್ತದೆ. ಪುರಸ್ಕಾರ ಪಡೆಯುವಾಗ ಆಗುವ ಖುಷಿಯೇ ವಿಶಿಷ್ಟವಾದುದು. ಮುಂದೆ ವಿದ್ಯಾರ್ಥಿಗಳು ಸಾಧನೆ ಪಥಕ್ಕೇರಿದ ಬಳಿಕ ಪ್ರೋತ್ಸಾಹಿಸಿದ ಸಂಘ ಸಂಸ್ಥೆಗಳನ್ನು ಮರೆಯಬಾರದು. ಸಮಾಜಕ್ಕೆ ಸ್ಪಂದಿಸುವ ಸಮಾಜಮುಖಿತ್ವ ಮೈಗೂಡಿಸಿಕೊಳ್ಳಬೇಕು. ದಿನದಿಂದ ದಿನಕ್ಕೆ ಹೆಣ್ಣು ಮಕ್ಕಳೇ ಶಿಕ್ಷಣದಲ್ಲಿ ಮುನ್ನಡೆ ಸಾಧಿಸುತ್ತಿದ್ದಾರೆ. ಇದು ಸಂತಸದ ವಿಷಯವಾದರೂ ಗಂಡು ಮಕ್ಕಳು ಶಿಕ್ಷಣದಲ್ಲಿ ಹಿಂದೆ ಬೀಳುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುವತ್ತ ಚಿಂತನೆ ಮಾಡಬೇಕು. ಪೋಷಕರು ಕಷ್ಟಪಟ್ಟು ಶಿಕ್ಷಣ ಕೊಡಿಸುತ್ತಿದ್ದು, ಅವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿಸಿಕೊಡಲು ವಿದ್ಯಾರ್ಥಿಗಳು ಮುಂದಾಗಬೇಕು. ಅಕ್ಟೋಬರ್‌ನಲ್ಲಿ ಜಿಲ್ಲಾ ಗಾಣಿಗರ ಸಂಘದಿಂದ ಮೈಸೂರಿನಲ್ಲಿ ಸಮಾಜದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಉದ್ಯೋಗ ಮೇಳ ಆಯೋಜಿಸಲಾಗುತ್ತಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಅವರು ಮನವಿ ಮಾಡಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಶಾಮಿಯಾನ ಎಂ.ಮಹದೇವಸ್ವಾಮಿ, ಎಸ್.ಎನ್.ತುಳಸೀಪ್ರಸಾದ್, ಕಾರ್ಯದರ್ಶಿ ಆರ್.ರಾಮು, ಸಹ ಕಾರ್ಯದರ್ಶಿ ಕೆಎಸ್.ಮಹದೇವ ಸ್ವಾಮಿ, ಜಯಣ್ಣ, ಖಜಾಂಚಿ ಎಂ.ಮಹದೇವ ಸ್ವಾಮಿ, ಕಾನೂನು ಸಲಹೆಗಾರ ಎನ್.ನಂದನ್, ಸಂಘಟನಾ ಕಾರ್ಯದರ್ಶಿ ಹೆಚ್.ಮಹದೇವು, ಶಾಮಿಯಾನ ಎಂ.ಶಿವರಾಜು, ಲೆಕ್ಕ ಪರಿಶೋಧಕ ಆನಂದ್ ಕುಮಾರ್, ಸಲಹೆಗಾರರಾದ ಟಿ.ಉಮೇಶ್, ಜಿ.ನಾಗರಾಜು, ಎ.ಪಿ.ಶಶಿಕುಮಾರ್, ಗಾಣಿಗ ಸಮಾಜದ ಮುಖಂಡ ಗಿರಿಮಲ್ಲೇಶ್, ಹೆಚ್.ಡಿ.ಆನಂದ್, ಚಂದ್ರಕಾಂತ್, ಗಿರೀಶ್, ಪುಟ್ಟಣ್ಣ, ಇಟ್ಟುವಳ್ಳಿ ಗೋಪಾಲ್, ಜೆ.ಶಿವಕುಮಾರ್, ಜಿ.ಮನು, ಗೋಪಾಲ್ ಸೇರಿದಂತೆ ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

62.50 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ಹುಣಸೂರು, ಆ.17– ರೈತರು ಕೃಷಿ ಜೊತೆಗೆ ಹೈನುಗಾರಿಕೆ ಕೈಗೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ತಾಲೂಕಿನ ಚಿಟ್ಟಕ್ಯಾತನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶಾಸಕರ ನಿಧಿ, ಕೆಎಂಎಫ್ ಮತ್ತು ಮೈಮುಲ್ ಸಹಯೋಗದಲ್ಲಿ 62.50 ಲಕ್ಷ ರೂ. ವೆಚ್ಚದ ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಬಿಎಂಸಿ ಕೇಂದ್ರ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ನಿತ್ಯ 1.70 ಲಕ್ಷ ಲೀಟರ್ ಹಾಲು ಸರಬರಾಜು ಮಾಡುವ ಮೂಲಕ ತಾಲೂಕು ಜಿಲ್ಲೆಗೆ 2ನೇ ಸ್ಥಾನದಲ್ಲಿದ್ದು, ಗುಣಮಟ್ಟದಲ್ಲಿ ಪ್ರಥಮ ಸ್ಥಾನ ಹೊಂದಿರುವ ಹೆಗ್ಗಳಿಕೆ ನಮ್ಮ ಕ್ಷೇತ್ರಕ್ಕಿದೆ. ತಾಲೂಕಿನ ಡೇರಿಗಳ ಸಮಗ್ರ ಅಭಿವೃದ್ಧಿಗೆ ಮೈಮುಲ್ ವತಿಯಿಂದ 1 ಕೋಟಿ ರೂ. ಅನುದಾನ ನೀಡಿದೆ. ನನ್ನ ಶಾಸಕರ ಅನುದಾನದಿಂದ 50 ಲಕ್ಷ ರೂ. ಅನುದಾನ ನೀಡಿ, ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ ಎಂದರು.

ಶಿಂಡೇನಹಳ್ಳಿ ಗೇಟ್ 5 ಲಕ್ಷ, ಕಿರಂಗೂರು 11 ಲಕ್ಷ, ಹೊಸಪೆಂಜಹಳ್ಳಿ 11 ಲಕ್ಷ, ಗೌಡನಕಟ್ಟೆ 10.5 ಲಕ್ಷ, ಹುಂಡಿಮಾಳ 9 ಲಕ್ಷ, ಉಯಿಗೊಂಡನಹಳ್ಳಿ 5 ಲಕ್ಷ, ನಾಡಪ್ಪನಹಳ್ಳಿ 9.5 ಲಕ್ಷ, ತಟ್ಟೆಕೆರೆ 3 ಲಕ್ಷ, ಚಿಟ್ಟಕ್ಯಾತನಹಳ್ಳಿ 9.5 ಲಕ್ಷ ಹಾಗೂ ವಾರಂಚಿ ಸರ್ವೆ ನಂ.25ಕ್ಕೆ ಅನುದಾನ ನೀಡಲಾಗಿದೆ.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಸಣ್ಣಬಸವಯ್ಯ, ಕರೀಗೌಡ, ತಿಮ್ಮೇಗೌಡರಿಗೆ ಬಹುಮಾನ ವಿತರಿಸಲಾಯಿತು. ಕೆಎಂಎಫ್ ನಿರ್ದೇಶಕ ಕೆಎಸ್.ಕುಮಾರ್, ಮೈಮುಲ್ ನಿರ್ದೇಶಕಿ ಶಿವಗಾಮಿ, ಮೈಮುಲ್ ಅಧಿಕಾರಿಗಳಾದ ಗೌತಮ್, ಬಸವಲಿಂಗಯ್ಯ, ಮಹದೇವಮ್ಮ, ನಿಶಾಂತ್, ವಸಂತ್, ಸುಮಂತ್, ಅಕ್ಷಯ್, ಅನಂತ್, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರು ಬಸವರಾಜ್, ಮುಖಂಡರಾದ ಶ್ರೀಧರ್, ಸತೀಶ್, ಪಾಪಣ್ಣ, ಅಣ್ಣಯ್ಯ, ಸುಭಾಷ್, ಕೃಷ್ಣೇಗೌಡ, ಸ್ವಾಮಿಗೌಡ, ವಿಜಯಕುಮಾರ್ ನರಸಿಂಹ, ತಮ್ಮೇಗೌಡ, ಡೇರಿ ಅಧ್ಯಕ್ಷ ಕರೀಗೌಡ, ಕಾರ್ಯದರ್ಶಿ ಮಹೇಂದ್ರ ಇತರರಿದ್ದರು.

ಮೆಣಸಿಕ್ಯಾತನಹಳ್ಳಿ ಡೇರಿಗೆ 3.29 ಲಕ್ಷ ನಿವ್ವಳ ಲಾಭ



ಉಪನ್ಯಾಸಕ ಹೆಚ್.ಎನ್.ಗಿರೀಶ್ ಅವರನ್ನು ಸನ್ಮಾನಿಸಲಾಯಿತು.

ಬನ್ನೂರು, ಆ.17– ತಾಲೂಕಿನ ಮೆಣಸಿಕ್ಯಾತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 3.29 ಲಕ್ಷ ರೂ. ನಿವ್ವಳ ಲಾಭಗಳಿಸಿದೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ತಿಳಿಸಿದರು.

ಮೆಣಸಿಕ್ಯಾತನಹಳ್ಳಿಯಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸಂಘ ಹೆಚ್ಚಿನ ಲಾಭ ಗಳಿಸುವ ದೃಷ್ಟಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲು ಸಲಹೆ ಸೂಚನೆಗಳನ್ನು ನೀಡಿ, ಒಕ್ಕೂಟದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷ ತಿಮ್ಮೇಗೌಡ ಮಾತನಾಡಿ, ಸಂಘ ಪ್ರಸಕ್ತ ಸಾಲಿನಲ್ಲಿ ಸದಸ್ಯರಿಂದ 1.16 ಕೋಟಿ ರೂ. ಮೌಲ್ಯದ ಹಾಲು ಖರೀದಿಸಿದ್ದು, 3.29 ಲಕ್ಷ ರೂ. ಲಾಭ ಗಳಿಸಿದೆ. ಈ ಪೈಕಿ 1.36 ಲಕ್ಷ ರೂ.ಗಳನ್ನು ಸದಸ್ಯರಿಗೆ ಬೋನಸ್ ವಿತರಿಸಲಾಗಿದೆ ಎಂದರು.

ಸಂಘದ ಸಿಇಓ ಎಂ.ಎಸ್.ರವಿ ವಾರ್ಷಿಕ ವರದಿ ಮಂಡಿಸಿದರು. ಇದೇ ವೇಳೆ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪಡೆದ ಹುಣಸೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಹೆಚ್.ಎನ್.ಗಿರೀಶ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾರ್ಗ ವಿಸ್ತರಣಾಧಿಕಾರಿ ದಿವ್ಯಶ್ರೀ, ನಿರ್ದೇಶಕರಾದ ಮಹದೇವ, ಮಹೇಶ್, ಸುರೇಶ್, ಕೃಷ್ಣೇಗೌಡ, ಮಂಜುಗೌಡ, ಚಿಕ್ಕರಾಜು, ಮಹೇಶ್, ಬೋರಯ್ಯ, ಗ್ರಾಪಂ ಸದಸ್ಯರು ಇತರರಿದ್ದರು.

ಗ್ರಾಹಕರು ಬ್ಯಾಂಕ್ ಖಾತೆ ಸಕ್ರಿಯವಾಗಿರಿಸಿಕೊಳ್ಳಿ

ಆರ್‌ಬಿಐ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಪ್ರಭಾಕರನ್



ಕಾರ್ಯಕ್ರಮದಲ್ಲಿ ಆರ್‌ಬಿಐ ಬ್ಯಾಂಕ್ ಎಜಿಎಂ ಪ್ರಭಾಕರನ್ ಮಾತನಾಡಿದರು.

ತಿ.ನರಸೀಪುರ, ಆ.17– ಗ್ರಾಹಕರು ಬ್ಯಾಂಕ್ ಖಾತೆ ಸಕ್ರಿಯವಾಗಿರಿಸಿಕೊಳ್ಳುವ ಮೂಲಕ ಸರ್ಕಾರದಿಂದ ಬರಬಹುದಾದ ಸೌಲಭ್ಯಗಳ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ ಎಂದು ಆರ್‌ಬಿಐ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಪ್ರಭಾಕರನ್ ತಿಳಿಸಿದರು.

ತಾಲೂಕಿನ ಹೆಮ್ಮಿಗೆಯಲ್ಲಿ ಕೆನರಾ ಬ್ಯಾಂಕ್ ತಿ.ನರಸೀಪುರ ಶಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 3 ತಿಂಗಳ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದಲ್ಲಿ ಅವರು ಮಾತನಾಡಿದರು.

ಗ್ರಾಹಕರು ಬ್ಯಾಂಕ್ ಖಾತೆಯನ್ನು ಸಕ್ರಿಯವಾಗಿಟ್ಟುಕೊಳ್ಳುವುದು ಬಹುಮುಖ್ಯ. ಬ್ಯಾಂಕ್ ಖಾತೆ ನಿಷ್ಕ್ರಿಯವಾಗಿದ್ದಲ್ಲಿ ಕೂಡಲೇ ಇ ಕೆವೈಸಿ ಮಾಡಿಸಿ ಖಾತೆ ಸಕ್ರಿಯಗೊಳಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಯಾವುದೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಾಧ್ಯ. ಕ್ರಿಯಾತ್ಮಕವಾಗಿ ನಾವು ಬ್ಯಾಂಕಿಂಗ್‌ನಲ್ಲಿ ತೊಡಗಿಕೊಂಡಾಗ ಸವಲತ್ತುಗಳ ಸದ್ಬಳಕೆ ಸಾಧ್ಯ. ಸರ್ಕಾರದಿಂದ ಈಗ ಫಲಾನುಭವಿಗಳಿಗೆ ಬರುತ್ತಿರುವ ಯಾವುದೇ ಸೌಲಭ್ಯಗಳು ಈಗ ಹಣದ ರೂಪದಲ್ಲಿ ಬರುತ್ತಿಲ್ಲ. ನೇರವಾಗಿ ಫಲಾನುಭವಿ ಖಾತೆಗಳಿಗೆ ಜಮೆಯಾಗುತ್ತಿರುವುದರಿಂದ ಎಲ್ಲಾ ಖಾತೆದಾರರು ಇ–ಕೆವೈಸಿ ಮಾಡಿಸಿ ಕೊಂಡು ಸರ್ಕಾರದ ಯೋಜನೆಗಳನ್ನು ತಡೆರಹಿತವಾಗಿ ಪಡೆಯಲು ಮುಂದಾಗಬೇಕು ಎಂದರು.

ಕೆನರಾ ಬ್ಯಾಂಕ್ ಜು.1 ರಿಂದ ಸೆ.30ರವರೆಗೆ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ ನಡೆಸುತ್ತಿದ್ದು, ಬ್ಯಾಂಕ್ ಸಿಬ್ಬಂದಿ ನಿಮ್ಮ ಗ್ರಾಮದ ಮನೆ ಮನೆಗೆ ಬಂದು ಸೇವೆ ಒದಗಿಸುತ್ತಿದ್ದಾರೆ. ಇದರಿಂದ ತಡೆ ರಹಿತ ಸೇವೆ ಹಾಗೂ ಕಾಲದಿಂದ ಕಾಲಕ್ಕೆ ಆಗುತ್ತಿರುವ ಬೆಳವಣಿಗೆಗಳು, ತಂತ್ರಜ್ಞಾನದ ಅಳವಡಿಕೆಯಿಂದ ಆಗುವ ಉತ್ತಮ ವ್ಯವಸ್ಥೆಯಿಂದ ಬಹು ಸುಲಭವಾಗಿ ಸೇವೆ ಪಡೆಯಲು ಅನುಕೂಲವಾಗಲಿದೆ. ಹಾಗಾಗಿ ಬ್ಯಾಂಕ್‌ನಲ್ಲಿ ಖಾತೆ ತೆರೆದು ಖಾತೆ ನಿಷ್ಕ್ರಿಯಗೊಂಡಿದ್ದಲ್ಲಿ ಕೂಡಲೇ ಇ–ಕೆವೈಸಿ ಮಾಡಿಸಿ ಖಾತೆ ಸಕ್ರಿಯವಾಗಿರಿಸಿ ಎಂದರು.

ಕೆನರಾ ಬ್ಯಾಂಕಿನ ಎಜಿಎಂ ಉಮೇಶ್ ಮಾತನಾಡಿ, ಕಳೆದ ತಿಂಗಳಿಂದ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ ನಡೆಸಲಾಗುತ್ತಿದ್ದು, 15 ಗ್ರಾಮಗಳಲ್ಲಿ ಖಾತೆದಾರರಿಗೆ ಕೇಂದ್ರ ಸರ್ಕಾರದ ಯೋಜನೆ ಕುರಿತಂತೆ ಅರಿವು ಮೂಡಿಸಲಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಪಿಎಂಜಿಡಿವೈ ಯೋಜನೆಯಲ್ಲಿ ಉಚಿತವಾಗಿ ಖಾತೆ ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಯಾವುದೇ ಹಣ ಪಾವತಿಸದೇ ಆಧಾರ್ ಹಾಗೂ ಪಾನ್ ಕಾರ್ಡ್ ನೀಡಿ ಖಾತೆ ತೆರೆದು ಸರ್ಕಾರದ ಬೆನಿಫಿಟ್ ಪಡೆದುಕೊಳ್ಳಬಹುದು. ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯಲ್ಲಿ ವರ್ಷಕ್ಕೆ 436 ರೂಪಾಯಿ ಪಾವತಿ ಮಾಡಿ 2 ಲಕ್ಷಗಳ ಜೀವ ವಿಮೆ, ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆಯಲ್ಲಿ ವರ್ಷಕ್ಕೆ 20 ರೂ. ಪಾವತಿಸಿ 2 ಲಕ್ಷ ರೂ.ಗಳ ದುರ್ಘಟನಾ ವಿಮೆ ಹಾಗೂ ಅಟಲ್ ಪೆನ್ಷನ್ ಯೋಜನೆಯಡಿ ಕನಿಷ್ಠ ಹಣ ಹೂಡಿಕೆ ಮಾಡಿ ವೃದ್ಧಾಪ್ಯದಲ್ಲಿ ಗರಿಷ್ಠ ಲಾಭ ಪಡೆಯಬಹುದಾಗಿದೆ. ಬ್ಯಾಂಕ್ ಯಾರಿಗೂ ವೈಯಕ್ತಿಕವಾಗಿ ದೂರವಾಣಿ ಕರೆ ಮಾಡುವುದಿಲ್ಲ. ಸೈಬರ್ ವಂಚಕರು ಬ್ಯಾಂಕ್ ಹೆಸರೇಳಿ ವಂಚನೆಗೊಳಪಡಿಸುತ್ತಿದ್ದು, ಈ ಬಗ್ಗೆ ಗ್ರಾಹಕರು ಜಾಗರೂಕರಾಗಿರುವಂತೆ ಎಚ್ಚರಿಕೆ ನೀಡಿದರು.

ಮೈಸೂರು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಕೃಷ್ಣಮೂರ್ತಿ, ಡೈರಿ ಅಧ್ಯಕ್ಷ ಹೆಮ್ಮಿಗೆ ಶೇಷಾದ್ರಿ, ಗ್ರಾಪಂ ಉಪಾಧ್ಯಕ್ಷ ಸೋಮಣ್ಣ, ಸದಸ್ಯ ಚಿಕ್ಕಹೊನ್ನಯ್ಯ, ರಾಮು, ಮುಖ್ಯ ಪ್ರವರ್ತಕ ರಾಘವ ಕಾರ್ತಿಕ್, ಹೇಮಚಂದ್ರ, ಅಮೂಲ್ಯ, ಸಾಕ್ಷರ ಕೇಂದ್ರದ ರಮೇಶ್, ಮಧು, ಮಹದೇವಸ್ವಾಮಿ, ಎಚ್.ಆರ್.ವೀಣಾ, ಪುಟ್ಟಸ್ವಾಮಿ ಮತ್ತು ಗ್ರಾಮಸ್ಥರು ಹಾಜರಿದ್ದರು.

ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ



ಸರಗೂರು ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮನಿಗೆ ಭಾನುವಾರ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ವಿಶೇಷ ಪೂಜೆ ಸಲ್ಲಿಸಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ, ಕೋಟೆ ಅಧ್ಯಕ್ಷ ರಾಜೇಂದ್ರ, ಮುಖಂಡರಾದ ಯತೀಶ್ ಕುಮಾರ್, ತಾಪಂ ಮಾಜಿ ಸದಸ್ಯ ಹೆಚ್.ಹನು, ಮಾದಾಪುರ ಗ್ರಾಪಂ ಸದಸ್ಯ ಎಂ.ಎಲ್.ಗಿರೀಶ್, ಸಿದ್ದರಾಜು, ಬೆಟ್ಟನಾಯಕ, ಚಿಕ್ಕತಿಮ್ಮನಾಯಕ, ಶ್ರೀನಿವಾಸ್, ಮಂಜು, ಸಿದ್ದರಾಜು, ಪ್ರಶಾಂತ್, ಯೋಗೀಶ್, ಲೇಖಕುಮಾರ್, ಯೋಗ ಮಹೇಶ್, ನರಸಿಂಹರಾಜು ಸೇರಿದಂತೆ ಇನ್ನಿತರರಿದ್ದರು.

ನೂತನ ಕಚೇರಿ ಉದ್ಘಾಟನೆ



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದ ನೂತನ ಕಚೇರಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ಉದ್ಘಾಟಿಸಿದರು. ಈ ವೇಳೆ ಕೆಪಿಎಸ್ ಶಾಲೆ ಮುಖ್ಯಸ್ಥ ರಾಚಯ್ಯ, ಉಪಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಎಂ.ರಂಗಸ್ವಾಮಿ, ಅಧ್ಯಾಪಕರಾದ ಕೇಶವ್, ಚಂದ್ರಪ್ರಭ, ನಿರ್ಮಲ, ರಮೇಶ್ ಇತರರಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ಅಗತ್ಯ



ಆರೋಹಣ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ತಿ.ನರಸೀಪುರ, ಆ.17– ಬ್ರಿಟಿಷರ ದಾಸ್ಯದಿಂದ ಭಾರತೀಯರನ್ನು ಮುಕ್ತಿಗೊಳಿಸಲು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವನವನ್ನೇ ಬಲಿದಾನಗೈದಿದ್ದಾರೆ. ಅಂತಹ ತ್ಯಾಗ ಜೀವಿಗಳ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಆರೋಹಣ ಸೆಂಟ್ರಲ್ ಸ್ಕೂಲ್ ಕಾರ್ಯದರ್ಶಿ ನುಗ್ಗಹಳ್ಳಿ ಕೊಪ್ಪಲು ಎನ್.ಎಂ.ರಾಮಚಂದ್ರ ತಿಳಿಸಿದರು.

ತಾಲೂಕಿನ ಬನ್ನೂರು ಮುಖ್ಯ ರಸ್ತೆಯಲ್ಲಿರುವ ಆರೋಹಣ ಸೆಂಟ್ರಲ್ ಸ್ಕೂಲ್‌ನಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಸಾವಿರಾರು ಹೋರಾಟಗಾರರು ಬಲಿದಾನ ಮಾಡಿದ್ದಾರೆ. ಮಹಾತ್ಮ ಗಾಂಧೀಜಿ, ಸರ್ದಾರ್ ವಲ್ಲಭ ಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಬಾಲಗಂಗಾಧರ ತಿಲಕ್, ಡಾ.ಬಿ.ಆರ್. ಅಂಬೇಡ್ಕರ್ ಅವರಂತಹ ನೂರಾರು ಮಹಾನ್ ನಾಯಕರ ಹೋರಾಟದ ಫಲವೇ ಇಂದು ನಮ್ಮ ಸಂಭ್ರಮದ ಆಚರಣೆಗೆ ಕಾರಣ ಎಂದರು.

ಸಂಸ್ಥೆ ಅಧ್ಯಕ್ಷ ಹನುಮಂತೇಗೌಡ ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆ ಆಚರಿಸುವುದರ ಜೊತೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗೌರವ ಕಾರ್ಯದರ್ಶಿ ಬಿ.ಎಸ್.ಯೋಗೇಂದ್ರ, ಉಪಾಧ್ಯಕ್ಷ ಬಿ.ಎನ್.ಸುರೇಶ್, ಖಜಾಂಚಿ ಮಾಣಿಕ್ ಚಂದ್, ಟ್ರಸ್ಟಿಗಳಾದ ವೈ.ಎಸ್.ಅರವಿಂದ, ವೆಂಕಟೇಶ್ ಪ್ರಸಾದ್, ಸೂರಜ್, ವೆಂಕಟೇಶ್ ಬಸವನಹಳ್ಳಿ, ಪ್ರಾಂಶುಪಾಲೆ ವಿಮಲ, ಮುಖ್ಯೋಪಾಧ್ಯಾಯನಿ ಲಕ್ಷ್ಮಿ, ಶಿಕ್ಷಕವೃಂದ, ಮಕ್ಕಳು ಹಾಗೂ ಪೋಷಕರು ಹಾಜರಿದ್ದರು.

ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ



ಹುಣಸೂರು ನಗರಸಭೆ ವ್ಯಾಪ್ತಿಯ ವಾರ್ಡ್ ನಂ.26ರಲ್ಲಿ 40 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಉಪಾಧ್ಯಕ್ಷೆ ಆಶಾ, ಪೌರಾಯುಕ್ತೆ ಮಾನಸ, ಸದಸ್ಯರಾದ ಸತೀಶ್ ಕುಮಾರ್, ದೇವರಾಜ್, ಶ್ರೀನಾಥ್, ಶರವಣ, ಕೃಷ್ಣರಾಜಗುಪ್ತ, ಸಿರಾಜ್, ವಿವೇಕ್, ಶ್ವೇತಾ, ಇಂಜಿನಿಯರ್‌ಗಳಾದ ಶರ್ಮಿಳ, ಲೋಕೇಶ್ ಇನ್ನಿತರರಿದ್ದರು.

ಇಂದು ಜೆಡಿಎಸ್ ಕಚೇರಿಗೆ ಕೆ.ಎಂ.ಕೃಷ್ಣನಾಯಕ ಭೇಟಿ



ಹೆಚ್.ಡಿ.ಕೋಟೆ, ಆ.17– ಮಾಜಿ ಸಿಎಂ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡ ಸಮಾಜ ಸೇವಕ ಕೆ.ಎಂ.ಕೃಷ್ಣನಾಯಕ ಅವರು ಇದೇ ಮೊದಲ ಬಾರಿಗೆ ಆ.18ರಂದು 12.30ಕ್ಕೆ ಪಟ್ಟಣದ ತಾಲೂಕು ಜೆಡಿಎಸ್ ಕಚೇರಿಗೆ ಭೇಟಿ ನೀಡಲಿದ್ದಾರೆ.

ಸೋಮವಾರ ಕಚೇರಿಗೆ ಆಗಮಿಸಲಿದ್ದು, ಇದಕ್ಕೂ ಮುನ್ನ ಬೆಳಗ್ಗೆ 8 ಗಂಟೆಗೆ ಜಿ.ಬಿ.ಸರಗೂರಿನ ಕಾಶಿ ವಿಶ್ವನಾಥ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. 8.15ಕ್ಕೆ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ಬಳಿಕ 8.30ರಿಂದ 10 ಗಂಟೆವರೆಗೆ ಸಿಂಡೇನಹಳ್ಳಿ, ಆಲನಹಳ್ಳಿ, ಕ್ಯಾತನಹಳ್ಳಿ, ಚಾಮಲಾಪುರ, ಹಂಪಾಪುರ, ಹೊಮ್ಮರಗಳ್ಳಿ, ಗುಜ್ಜಪ್ಪನ ಹುಂಡಿ ಗ್ರಾಮಗಳಿಗೆ ತೆರಳಿದ ಬಳಿಕ 10.15ಕ್ಕೆ ಮಾದಾಪುರದ ಶ್ರೀಚಂದ್ರಮೌಳೇಶ್ವರ ಮಠಕ್ಕೆ ತೆರಳಿ ಶ್ರೀಮಲ್ಲಿಕಾರ್ಜುನಸ್ವಾಮಿ ಅವರ ಆಶೀರ್ವಾದ ಪಡೆಯಲಿದ್ದಾರೆ. 10.30ಕ್ಕೆ ಹೈರಿಗೆಯಲ್ಲಿರುವ ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಹೆಚ್.ಮಟಕೆರೆ, ಹ್ಯಾಂಡ್ ಪೋಸ್ಟ್, ಅಂತರಸಂತೆ... ಗ್ರಾಮಸ್ಥರನ್ನು ಭೇಟಿ ಮಾಡಿ ಜೆಡಿಎಸ್ ಪಕ್ಷದ ಕಚೇರಿಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಜೆಡಿಎಸ್‌ನ ಜಿಲ್ಲಾ ಮತ್ತು ತಾಪಂಗಳ ಮಾಜಿ ಸದಸ್ಯರು, ಗ್ರಾಪಂ ಸದಸ್ಯರು, ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕೃಷ್ಣನಾಯಕ ಅವರನ್ನು ಬೆಂಬಲಿಸಬೇಕು ಎಂದು ಕೋಟೆ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಗೋಪಾಲಸ್ವಾಮಿ ತಿಳಿಸಿದ್ದಾರೆ.

ಶ್ರೀಗುರುಮಲ್ಲೇಶ್ವರ ಸಹಕಾರ ಸಂಘಕ್ಕೆ 13.32 ಲಕ್ಷ ರೂ. ಲಾಭ



ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷೆ ನಂದಿನಿ ಉದ್ಘಾಟಿಸಿದರು.

ನಂಜನಗೂಡು, ಆ.17– ಮಹಿಳೆಯರು ಸ್ವಯಂ ಉದ್ಯೋಗಿಗಳಾಗಿ ಸ್ವಾವಲಂಬಿ ಜೀವನ ರೂಪಿಸಿಕೊಳ್ಳುವಂತಾಗಬೇಕು ಎಂಬ ಧ್ಯೇಯೋದ್ದೇಶದಿಂದ ಅಸ್ತಿತ್ವಕ್ಕೆ ಬಂದ ಸಂಘದಲ್ಲಿ ಆರ್ಥಿಕ ಶಿಸ್ತನ್ನು ಪಾಲಿಸಿಕೊಂಡು ಬಂದ ಪರಿಣಾಮ ಸಂಘ ಪ್ರಸಕ್ತ ವರ್ಷ 2 ಕೋಟಿ ವಹಿವಾಟು ನಡೆಸಿ 13.32 ಲಕ್ಷ ರೂ.ಗಳ ಲಾಭ ಗಳಿಸಿದೆ ಎಂದು ಶ್ರೀಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷೆ ನಂದಿನಿ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಶ್ರೀ ಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ 11 ವರ್ಷಗಳ ಹಿಂದೆ ಮಹಿಳೆಯರಿಗೆ ಸ್ವಯಂ ಉದ್ಯೋಗ ಹಾಗೂ ಸ್ವಾವಲಂಬಿ ಜೀವನ ಕಟ್ಟಿಕೊಡಬೇಕೆಂಬ ಸದುದ್ದೇಶದಿಂದ ಮಹಿಳಾ ಸಹಕಾರ ಸಂಘ ಹುಟ್ಟುಹಾಕಿ ಮಹಿಳೆಯರೇ ಮುಖ್ಯವಾಹಿನಿಯಲ್ಲಿ ನಿಂತು ಸಂಘವನ್ನು ಶಿಸ್ತುಬದ್ಧವಾಗಿ ನಡೆಸಿಕೊಂಡು ಬರಲಾಗಿದೆ. 1350 ಮಹಿಳೆಯರನ್ನು ಷೇರುದಾರರನ್ನಾಗಿ ಮಾಡಿಕೊಂಡು ಅಗತ್ಯವುಳ್ಳವರಿಗೆ ಸಾಲ ನೀಡಿ ನೆರವು ನೀಡಲಾಗುತ್ತಿದೆ. ಇನ್ನು ಸಂಘದಲ್ಲಿ ಸಾಲ ವಸೂಲಾತಿ ಸೇರಿದಂತೆ ಆರ್ಥಿಕ ಶಿಸ್ತು ಹಾಗೂ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಲಾಗುತ್ತಿದೆ. ಪ್ರಸಕ್ತ ವರ್ಷ 2 ಕೋಟಿ ರೂ. ವರೆಗೂ ವಹಿವಾಟು ನಡೆಸಿ ದಾಖಲೆ ನಿರ್ಮಿಸಲಾಗಿದೆ ಎಂದರು.

ಇನ್ನು ಸಂಘಕ್ಕೆ ಸ್ವಂತ ನಿವೇಶನ ಮಂಜೂರು ಮಾಡಿಸುವ ನಿಟ್ಟಿನಲ್ಲಿ ಈಗಾಗಲೇ ಪ್ರಯತ್ನ ಸಾಗಿದ್ದು, ಮುಡಾ ವತಿಯಿಂದ ಸಿಎ ನಿವೇಶನ ಮಂಜೂರಾತಿಗೆ ಅಗತ್ಯ ಕ್ರಮವಹಿಸಲಾಗಿದೆ. ಶೀಘ್ರ ನಿವೇಶನ ಮಂಜೂರಾಗುವ ಸಾಧ್ಯತೆ ಇದೆ. ನಿವೇಶನ ದೊರಕಿದ ಬಳಿಕ ಸ್ವಂತ ಕಟ್ಟಡ ನಿರ್ಮಾಣಕ್ಕೆ ಲಾಭದ ಹಣ ಬಳಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಂಘದಿಂದ ಕೇವಲ ಸಾಲ ಸೌಲಭ್ಯ ಮಾತ್ರವಲ್ಲದೇ, ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಪರಿಸರ ದಿನಾಚರಣೆ ಸೇರಿದಂತೆ ಹಲವು ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ 11 ವರ್ಷಗಳಿಂದ ನನ್ನ ಮೇಲೆ ವಿಶ್ವಾಸವಿಟ್ಟು ನಿರಂತರವಾಗಿ ಅಧ್ಯಕ್ಷರಾಗಿ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಿರುವ ಸದಸ್ಯರ ನಂಬಿಕೆ ಉಳಿಸಿಕೊಂಡು ಸೇವೆ ಸಲ್ಲಿಸಿರುವ ತೃಪ್ತಿ ನನಗಿದೆ ಎಂದರು.

ಬೆಂಗಳೂರಿನ ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೆಕುಂದ್ರೆ ಮಾತನಾಡಿ, ಕುಟುಂಬ ನಿರ್ವಹಣೆ ಮಾಡುವಲ್ಲಿ ಮಹಿಳೆಯರು ಕೂಡ ಇತ್ತೀಚಿನ ದಿನಗಳಲ್ಲಿ ಒತ್ತಡಕ್ಕೆ ಸಿಲುಕಿ ಹೃದಯ ಸಂಬಂಧಿತ ಹಾಗೂ ನಾನಾ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಕುಟುಂಬದ ಜವಾಬ್ದಾರಿ ತೋರುವ ಭರದಲ್ಲಿ ನಿಮ್ಮ ಆರೋಗ್ಯದ ಬಗ್ಗೆ ಅಲಕ್ಷ್ಯ ತೋರಬಾರದು. ನಿಯಮಿತ ವ್ಯಾಯಾಮ, ಯೋಗ, ಪ್ರಾಣಾಯಾಮ ಮಾಡುವ ಮೂಲಕ ಲವಲವಿಕೆಯಿಂದ ಇರುವಂತಹ ಜೀವನ ಕಂಡುಕೊಂಡರೆ ಸಾಧ್ಯವಾದಷ್ಟು ಕಾಯಿಲೆಗಳಿಂದ ದೂರವಿರಬಹುದು ಎಂದು ಸಲಹೆ ಕೊಟ್ಟರು.

ಕಾರ್ಯಕ್ರಮದಲ್ಲಿ ಸಂಘದ ಸಿಇಓ ನೇತ್ರಾವತಿ 2024–25ನೇ ಸಾಲಿನ ಆಯವ್ಯಯ ಮಂಡಿಸಿ ಸದಸ್ಯರಿಂದ ಅನುಮೋದನೆ ಪಡೆದುಕೊಂಡರು. ಸಂಘದ ಉಪಾಧ್ಯಕ್ಷೆ ಭ್ರಮರಾಂಬಿಕೆ, ನಿರ್ದೇಶಕರಾದ ಕೋಮಲ, ಉಷಾ, ಗುಣವತಿ, ಭಾಗ್ಯ, ಚೈತ್ರ, ಶ್ರೀಧರಿ, ಸಿ.ರೇಣುಕಾ, ವಸುಂಧರಾ, ಟಿ.ಸಿ.ರೇಣುಕಾ ಉಪಸ್ಥಿತರಿದ್ದರು.

ವರ್ಗಾವಣೆಗೊಂಡ ವೈದ್ಯರಿಗೆ ಬೀಳ್ಕೊಡುಗೆ



ವರ್ಗಾವಣೆಗೊಂಡ ಡಾ.ಭಾರತಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಬೀಳ್ಕೊಟ್ಟರು.

ಮಲ್ಕುಂಡಿ, ಆ.17– ನಂಜನಗೂಡು ತಾಲೂಕಿನ ಮಡುವಿನಹಳ್ಳಿ ಗ್ರಾಮದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಿಂದ ಬೇರೆಡೆಗೆ ವರ್ಗಾವಣೆಗೊಂಡ ಡಾ.ಭಾರತಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಬೀಳ್ಕೊಟ್ಟರು.

ಬಳಿಕ ಮಾತನಾಡಿದ ಇಂಜಿನಿಯರ್ ಬಸವರಾಜು, ಡಾ.ಭಾರತಿ ಅವರು ಈ ಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದರು.

ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಡಾ.ಭಾರತಿ, ನಾನು ಈ ಗ್ರಾಮದಲ್ಲಿ 12 ವರ್ಷ ಸೇವೆ ಸಲ್ಲಿಸಿ ಬೇರೆಡೆಗೆ ವರ್ಗಾವಣೆಯಾಗುತ್ತಿರುವುದು ನನಗೆ ದುಃಖ ತಂದಿದೆ. ಈ ಭಾಗದ ಜನರ ಸಹಕಾರದಿಂದ ನನಗೆ ಸೇವೆ ಸಲ್ಲಿಸಲು ಅವಕಾಶವಾಗಿದೆ. ಈ ಭಾಗದ ಜನರ ಪ್ರೀತಿಗೆ ಚಿರಋಣಿ ಎಂದರು.

ಗ್ರಾಪಂ ಸದಸ್ಯರಾದ ಚನ್ನಪ್ಪ, ಶಿವರತ್ನ, ಮುಖಂಡರಾದ ಸಿದ್ದರಾಜು, ಕುಮಾರ್, ದೇವಯ್ಯ, ವೆಂಕಟೇಶ, ಶಿವಲಿಂಗ, ಮಹದೇವಸ್ವಾಮಿ, ಜಯಲಕ್ಷ್ಮಿ, ಸಿದ್ದರಾಜು, ಪ್ರದೀಪ್ ಸೇರಿದಂತೆ ಡಾ.ಅಂಬೇಡ್ಕರ್ ಯುವಕ ಸಂಘದ ಯುವಕರು ಹಾಜರಿದ್ದರು.

ಮೈಸೂರು ಮಿತ್ರ

ಸೋಮವಾರ 18 ಆಗಸ್ಟ್ 2025

ನ್ಯಾ. ನಾಗಮೋಹನ್ ದಾಸ್ ವರದಿ ಯಥಾವತ್ ಜಾರಿಗೆ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಪತ್ರಿಕಾಗೋಷ್ಠಿ ನಡೆಸಿದರು. ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಆ.17(ಎಂಕೆ)– ರಾಜ್ಯ ಸರ್ಕಾರ ಆ.19ರ ವಿಶೇಷ ಸಂಪುಟ ಸಭೆಯಲ್ಲಿ ನ್ಯಾ.ನಾಗಮೋಹನ್ ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಹಾಗೂ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸುದದ್ದಿಗೋಷ್ಠಿ ನಡೆಸಿದ ಅವರು, ನ್ಯಾ.ನಾಗಮೋಹನ್ ದಾಸ್ ನೇತೃತದಲ್ಲಿ ನಡೆದ ಪರಿಶಿಷ್ಟ ಜಾತಿ ಒಳಮೀಸಲಾತಿ ಸಮೀಕ್ಷಾ ವರದಿ ವಿರುದ್ಧವೇ ದೊಡ್ಡದೊಂದು ಪಿತೂರಿ ನಡೆದಿದ್ದು, ಅವರಿವರ ಮಾತು ಕೇಳಿ ವರದಿ ಜಾರಿಗೊಳಿಸದೆ ಮುಂದೂಡುವ ಕೆಲಸ ಮಾಡಿದರೆ ರಾಜ್ಯಾದ್ಯಂತ ದೊಡ್ಡ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ರಾಜ್ಯದ ಜನಸಂಖ್ಯೆಯಲ್ಲಿ ಮಾದಿಗರೆ ನಂಬರ್ ಒನ್ ಎಂಬುದು ನ್ಯಾ.ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ಮತ್ತು ನ್ಯಾ.ಕಾಂತರಾಜು ಆಯೋಗದ ವರದಿಯಲ್ಲೂ ಸಾಬೀತಾಗಿದೆ. ಪ್ರಾಮಾಣಿಕವಾಗಿ ಆನ್‌ಲೈನ್‌ನಲ್ಲಿ ಸಮೀಕ್ಷೆ ನಡೆಸಿದ್ದರಿಂದ ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿಯೂ ಮಾದಿಗರೆ ಹೆಚ್ಚಾಗಿರುವುದು ಎಂದು ಸಾಬೀತಾಗಿದೆ ಎಂದರು.

ರಾಜ್ಯದಲ್ಲಿ ಹೊಲೆಯರಿಗಿಂತ ಮಾದಿಗರು ಸುಮಾರು 7 ಲಕ್ಷ ಹೆಚ್ಚಿದ್ದಾರೆ. ಅಲ್ಲದೆ ಎಲ್ಲ ಕಡೆಗಳಲ್ಲಿ ಹೊಲೆಯರೇ ಅಧಿಕಾರ ಹಿಡಿದಿದ್ದು, ಇವರಲ್ಲಿ ಸಾಮಾಜಿಕ ಬದ್ಧತೆ, ಮಾನವೀಯ ಮೌಲ್ಯ ಇದ್ದರೆ ವರದಿ ವಿರೋಧಿಸಬಾರದು. ಅಲ್ಲದೆ ಹೊಲೆಯರನ್ನು ಯಾವುದೇ ಕಾರಣಕ್ಕೂ ಸರ್ಕಾರ ಮಾದಿಗರ ಗುಂಪಿಗೆ ಸೇರಿಸಬಾರದು ಎಂದು ಒತ್ತಾಯಿಸಿದರು.

ನ್ಯಾ.ನಾಗಮೋಹನ್ ದಾಸ್ ಅವರ ನೇಮಕವನ್ನು ಈ ಹಿಂದೆ ಸ್ವಾಗತಿಸಿದ್ದವರೇ ಈಗ ವರದಿ ವಿರೋಧಿಸುತ್ತಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ. ಸಮೀಕ್ಷೆ ವೇಳೆ ಸುಮ್ಮನಿದ್ದರು. ಮಾದಿಗರು, ಹೊಲೆಯರು ಅಣ್ಣ ತಮ್ಮಂದಿರಿದ್ದಂತೆ ಎಂದು ಹೇಳುತ್ತಿದ್ದವರು ಈಗ ನಡೆದುಕೊಳ್ಳುತ್ತಿರುವುದು ಸರಿಯೇ? ಎಂದು ಪ್ರಶ್ನಿಸಿದರು.

ಮಾದಿಗರ ವೃತ್ತಿಯೇ ಚರ್ಮ ಆಧಾರಿತ: ಪೆರಿಯ ಅಥವಾ ಪೆರಿಯನ್ ಎಂಬುದು ಚರ್ಮ ಆಧಾರತಿ ಜಾತಿ ಆಗಿದೆ. ಚರ್ಮ ಆಧಾರಿತ ವೃತ್ತಿ ಮಾದಿಗ ವೃತ್ತಿಯೇ ಆಗಿದೆ. ಹೀಗಾಗಿ ಈ ಕುರಿತು ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲೆಸೆದ ಅವರು, ಇದೇ ರೀತಿ ಆದಿದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ವಿಷಯ ಕುರಿತೂ ಗೊಂದಲ ಎಬ್ಬಿಸುತ್ತಿದ್ದಾರೆ. ಇವುಗಳ ಬಗ್ಗೆ ನಮ್ಮ ಬಳಿ ಸ್ಪಷ್ಟ ದಾಖಲೆಗಳಿವೆ. ಎಲ್ಲರೂ ದಲಿತರನ್ನು ತುಳಿಯುತ್ತಾರೆ ಎನ್ನುವವರು ಈಗ ಮಾಡುತ್ತಿರುವುದೇನು. ಬೇರೆಯವರಿಗೂ ನಿಮಗೂ ವ್ಯತ್ಯಾಸವೇನು ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಉಪಾಧ್ಯಕ್ಷರಾದ ಎಂ.ಶಿವಕುಮಾರ್, ಎಂ.ದಾಸಯ್ಯ, ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಮಾಳಪ್ಪ ಕುಲಕಿ, ಎಂ.ಆರ್.ಸುರೇಂದ್ರ ಕುಮಾರ್, ಸದಸ್ಯ ಸಿದ್ದಯ್ಯ, ಮಲ್ಲರಾಜ್ ಉಪಸ್ಥಿತರಿದ್ದರು.

ಸಿಎಂ ಕುರ್ಚಿಗೆ ಟವಲ್ ಹಾಕಿ ಕಾಯುತ್ತಿದ್ದಾರೆ...!

ಸಿಎಂ ಸ್ಥಾನಕ್ಕೆ ಟವಲ್ ಹಾಕಿ ಕಾಯುತ್ತಿರುವವರು ಒಳಮೀಸಲಾತಿ ಹಂಚಿಕೆ ಹಿಂದಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ದಲಿತ ಕೋಟಾ ಬಳಸಿಕೊಂಡು ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್, ಹೆಚ್.ಸಿ. ಮಹದೇವಪ್ಪ ಸಿಎಂ ಸ್ಥಾನಕ್ಕೆ ಕಾದು ಕುಳಿತಿದ್ದಾರೆ. ಒಂದು ವೇಳೆ ಈ ಕಾರಣದಿಂದ ಮದಿಗೆ ಸಂಬಂಧಿಸಿದಂತೆ ಪೂರಕ ನಿರ್ಧಾರವನ್ನು ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳದಿದ್ದರೆ ಮಾದಿಗ ಸಮುದಾಯದವರು ಬೀದಿಗೆ ಬರಬೇಕಾಗುತ್ತದೆ.

– ಎಸ್.ಅರುಣ್‌ಕುಮಾರ್, ಅಧ್ಯಕ್ಷ, ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಕೂಲಿ (ತ):** ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, **ವಾರ್ –2 (ಹಿಂ):** ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	**ಕೂಲಿ (ತ):** ಬೆ.7ಕ್ಕೆ, **ಸು ಫ್ರಂ ಸೋ (ಕ):** ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, **ವಾರ್ –2 (ಹಿಂ):** ರಾ.9.50ಕ್ಕೆ.
ಸ್ಕ್ರೀನ್ 3	**ಕೂಲಿ (ತ):** ಬೆ.7.05ಕ್ಕೆ, ರಾ.8.15ಕ್ಕೆ, **ಕೂಲಿ (ಕ):** ಬೆ.10.30ಕ್ಕೆ, **ಮಹಾವತಾರ ನರಸಿಂಹ (3ಡಿ)(ಕ):** ಮ.1.50ಕ್ಕೆ, **ವಾರ್ –2 (ಹಿಂ):** ಸಂ.4.35ಕ್ಕೆ.
ಸ್ಕ್ರೀನ್ 4	**ಕೂಲಿ (ತ):** ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಸು ಫ್ರಂ ಸೋ (ಕ):** ಬೆ.10ಕ್ಕೆ, ಮ.3.55ಕ್ಕೆ, **ವಾರ್–2 (ಹಿಂ):** ಮ.12.40ಕ್ಕೆ, **ಕೂಲಿ (ಕ):** ಸಂ.6.35ಕ್ಕೆ, **ಕೂಲಿ (ತ):** ರಾ.9.40ಕ್ಕೆ.
ಸ್ಕ್ರೀನ್ 2	**ಕೂಲಿ (ತ):** ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, **ವಾರ್–2 (ಹಿಂ):** ಮ.1.15ಕ್ಕೆ.
ಸ್ಕ್ರೀನ್ 3	**ವಾರ್–2 (ಹಿಂ):** ಬೆ.10.05ಕ್ಕೆ, **ಸು ಫ್ರಂ ಸೋ (ಕ):** ಮ.1.20ಕ್ಕೆ, ರಾ.7.10ಕ್ಕೆ, **ಕೂಲಿ (ಕ):** ಸಂ.4ಕ್ಕೆ, **ಕೂಲಿ (ತ):** ರಾ.9.50ಕ್ಕೆ.
ಸ್ಕ್ರೀನ್ 4	**ಕೂಲಿ (ತ):** ಬೆ.7ಕ್ಕೆ, **ಮಹಾವತಾರ ನರಸಿಂಹ (3ಡಿ)(ಕ):** ಬೆ.10.15ಕ್ಕೆ, ಸಂ.4ಕ್ಕೆ, **ಕೂಲಿ (ಕ):** ಮ.12.45ಕ್ಕೆ, **ವಾರ್–2 (ಹಿಂ):** ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಏಷ್ಯಾ ಗ್ರೇಡ್–ಎ ಟೆನ್ನಿಸ್ ಪಂದ್ಯಾವಳಿಯಲ್ಲಿ ಪದ್ಮಪ್ರಿಯಾಗೆ ಕಂಚು



ಕಂಚಿನ ಪದಕ ಪಡೆದ ಪದ್ಮಪ್ರಿಯಾ

ಮೈಸೂರು, ಆ.17(ಎಂಟಿವೈ)– ಮಲೇಷಿಯಾದಲ್ಲಿ ನಡೆದ 14 ವರ್ಷದೊಳಗಿನ ಏಷ್ಯಾ ಗ್ರೇಡ್–ಎ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾ ರಮೇಶ್ ಕುಮಾರ್ ಕಂಚಿನ ಪದಕ ಗಳಿಸಿ ಗಮನ ಸೆಳೆದಿದ್ದಾರೆ.

ಮಲೇಷಿಯಾದ ಬಂದರ್ ಎನ್‌ಸ್ಟಿಕ್ ನಗರದ ಎಕ್ಸ್‌ಪೋ ಕಾಲೇಜಿನಲ್ಲಿ ಆ.9ರಿಂದ 16ರವರೆಗೆ ನಡೆದ ಏಷ್ಯಾ ಅಂಡರ್ 14 ಎ–ಗ್ರೇಡ್ (ಆಗ್ನೇಯ ಏಷ್ಯಾ) ಟೆನ್ನಿಸ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಪದ್ಮಪ್ರಿಯಾ, ಪಂದ್ಯಾವಳಿಯಲ್ಲಿ 3ನೇ ಸ್ಥಾನ ಪಡೆದು ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದ್ದಾರೆ. ಪದ್ಮಪ್ರಿಯಾ ಪಂದ್ಯಾವಳಿಯ 3 ಮತ್ತು 4ನೇ ಸ್ಥಾನ ಪಡೆಯಲು ನಂ.1 ನೇಪಾಳದ ಆಟಗಾರ್ತಿ ಶಿವುಲು ಗುರುಂಗ್ ಅವರನ್ನು 2–4, 4–0, 4–2 ಸೆಟ್‌ಗಳ ಅಂತರದಲ್ಲಿ ಮಣಿಸಿ ಕಂಚಿನ ಪದಕ ತನ್ನದಾಗಿಸಿಕೊಂಡರು.

ಈ ಪಂದ್ಯಾವಳಿಯಲ್ಲಿ 3ನೇ ಸ್ಥಾನ ಪಡೆಯುವ ಮೂಲಕ ಪದ್ಮಪ್ರಿಯಾ ಇದೇ ಅಕ್ಟೋಬರ್‌ನಲ್ಲಿ ಮಲೇಷಿಯಾದ ಮೌರಾ ಟೋಗ್ಲೋ ಟೆನ್ನಿಸ್ ಅಕಾಡೆಮಿಯಲ್ಲಿ ನಡೆಯುವ ವಿಶೇಷ ಟೆನ್ನಿಸ್ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿ ವೇತನ ಪಡೆಯುವಲ್ಲಿ ಅರ್ಹತೆ ಪಡೆದರು.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯಾ, ಹುಲಿ ಯೋಜನೆಯ ಸಿಎಫ್ ಡಾ. ಪಿ.ರಮೇಶ್ ಕುಮಾರ್ ಹಾಗೂ ಮೈಸೂರು ವೃತ್ತದ ವರ್ಕಿಂಗ್ ಪ್ಲಾನ್ ವಿಭಾಗದ ಸಿಎಫ್ ಡಾ. ಮಾಲತಿ ಪ್ರಿಯ ಪುತ್ರಿಯಾಗಿದ್ದು, ರಘುವೀರ್ ಪೊನ್ನುಸ್ವಾಮಿ ಹಾಗೂ ಪವನ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಸಾಗರ್ ಫಿಟ್‌ನೆಸ್ ಟ್ರೈನರ್ ಆಗಿದ್ದಾರೆ. ಅರಣ್ಯ ಅಧಿಕಾರಿಗಳ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.

ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲೆ ಡಾ.ದೀಪ್ತಿ ಚತುರ್ವೇದಿ ಮತ್ತು ಶಾಲೆ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಬಾಲ ಶ್ರೀಕೃಷ್ಣ ವೇಷಧಾರಿ ವಿದ್ಯಾರ್ಥಿಗಳನ್ನು ಕಾಣಬಹುದು.

ರಂಗಭೂಮಿಯ ಮುಖ್ಯ ಉದ್ದೇಶ ಸಮಾಜಕ್ಕೆ ಒಳ್ಳೆಯದನ್ನು ಕೊಡುಗೆಯಾಗಿ ನೀಡುವುದು

ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ ಜನ್ನಿ ಅಭಿಪ್ರಾಯ



ಸಮಾರಂಭದಲ್ಲಿ ರಂಗ ನಿರ್ದೇಶಕ ಮೋಹನ್ ಚಂದ್ರ ಉರ್ವ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.17(ವಿವಿಹೆಚ್)– ರಂಗಭೂಮಿಯ ಮುಖ್ಯ ಉದ್ದೇಶ ಸತ್ಯವನ್ನು ಹೇಳುವುದು. ಒಳ್ಳೆಯದನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುವುದು ಎಂದು ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ ಜನ್ನಿ ಅಭಿಪ್ರಾಯಪಟ್ಟರು.

ಜಿಪಿಐಇಆರ್ ರಂಗತಂಡದ 31ನೇ ವಾರ್ಷಿಕೋತ್ಸವದ ಅಂಗವಾಗಿ ನಗರದ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ 'ಶ್ರಾವಣ ರಂಗೋತ್ಸವ'ದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಂಗಭೂಮಿಯಲ್ಲಿ ಜಾತಿ–ಮತ, ಮೇಲು–ಕೀಳು, ಭೇದ–ಭಾವ ಇಲ್ಲವೇ ಇಲ್ಲ. ನಾವೆಲ್ಲರೂ ಒಂದೇ ಆಗಿದ್ದೇವೆ. ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾರೂ ನಿಕೃಷ್ಟರಲ್ಲ. ನಾವೆಲ್ಲರೂ ಮನುಷ್ಯರೇ ಆಗಿದ್ದು, ಸಮಾಜಕ್ಕ ಮಾನವೀಯತೆಯನ್ನಷ್ಟೆ ಬಿತ್ತಬೇಕು ಎಂಬುದು ರಂಗಭೂಮಿಯ ಮೂಲ ಪಠ್ಯವಾಗಿದೆ. ಈ ಧ್ಯೇಯ, ಉದ್ದೇಶವನ್ನು ಅರಿತು ರಂಗಭೂಮಿಯನ್ನು ನಡೆಸುತ್ತಿರುವುದು ಇಂದಿನ ಕಾಲಘಟ್ಟಕ್ಕೆ ಬಹಳ ಮುಖ್ಯ ಎಂದರು.

ರಂಗಭೂಮಿ ಬಹಳ ಪ್ರಬಲವಾದ ಮಾಧ್ಯಮವಾಗಿದೆ. ಸರ್ವರನ್ನು ಒಗ್ಗೂಡಿಸುವ, ಸಮಾನವಾಗಿ ನೋಡುವ ಶಕ್ತಿ ಇರುವುದು ರಂಗಭೂಮಿಗೆ ಮಾತ್ರ. ಪ್ರಸಕ್ತ ವಿದ್ಯಮಾನದಲ್ಲಿ ವಿಕೃತ ಮನಸ್ಥಿತಿಗಳು, ಹುಚ್ಚಾಟಗಳು ದಿನೇ ದಿನೇ ಬೆಳೆಯುತ್ತಲೇ ಇದೆ. ಇಂತಹ ಸಾಮಾಜಿಕ ಪಿಡುಗನ್ನು ಪ್ರಖರವಾಗಿ ಎದುರಿಸಲು ಇರುವ ಏಕೈಕ ಕಲಾಪ್ರಕಾರ ರಂಗಭೂಮಿ ಎಂದು ತಿಳಿಸಿದರು.

ರಂಗಕ್ರಿಯೆ ನಿರಂತರವಾಗಿ ಬೆಳೆಯಬೇಕು. ರಂಗಭೂಮಿ ಉಳಿವಿಗೆ ಎಲ್ಲರೂ ಶ್ರಮಿಸಬೇಕು. ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಕೆಲಸ ಆಗಬೇಕಿದೆ ಎಂದು ಸೂಚಿಸಿದರು.

ರಂಗಕರ್ಮಿ ಬಿ.ಎಂ.ರಾಮಚಂದ್ರ ಮಾತನಾಡಿ, ರಂಗಭೂಮಿ ಎಂದರೆ ಶಿಸ್ತು. ಇದು ಕೇವಲ ಕಲೆಯಾಗಿಲ್ಲ ಬದಲಾಗಿ ನಿರ್ದಿಷ್ಟ ನಿಯಮಗಳು ಮತ್ತು ತತ್ವಗಳ ಅನುಸರಣೆಯನ್ನು ಇದು ತಿಳಿಸುತ್ತದೆ ಎಂದರು. ಲೇಖಕಿ ಸುಜಾತ ಅಕ್ಕಿ, ರಂಗಕರ್ಮಿಗಳಾದ ರಾಜೇಶ್ ಹೆಚ್ ತಲಕಾಡು, ಜಿ.ಬಿ.ಎಸ್. ಸಿದ್ದೇಗೌಡ, ಶ್ರಾವಣ ರಂಗೋತ್ಸವ ನಿರ್ದೇಶಕ ಮೈಮ್ ರಮೇಶ್ ರಂಗಾಯಣ, ಸಂಚಾಲಕ ಎಂ.ಪಿ.ಹರಿದತ್ತ ಉಪಸ್ಥಿತರಿದ್ದರು.

'ಪ್ರತಿಫಲನ– ಕಥಾಹಂದರ' ಪುಸ್ತಕ ಬಿಡುಗಡೆ




ಶ್ರೀವಿದ್ಯಾ ಸ್ವರೂಪ್ ರಚಿತ 'ಪ್ರತಿಫಲನ– ಕಥಾಹುದ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಆ.17(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಲೇಖಕಿ ಶ್ರೀವಿದ್ಯಾ ಸ್ವರೂಪ್ ರಚಿತ 'ಪ್ರತಿಫಲನ– ಕಥಾಹಂದರ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.


ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಬಳಿಕ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ.ಕೃಷ್ಣೇಗೌಡ, ತಮ್ಮ ಹಾಸ್ಯಭರಿತ ಮಾತುಗಳ ಮೂಲಕವೇ ಈ ಕಾಲದ ಹಳ್ಳಿಗಳ ಸಾಮಾಜಿಕ, ಆರ್ಥಿಕ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಗಂಭೀರ ಚಿತ್ರಣವನ್ನು ನಮ್ಮ ಮುಂದಿಟ್ಟರು. ಲೇಖಕಿ ಕುಸುಮಾ ಆಯರಹಳ್ಳಿ, ಹಳ್ಳಿಗಳ ಅಭಿವೃದ್ಧಿ ಅಂದರೆ ಏನು ಎಂದು ಚರ್ಚಿಸಿ ನಗುನಗುತ್ತಲೇ ಕಣ್ತುಂಬುವಂತೆ ಹಳ್ಳಿಯ ಹೆಣ್ಣುಮಕ್ಕಳ ಸಾಮಾಜಿಕ ಬವಣೆಗಳನ್ನು ವಿವರಿಸಿದರು.

ಜನ್ಮದಿನದ ಶುಭಾಶಯ



ಮೈಸೂರಿನ ಹೆಸರಾಂತ ಹೋಟೆಲ್ ಉದ್ಯಮಿಯೂ ಆದ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಹಾಗೂ ಯುವರಾಜ ಸಿಲ್ಕ್ಸ್ ಮಾಲೀಕ ಹಾಗೂ ಹೋಟೆಲ್ ಉದ್ಯಮಿ ಯುವರಾಜ್ ಅಭಿನಂದಿಸಿ, ಶುಭಾಶಯ ಕೋರಿದರು.

ನಟನಾಭ್ಯಾಸ ಶಿಬಿರದ ಸಮಾರೋಪ



ನಟನಾಭ್ಯಾಸ ಶಿಬಿರದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಆ.17(ಎಂಕೆ)– ಮೈಸೂರಿನ ಕಲಾಮಂದಿರದ ಆವರಣದಲ್ಲಿ ಸಂಚಲನ ಮೈಸೂರು ಹಾಗೂ ರಂಗರಥ ವತಿಯಿಂದ ಹಮ್ಮಿಕೊಂಡಿದ್ದ 15 ದಿನಗಳ ನಟನಾಭ್ಯಾಸ ಶಿಬಿರದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ಶಿಬಿರದ ಸಮಾರೋಪದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಿ ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಯುವಪೀಳಿಗೆಯಲ್ಲಿ ವ್ಯಕ್ತಿತ್ವ ವಿಕಸನ, ಸಾಂಸ್ಕೃತಿಕ ಬೆಳವಣಿಗೆಗೆ ಮತ್ತು ಭಾಷಾಭ್ಯಾಸಕ್ಕೆ ಇಂತಹ ನಟನಾಭ್ಯಾಸ ಶಿಬಿರಗಳು ಮುಖ್ಯ. ಅಲ್ಲದೆ ಸಮಾಜದಲ್ಲಿ ಸೌಹಾರ್ದತೆ ಮೂಡಿಸುವಲ್ಲಿ ರಂಗತರಬೇತಿ ಶಿಬಿರಗಳು ಅತ್ಯಗತ್ಯ ಎಂದರು.

ಹಿರಿಯ ರಂಗಕರ್ಮಿ ಕೆ.ಆರ್.ಸುಮತಿ ಮಾತನಾಡಿ, ನಟರಾಗಬಯಸುವವರಿಗೆ ಏಕಾಗ್ರತೆ ಎಷ್ಟು ಮುಖ್ಯ ಎಂದು ನಟನಾ ಕೌಶಲತೆಗಳ ಪರಿಚಯ ಮಾಡಿಕೊಟ್ಟರು. ಸಂಚಲನ ಮೈಸೂರು ಸಂಸ್ಥಾಪಕ ದೀಪಕ್ ಮಾತನಾಡಿ, ಶಿಬಿರಾರ್ಥಿಗಳಿಂದ ಆಸಿಫ್ ಕ್ಷತ್ರಿಯ ಹಾಗೂ ಶ್ವೇತ ಶ್ರೀನಿವಾಸ್ ನಿರ್ದೇಶನದಲ್ಲಿ 'ಎರೆಡೆರಡ್ಲಾ ಐದು' ಚೊಚ್ಚಲ ನಾಟಕ ಪ್ರದರ್ಶನವು ಮೈಸೂರಿನ ಕಿರುರಂಗ ಮಂದಿರದಲ್ಲಿ ಇದೇ ಆ.20 ಮತ್ತು 21 ರಂದು ಇರಲಿದೆ ಎಂದು ಮಾಹಿತಿ ತಿಳಿಸಿದರು.

ಬೆಂಗಳೂರಿನಲ್ಲಿ ನಾಯಿಕೊಡೆಗಳಂತೆ ರಂಗ ತರಬೇತಿ ಶಿಬಿರಗಳು ಹುಟ್ಟಿಕೊಂಡಿವೆ

ಹಿರಿಯ ರಂಗಕರ್ಮಿ ಡಾ.ಸಿ.ಬಸವಲಿಂಗಯ್ಯ ವಿಷಾದ



ಕಾಲೇಜು ವಿದ್ಯಾರ್ಥಿಗಳಿಗೆ 30 ದಿನಗಳ ಸಹಜರಂಗ ತರಬೇತಿ ಶಿಬಿರವನ್ನು ಹಿರಿಯ ರಂಗಕರ್ಮಿ ಡಾ.ಸಿ.ಬಸವಲಿಂಗಯ್ಯ ನೇತೃತ್ವದಲ್ಲಿ ದೀಪ ಬೆಳಗಿಸಿ ಚಾಲನೆ ನೀಡಲಾಯಿತು.

ಮೈಸೂರು, ಆ.17(ಎಸ್‌ಪಿಎನ್)– ಬೆಂಗಳೂರಿನಲ್ಲಿ ನಾಯಿಕೊಡೆಗಳಂತೆ ರಂಗ ತರಬೇತಿ ಹೆಸರಿನಲ್ಲಿ ಶಿಬಿರಗಳು ಹುಟ್ಟಿಕೊಂಡಿವೆ ಎಂದು ಹಿರಿಯ ರಂಗಕರ್ಮಿ ಡಾ.ಸಿ.ಬಸವಲಿಂಗಯ್ಯ ವಿಷಾದ ವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಗಾಂಧಿಭವನದಲ್ಲಿ ನಿರಂತರ ಫೌಂಡೇಶನ್, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಭಾರತ ಸರ್ಕಾರದ ಸಂಸ್ಕೃತಿಯ ಸಚಿವಾಲಯದ ಸಹಯೋಗದೊಂದಿಗೆ ನಡೆದ ಕಾಲೇಜು ವಿದ್ಯಾರ್ಥಿಗಳಿಗೆ 30 ದಿನಗಳ ಸಹಜರಂಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ನಟನೆ ಹೇಳಿಕೊಡುತ್ತೇವೆ ಎಂದು ಯುವಕರ ಬಳಿ ಲಕ್ಷಾಂತರ ರೂಪಾಯಿ ಹಣ ಮಾಡುವ ದಂಧೆಯೂ ಶುರುವಾಗಿದೆ. ಇದರ ನಡುವೆ ನಿರಂತರ ಫೌಂಡೇಶನ್ ಸದಸ್ಯರು ಉಚಿತ ರಂಗ ತರಬೇತಿ ನೀಡುತ್ತಿರುವುದು ಸಂತೋಷದ ವಿಷಯ ಎಂದರು.

ಇತ್ತೀಚಿನ ಸಿನಿಮಾಗಳು ಪ್ರೇಕ್ಷಕರಿಂದ ದೂರ ಉಳಿಯುತ್ತಿವೆ. ಇದಕ್ಕೆ ಕಾರಣ ಹುಡುಕಿದಾಗ ನಾಯಕ ನಟ ಕೇವಲ ಹೀರೋಯಿನ್ ಕಾಪಾಡುವುದೇ ಕಥೆಯ ಸಾರಾಂಶವಾಗಿರುತ್ತದೆ. ಇದರಲ್ಲಿ ಖಳ ನಾಯಕನೂ ಹುಡುಗಿಗೆ ಕಿರುಕುಳ ಕೊಡುವುದೇ ಪಾತ್ರವಾಗಿರುತ್ತದೆ. ಇಂತಹ ಕಥೆಗಳನ್ನು ನೋಡಿ ನೋಡಿ ಬೇಸತ್ತಿರುವ ಪ್ರೇಕ್ಷಕ ಹೊಸಬರ ಸಿನಿಮಾಗಳಿಂದ ದೂರ ಉಳಿಯುತ್ತಿದ್ದು, ರಂಗಭೂಮಿಯತ್ತ ಪ್ರೇಕ್ಷಕರ ನೋಟ ಬೀರುತ್ತಿದೆ. ಇದನ್ನು ಹೊಸ ನಟರು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ರಂಗಭೂಮಿ ಸಹಜ ಕ್ರಿಯೆ, ಸಿನಿಮಾ ಅಸಹಜ ಕ್ರಿಯೆ. ತೆಲುಗು ಸಿನಿಮಾಗಳಲ್ಲಿ ನಾಯಕ ನಟ ಒಂದು ಹೆಜ್ಜೆಯಿಟ್ಟರೆ, ಸುತ್ತಮುತ್ತ ಇರುವ ಎಲ್ಲಾ ಕಾರುಗಳು, ಕಲ್ಲು–ಮಣ್ಣು 1 ಕಿಮೀ ದೂರಕ್ಕೆ ಹಾರುತ್ತವೆ. ಇದು ಸಹಜ ಪ್ರಕ್ರಿಯೆಯಲ್ಲಿ ಸಾಧ್ಯವೇ? ಎಂದು ಪ್ರಶ್ನಿಸಿದ ಬಸವಲಿಂಗಯ್ಯ, ಅಭಿನಯದಲ್ಲಿ ಪರಕಾಯ ಪ್ರವೇಶವೆಂಬುದು ಬೊಗಳೆ. ತನ್ನದಲ್ಲದ ಪಾತ್ರವನ್ನು ಪ್ರೇಕ್ಷಕರಿಗೆ ತಲುಪಿಸುವುದೇ ನಿಜವಾದ ಕಲಾವಿದನ ಪ್ರತಿಭೆ ಎನ್ನಬಹುದು ಎಂದರು.

ಭಾರತ್ ಜೋಡೋ ಯಾತ್ರೆಗೆ ರಾಹುಲ್‌ಗಾಂಧಿ ಕರ್ನಾಟಕ ಪ್ರವೇಶಿಸಿದಾಗ ಹಿರಿಯ ಹೋರಾಟಗಾರರಾದ ಪ.ಮಲ್ಲೇಶ್, ಹಿರಿಯ ಸಾಹಿತಿ ದೇವನೂರು ಮಹದೇವ ನೇತೃತ್ವದಲ್ಲಿ ಚಿಂತನೆ ನಡೆಸಿ, ರಾಹುಲ್‌ಗಾಂಧಿಗೆ ಕನ್ನಡದಲ್ಲಿ ಮುದ್ರಿತವಾಗಿದ್ದ ಚಿಕ್ಕದಾದ ಸಂವಿಧಾನ ಪ್ರತಿಯನ್ನು ಕೊಟ್ಟು ಸ್ವಾಗತಿಸಿದೆವು. ಮುಂದೆ ರಾಹುಲ್‌ಗಾಂಧಿ ಹೋದಲ್ಲಿ–ಬಂದಲ್ಲಿ ಆ ಪ್ರತಿಯನ್ನು ಪ್ರದರ್ಶಿಸಿ, ರಾಜಕೀಯ ಮುಂದುವರೆಸುತ್ತಿದ್ದಾರೆ ಎಂದು ಕೆಲ ಕುತೂಹಲ ಸಂಗತಿಗಳನ್ನು ಬಿಚ್ಚಿಟ್ಟರಲ್ಲದೆ, ಸಹಜ ರಂಗತರಬೇತಿಗೆ ಬಂದಿರುವ ಯುವಕರು, ಈ ಶಿಬಿರದಲ್ಲಿ ರಂಗಬೇತಿ ಪಡೆದು ನಿರಂತರ ಪ್ರಸಾದ್ ಕುಂದೂರುಗೆ ಕೀರ್ತಿ ತಂದುಕೊಡಲಿ. ಅಂತೆಯೇ ಇತ್ತೀಚಿನ ದಿನಗಳಲ್ಲಿ ಸಂವಿಧಾನ ವಿಷಯದಲ್ಲಿ ಗಾಂಧಿ–ಅಂಬೇಡ್ಕರ್ ವಿರುದ್ಧ ದಿಕ್ಕಿನಲ್ಲಿ ಕೆಲವರು ನೋಡುತ್ತಿದ್ದಾರೆ. ಈ ಮಿತ್‌ಅನ್ನು ರಂಗಭೂಮಿ ಹೊಡೆದು ಹಾಕಬೇಕು ಎಂದು ಸಲಹೆ ನೀಡಿದರು.

ಈ ವೇಳೆ ನಿರಂತರ ಸಹಜ ರಂಗತರಬೇತಿ ಶಿಬಿರದ ಅಭಿಮುಖ ಕೈಪಿಡಿಯನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ ಬಿಡುಗಡೆಗೊಳಿಸಿದರು. ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ನರೇಂದ್ರ ಕುಮಾರ್, ನಿರಂತರದ ಪ್ರಸಾದ್ ಕುಂದೂರು ಉಪಸ್ಥಿತರಿದ್ದರು.

> ಮೈಸೂರಿನಲ್ಲಿ ಕಳೆದ ಎರಡು ವರ್ಷಗಳಿಂದ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಇಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ಹತ್ತಿರದಿಂದ ನೋಡುತ್ತಿದ್ದೇನೆ. ಸಕ್ರಿಯವಾಗಿರುವ ಸಂಸ್ಥೆಗಳೆಂದರೆ 10–15 ಮಾತ್ರ. ಈ ಸಾಲಿನಲ್ಲಿ ನಿರಂತರ ಫೌಂಡೇಶನ್ ಕೂಡ ಇದೆ.
> – ಡಾ.ಎಂ.ಡಿ.ಸುದರ್ಶನ

ನೀರನ್ನು ಕುದಿಸಿ, ಆರಿಸಿ ಕುಡಿಯಿರಿ

ಮೈಸೂರು: ಮಳೆಯಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಹೊಸ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಾಗಿ ನೀರನ್ನು ಕುದಿಸಿ, ಆರಿಸಿ ಕುಡಿಯಬೇಕು ಎಂದು ಮೈಸೂರು ನಗರಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಕಾರ್ಯಪಾಲಕ ಅಭಿಯಂತರರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಯಾವುದೇ ಇತರೆ ಕಾರಣಗಳಿಂದ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸೇರಿ ಕಲುಷಿತಗೊಳ್ಳುತ್ತಿರುವುದು ಕಂಡುಬಂದಲ್ಲಿ ಪತ್ರ ಮುಖೇನ ಕಾರ್ಯಪಾಲಕ ಅಭಿಯಂತರರು, ವಾಣಿ ವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ ಕಚೇರಿ ಅಥವಾ ಇ–ಮೇಲ್ (mysoreugd@gmail.com/eevvww2012@gmail.com) ಮತ್ತು ದೂ.ಸಂ. 0821–2418849/9449841196 ಮುಖಾಂತರ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ 3ನೇ ಜಿಲ್ಲಾ ಕ್ಯಾಬಿನೆಟ್ ಪ್ರಸ್ತುತಿ ಸಮಾರಂಭ

ನೈಜ ಅರ್ಥದಲ್ಲಿ ಸಮಾಜ ಸೇವೆ ನ್ಯಾಯದ ವಿಸ್ತರಣೆಯೇ ಸರಿ

ಹೈಕೋರ್ಟ್ ನ್ಯಾಯಮೂರ್ತಿ ಜೆ.ಎಂ.ಖಾಜಿ ಅಭಿಮತ



ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ವತಿಯಿಂದ 'ಸಾರಥ್ಯ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ '3ನೇ ಜಿಲ್ಲಾ ಕ್ಯಾಬಿನೆಟ್ ಪ್ರಸ್ತುತಿ 2025' ಸಮಾರಂಭವನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಜೆ.ಎಂ.ಖಾಜಿ ಉದ್ಘಾಟಿಸಿದರು.

ಮೈಸೂರು,ಆ.17(ಪಿಎಂ)– ನೈಜ ಅರ್ಥದಲ್ಲಿ ಸಮಾಜ ಸೇವೆ ಎಂಬುದು ನ್ಯಾಯದ ವಿಸ್ತರಣೆಯೇ ಆಗಿದೆ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಜೆ.ಎಂ.ಖಾಜಿ ಹೇಳಿದರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ವತಿಯಿಂದ 'ಸಾರಥ್ಯ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ '3ನೇ ಜಿಲ್ಲಾ ಕ್ಯಾಬಿನೆಟ್ ಪ್ರಸ್ತುತಿ 2025' ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸುತ್ತಲಿನ ಜಗತ್ತನ್ನು ನೋಡಿದಾಗ, ವಿಜ್ಞಾನ–ತಂತ್ರಜ್ಞಾನದಲ್ಲಿ ಅಗಾಧ ಪ್ರಗತಿ ಕಾಣುತ್ತೇವೆ. ಆದರೆ ಇದರ ಜೊತೆಗೆ ಸಂಕಟ, ಹಸಿವು, ಬಡತನ, ರೋಗ–ರುಜಿನ ಹಾಗೂ ನೈಸರ್ಗಿಕ ವಿಕೋಪದಿಂದ ಮಾನವ ಸಂಕುಲ ಬಳಲುತ್ತಿರುವುದೂ ಇದೆ. ಇಂತಹ ಸಂಕಷ್ಟದ ಸನ್ನಿವೇಶಗಳಲ್ಲಿ ಸಿಲುಕಿದವರಿಗೆ ನೆರವಾಗುವುದು ಕೇವಲ ಆಡಳಿತದ ಜವಾಬ್ದಾರಿಯಷ್ಟೇ ಅಲ್ಲ. ನೊಂದವರಿಗೆ ಸ್ಪಂದಿಸುವ ಮನೋಭಾವ ಹೊಂದಿರುವ ಜನ ಸಮೂಹ ಸಹ ಮಹತ್ವದ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಲಯನ್ಸ್ ಸಂಘಟನೆ ಮಹತ್ತರ ಕಾರ್ಯ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಲವೊಮ್ಮೆ ಸರ್ಕಾರಗಳು ತ್ವರಿತವಾಗಿ ತಲುಪಲು ಸಾಧ್ಯವಾಗದ ಪ್ರದೇಶಗಳಲ್ಲಿ ಲಯನ್ಸ್ ಸಂಘಟನೆ ಸೇವೆ ಸಲ್ಲಿಸಿರುವುದು ನಿಜಕ್ಕೂ ಪ್ರಶಂಸನೀಯ. ಗ್ರಾಮೀಣ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ, ಪ್ರವಾಹ ಅಥವಾ ಭೂಕಂಪನದಿಂದ ಸಂಕಷ್ಟಕ್ಕೆ ಒಳಗಾದ ಜನ ಸಮುದಾಯದ ಸಹಾಯಕ್ಕೆ ಧಾವಿಸಿರುವುದು ಈ ಸಂಘಟನೆಯ ಹೆಗ್ಗಳಿಕೆಯಾಗಿದೆ. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ 'ಜೀವನದ ಸಾರವೆಂದರೆ, ಸೇವೆ ಹಾಗೂ ಸಮಾಜಕ್ಕೆ ಒಳಿತು ಮಾಡುವುದು' ಎಂದು ಹೇಳಿದ್ದು, ಅದರಂತೆ ಲಯನ್ಸ್ ಸಂಘಟನೆ ಮುನ್ನಡೆಯುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕನ್ನಡ ಮಾಧ್ಯಮದಲ್ಲೇ ಓದಿದ್ದು: ನಮ್ಮ ತಂದೆ ಪ್ರಾಸಿಕ್ಯೂಟರ್ ಆಗಿದ್ದರು. ಪ್ರಾರಂಭದಲ್ಲಿ ಅವರಿಗೆ ತಾಲೂಕು ಕೇಂದ್ರಗಳಿಗೆ ವರ್ಗವಾಗುತ್ತಿತ್ತು. ಆ ಎಲ್ಲಾ ಕಡೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಇರುತ್ತಿರಲಿಲ್ಲ. ಹಾಗಾಗಿ ಕನ್ನಡ ಮಾಧ್ಯಮ ಶಾಲೆಗೆ ಸೇರಿಸುತ್ತಿದ್ದರು. ಆದ್ದರಿಂದ ನನಗೆ ಕನ್ನಡ ಕಲಿಯುವ ಸುಯೋಗ ದೊರೆಯಿತು. ನಾನು, ನಮ್ಮ ತಂದೆ–ತಾತ ಎಲ್ಲರೂ ಕನ್ನಡ ಮಾಧ್ಯಮದಲ್ಲೇ ಓದಿದ್ದು. ಹಾಗಾಗಿ ಕನ್ನಡ ನಮ್ಮ ಕುಟುಂಬಕ್ಕೆ 2ನೇ ಮಾತೃಭಾಷೆಯಂತೆ ಆಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಒಂದು ಸ್ಪಷ್ಟೀಕರಣ ನೀಡುತ್ತೇನೆ. ನಾನು ಎಲ್ಲಾ ತೀರ್ಪುಗಳನ್ನು ಕನ್ನಡದಲ್ಲೇ ಕೊಟ್ಟಿದ್ದೇನೆ ಎಂದು ಈಗಷ್ಟೇ ನನ್ನನ್ನು ಪರಿಚಯಿಸುವ ವೇಳೆ ಹೇಳಿದರು. ಆದರೆ ಎಲ್ಲಾ ತೀರ್ಪುಗಳನ್ನು ಕನ್ನಡದಲ್ಲೇ ಕೊಟ್ಟಿದ್ದಲ್ಲ. ನಿಗದಿತ ವರ್ಷದಲ್ಲಿ ಕನ್ನಡದಲ್ಲಿ ತೀರ್ಪು ಬರೆದಿದ್ದರೆ, ಅಂತಹವರಿಗೆ ರಾಜ್ಯ ಸರ್ಕಾರ ಸನ್ಮಾನಿಸಲಿದೆ. ಇಂತಹ ಗೌರವಕ್ಕೆ ನಾನು ಭಾಜನವಾಗಿದ್ದೇನೆ. ಈಗ ಹೈಕೋರ್ಟ್ ಭಾಷೆ ಇಂಗ್ಲಿಷ್ ಆಗಿದ್ದು, ಆದ್ದರಿಂದ ಇಂಗ್ಲಿಷ್‌ನಲ್ಲೇ ಎಲ್ಲಾ ತೀರ್ಪುಗಳನ್ನು ಬರೆಯಬೇಕಾಗುತ್ತದೆ. ಆದರೆ ಕನ್ನಡದ ಮೇಲೆ ನನಗೆ ಅತ್ಯಂತ ಪ್ರೀತಿ–ಅಭಿಮಾನ ಇದೆ. 'ಆ.8' ಲಯನ್ಸ್ ಸಂಘಟನೆಯ 'ಸರ್ವೀಸ್ ಡೇ' ಎಂದು ಕೇಳಿ ಸಂತಸ ಉಂಟಾಯಿತು. ಏಕೆಂದರೆ ಅದೇ ದಿನಾಂಕ ನನ್ನ ಜನ್ಮದಿನವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಜಿಲ್ಲಾ ಗವರ್ನರ್ ಕೆ.ಎಲ್. ರಾಜಶೇಖರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡ ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಸಂಬಂಧ ಇಂದು 2025–26ನೇ ಸಾಲಿನ ಉಪಜಿಲ್ಲಾ ರಾಜ್ಯಪಾಲರುಗಳ ಹಾಗೂ ಟೀಮ್ ರಿಜೋಯ್ಸ್ ತಂಡದ ಪ್ರತಿಜ್ಞಾವಿಧಿ ಬೋಧನಾ ವಿಧಿವಿಧಾನ ನೆರವೇರಿಸಲಾಗುತ್ತಿದೆ ಎಂದರು.

ಅನುಷ್ಠಾನಾಧಿಕಾರಿಯಾಗಿ ಲಯನ್ಸ್ ಸಂಘಟನೆ ಇಂಟರ್‌ನ್ಯಾಷನಲ್ ನಿರ್ದೇಶಕ ಪಂಕಜ್ ಮೆಹ್ತಾ ಭಾಗವಹಿಸಿದ್ದರು. ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ ಅವರ ಪತ್ನಿ ಡಾ.ಎಂ.ಎನ್.ಗೀತಾ, ಸಂಘಟನೆಯ ಮಾಜಿ ಇಂಟರ್‌ನ್ಯಾಷನಲ್ ನಿರ್ದೇಶಕರಾದ ವಿ.ವಿ. ಕೃಷ್ಣರೆಡ್ಡಿ, ವಂಶಿಧರ್ ಬಾಬು, ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಎನ್.ಮೋಹನ್ ಕುಮಾರ್, ಮಲ್ಟಿಪಲ್ ಗ್ಯಾಟ್ ಸಂಚಾಲಕ ಕೆ.ದೇವೇಗೌಡ ಮತ್ತಿತರರು ಹಾಜರಿದ್ದರು.

ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ



ಮೈಸೂರಿನ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಡಳಿತ ಮಂಡಳಿಯ ಕಾರ್ಯದರ್ಶಿ ಎಂ.ಎಸ್. ನಾಗೇಶ್, ಶಾಲೆಯ ಮುಖ್ಯ ಆಡಳಿತಾಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಸುಮಾ ಎಚ್.ಎಂ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದಲೂ ಧರ್ಮಸ್ಥಳ ಚಲೋ

ಅಧಿವೇಶನದ ಬಳಿಕ ನೆಲಮಂಗಲ ಕೈ ಶಾಸಕರಿಂದ ಯಾತ್ರೆ

ಬೆಂಗಳೂರು, ಆ.17– ಧರ್ಮಸ್ಥಳ ಗ್ರಾಮದಲ್ಲಿ ಅನಾಮಿಕ ವ್ಯಕ್ತಿ ನೂರಾರು ಶವಗಳನ್ನು ಹೂತಿಟ್ಟಿರುವುದಾಗಿ ಹೇಳಿಕೆ ನೀಡಿದ್ದು, ಈ ಸಂಬಂಧ ಎಸ್‌ಐಟಿ ಉತ್ಖನನ ನಡೆಸುತ್ತಿದೆ. ಇದರ ಬೆನ್ನಲ್ಲೇ ಧರ್ಮಸ್ಥಳದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಆರೋಪಿಸಿ ಬಿಜೆಪಿ ನಾಯಕರು ಧರ್ಮಸ್ಥಳದೊಂದಿಗೆ ನಾವು ಎಂಬ ಅಭಿಯಾನ ಆರಂಭಿಸಿದ್ದಾರೆ. ಈ ನಡುವೆ ಕಾಂಗ್ರೆಸ್ ಶಾಸಕ ಶ್ರೀನಿವಾಸ್ ಕೂಡ ಧರ್ಮಸ್ಥಳ ಚಲೋ ನಡೆಸುವುದಾಗಿ ಹೇಳಿಕೆ ನೀಡಿದ್ದಾರೆ.

ಧರ್ಮಸ್ಥಳ ಮತ್ತು ಅಲ್ಲಿನ ಧರ್ಮಾಧಿಕಾರಿಗಳಿಗೆ ಅಪಕೀರ್ತಿ ತರುವ ಹುನ್ನಾರ ಆಗುತ್ತಿದೆ. ಹಾಗಾಗಿ ಧರ್ಮಸ್ಥಳ ಚಲೋ ಮಾಡುವುದಾಗಿ ಅವರು ಹೇಳಿಕೆ ನೀಡಿದ್ದಾರೆ. ಅಧಿವೇಶನ ಮುಗಿದ ಬಳಿಕ ಧರ್ಮಸ್ಥಳದ ಮೇಲಿನ ಅಪಪ್ರಚಾರ ವಿರೋಧಿಸಿ ಧರ್ಮಸ್ಥಳ ಪರವಾಗಿ ಯಾತ್ರೆ ಕೈಗೊಳ್ಳುತ್ತೇವೆ ಎಂದರು.

ಬಹುಶಃ ಶನಿವಾರ ಕಾರುಗಳಲ್ಲಿ ಯಾತ್ರೆ ಕೈಗೊಳ್ಳುತ್ತೇವೆ, ಧರ್ಮಸ್ಥಳದ ಪರವಾಗಿ ನಾವು ಇದ್ದೇವೆ. ನೆಲಮಂಗಲ ವಿಧಾನಸಭಾ ಕ್ಷೇತ್ರದ ಜನರ ಪರವಾಗಿ ನಾವು ಮತ್ತು ನಮ್ಮ ಮುಖಂಡರು ತೆರಳುತ್ತೇವೆ. ಧರ್ಮಸ್ಥಳಕ್ಕೆ ಬರುವವರು ನೋಂದಣಿ ಮಾಡಿಕೊಂಡು ಬರಬಹುದು. ಕಾರಿನ ಮೂಲಕ ತೆರಳುತ್ತೇವೆ. ಸೌಜನ್ಯ ಹೆಸರು ಬಳಸಿ ಧರ್ಮಸ್ಥಳಕ್ಕೆ ಅಪಕೀರ್ತಿ ತಂದಿದ್ದಾರೆ. ಸೌಜನ್ಯಗೆ ನ್ಯಾಯ ಸಿಗಬೇಕು ಆದರೆ ಈ ಅಪಪ್ರಚಾರ ನಿಲ್ಲಬೇಕು ಎಂದು ಹೇಳಿದರು.

ಆ.21ರಂದು PMFME ಯೋಜನೆಯ ಕಾರ್ಯಕ್ರಮ

ಮೈಸೂರು,ಆ.17– 2025–26 ನೇ ಸಾಲಿನ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ (Prime Minister Formalization of Micro Food Processing Enterprises-PMFME) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಂದು ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ರಾಜ್ಯದಲ್ಲಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಯ ಅಭಿವೃದ್ಧಿಗೆ ಸುವರ್ಣಾವಕಾಶ ಕಲ್ಪಿಸುತ್ತದೆ. ಪ್ರಸ್ತುತ ಹಣಕಾಸಿನ ವರ್ಷವು ಯೋಜನೆಯ ಅನುಷ್ಠಾನದ ಕೊನೆಯ ವರ್ಷವಾಗಿರುತ್ತದೆ. ಈ ಯೋಜನೆಯ ಪ್ರಯೋಜನವನ್ನು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಪಡೆದುಕೊಳ್ಳುವ ಸಲುವಾಗಿ ಪಾಲುದಾರರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆ.21, ಬೆಳಿಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮುಂದಾಳತ್ವದಲ್ಲಿ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಯೋಜನೆಯ ಬಗ್ಗೆ ಅರಿವು ಮೂಡಿಸಲಿದ್ದು ಯೋಜನೆಯಡಿ ಫಲಾನುಭವಿಯಾಗಲು ಇಚ್ಛಿಸುವವರಿಗೆ ನೋಂದಣಿ ಮಾಡಿಕೊಳ್ಳಲಾಗುವುದು.

ಒಡಿಶಾ ಮಾಜಿ ಸಿಎಂ ನವೀನ್ ಪಟ್ನಾಯಕ್ ಆಸ್ಪತ್ರೆಗೆ ದಾಖಲು



ಭುವನೇಶ್ವರ, ಆ.17– ಒಡಿಶಾದ ಮಾಜಿ ಮುಖ್ಯಮಂತ್ರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ನವೀನ್ ಪಟ್ನಾಯಕ್ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಇಂದು (ಭಾನುವಾರ) ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

78 ವರ್ಷದ ಬಿಜೆಡಿ ಮುಖ್ಯಸ್ಥ ಪಟ್ನಾಯಕ್ ಅವರು ಶನಿವಾರ ರಾತ್ರಿ ಅಸ್ವಸ್ಥರಾಗಿದ್ದರು. ಕೂಡಲೇ ವೈದ್ಯರು ಆರೋಗ್ಯ ತಪಾಸಣೆ ನಡೆಸಿದ್ದರು ಎಂದು ಪಕ್ಷದ ನಾಯಕ ನವೀನ್ ನಿವಾಸ್ ತಿಳಿಸಿದ್ದಾರೆ. ಪಟ್ನಾಯಕ್ ಅವರ ಆರೋಗ್ಯ ಕುರಿತು ಆಸ್ಪತ್ರೆ ಶೀಘ್ರದಲ್ಲೇ ಬುಲೆಟಿನ್ ಬಿಡುಗಡೆ ಮಾಡಲಿದೆ ಎಂದು ಬಿಜೆಡಿ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಪಟ್ನಾಯಕ್ ಅವರು ಕೆಲವು ತಿಂಗಳ ಹಿಂದೆ ಮುಂಬೈನ ಆಸ್ಪತ್ರೆಯೊಂದರಲ್ಲಿ ಬೆನ್ನುಮೂಳೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಪಟ್ನಾಯಕ್ ಅವರು ಜೂನ್ 20ರಂದು ಮುಂಬೈಗೆ ತೆರಳಿದ್ದರು. ಜೂನ್ 22ರಂದು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಜುಲೈ 7ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು.

ಮಕೆ ಕಲ್ಲುಗಳಿಗೆ ಪೂಜೆ



ಮೈಸೂರಿನ ಪಡುವಾರಹಳ್ಳಿಯಲ್ಲಿ ನಡೆದ ಮಕೆ ಹಬ್ಬದ ಪ್ರಯುಕ್ತ ಮಕೆ ಕಲ್ಲುಗಳಿಗೆ ಪೂಜೆ ಮಾಡುವುದರ ಮೂಲಕ ಹಬ್ಬವನ್ನು ಆಚರಿಸಲಾಯಿತು.

ಸವಿನೆನಪು



ಡಾ. ಹೆಚ್.ಕೆ. ಕಾಳಪ್ಪ

18–8–2019

ದು:ಖತಪ್ತರು: ಕುಟುಂಬವರ್ಗದವರು ಮತ್ತು ಸ್ನೇಹಿತರು

Form No. 22
General Notice in Respect of Interlocutory Application in the High Court of Karnataka at Bengaluru

Notice to the proposed R.I (a) vide order dated: 06-08-2025
R.S.A. No. 2281/2018

Smt. B.S. Chandraprabha
(By Sri R. George Lazarus and Anr-Advs) .... Appellants

V/S

Smt. Mahadevamma .... Respondents

To: Proposed LRS of deceased respondent.

R-1: Smt. Mahadevamma since dead by LRS.

R-1a: Sri Mahadevappa L.N., S/o Late Nanjundaswamy, aged about 68 years, R/at Chimili Grama, Kirugavalu Hobli, near Maramma Temple, Malavalli Taluk, Mandya District-571 424.

Whereas the above named appellant has preferred
1) I.A.No. 3/2024 for CD in filing the appeal.
2) I.A.No. 4/2024 for CD of 919 days in filing LR application.
3) I.A.No. 5/2024 for setting aside abatement.
4) I.A.No. 6/2024 for bringing LRs of deceased Respondent.

Notice is hereby given to you to appear in this court in person or through an Advocate duly instructed or through some one authorised by law, to act for you in this case on 9-9-2025 at 10.30 am in case you intend to contest the appeal. If you fail so to appear, the appeal will be dealt with heard and decided in your absence.
Issued under my hand & the seal of this court, this the 06th Day of August 2025.

By Order of the Court
Sd/- Assistant Registrar.
Date: 13-8-2025

Vidyavardhaka Sangha (R)
VIDYAVARDHAKA POLYTECHNIC
Vidyavardhaka Engineering College Campus,
3rd Stage, Gokulam, Mysore-570002 | Telefax: 0821-2419190
Email: vvpmysore@gmail.com | Website: www.vvpolytechnic.ac.in
Date: 18-08-2025

APPOINTMENT NOTIFICATION
Lecturers in the Dept. of CS & ME
Qualification: BE in CS & ME with minimum First Class

Please submit the application addressed to the Principal along with the copies of Certificates, Resume & Passport size photo within 7 days from the date of publication. Salary as per AICTE scale.

Sd/- Hon. President
Sd/- Hon. Secretary

ಸಾರ್ವಜನಿಕ ತಿಳುವಳಿಕೆ ಪತ್ರ

Ref No.13/2025 ದಿನಾಂಕ:18.08.2025

ನಮ್ಮ ಕಕ್ಷಿದಾರರು ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು, ಸದರಿ ಸ್ವತ್ತಿನ ಮಾಲೀಕರಾದ, ಮೈಸೂರು ಸಿಟಿ, ಹೆಬ್ಬಾಳು 1ನೇ ಹಂತ, ಎನ್‌ಐಇ ರಸ್ತೆ, ನಂ.250 1ಬಿ ರಲ್ಲಿ ವಾಸವಾಗಿರುವ ಶ್ರೀ ಶಂಕರಲಿಂಗೇಗೌಡ ಬಿನ್ ಲೇಟ್ ಚಿಕ್ಕಣ್ಣ ಮತ್ತು ಇವರ ಪತ್ನಿ ಹಾಗೂ ಮಕ್ಕಳು ರವರಿಂದ, ಅನುಸೂಚಿತ ಸ್ವತ್ತನ್ನು ಖರೀದಿಸುವ ಇರಾದೆಯಿಂದ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಅನುಸೂಚಿತ ಸ್ವತ್ತಿನ ಸಂಬಂಧ ಯಾರಿಗಾದರೂ ಅಧಿಕಾರ ಪತ್ರ ಹೊಂದಿದ್ದಲ್ಲಿ. ಅಥವಾ ಯಾರಿಗಾದರೂ ಹಕ್ಕು, ಮಾಲೀಕತ್ವ, ಹಿತಾಸಕ್ತಿ, ಕ್ಲೈಮ್, ಆಧಾರ, ಸಾಲ ಬಾಕಿ, ಇತರೆ ತಂಟೆ–ತಕರಾರುಗಳಿದ್ದಲ್ಲಿ, ಅವರು ಖುದ್ದಾಗಿ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಸಾರ್ವಜನಿಕ ಪತ್ರಿಕಾ ಪ್ರಕಟಣೆಯಾದ ಏಳು(7) ದಿನಗಳ ಒಳಗೆ ಕೆಳಕಂಡ ನಮ್ಮ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿ ಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಕ್ಯೂ ಬ್ಲಾಕ್, ಗ್ರೇವ್ ಯಾರ್ಡ್ ರಸ್ತೆ, ಕುಂಬಾರಕೊಪ್ಪಲು, ನಿವೇಶನ ಸಂಖ್ಯೆ: 9, ರ ಸ್ವತ್ತಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಎ ಷೆಡ್ಯೂಲ್ ಸ್ವತ್ತು (ದಿವಾಕರ್ ರವರ ಸ್ವತ್ತು) ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: ಕ್ಯೂ.8 ರ ಸ್ವತ್ತು, ಉತ್ತರಕ್ಕೆ: ನಿವೇಶನ ಸಂಖ್ಯೆ: ಕ್ಯೂ.10, ದಕ್ಷಿಣಕ್ಕೆ: ರಸ್ತೆ ಈ ಮಧ್ಯದಲ್ಲಿರುವ ಪೂರ್ವ–ಪಶ್ಚಿಮ 25 ಅಡಿಗಳು, ಮತ್ತು ದಕ್ಷಿಣೋತ್ತರ 80 ಅಡಿಗಳು ಖಾಲಿ ನಿವೇಶನದ ಸ್ವತ್ತು ಈ ಸಾರ್ವಜನಿಕ ಪತ್ರಿಕಾ ಪ್ರಕಟಣೆಗೆ ಒಳಪಟ್ಟಿರುವ ಸ್ವತ್ತಾಗಿರುತ್ತದೆ.

ವೈಎನ್.ಕೆ. ಲಾ ಅಸೋಸಿಯೇಟ್ಸ್,
ಸಹಿ/– ಶ್ರೀ ಯಮನೂರಪ್ಪ. ಎನ್. ಕಲಾದಗಿ,
ಬಿ.ಎ.ಎಲ್., ಎಲ್ ಎಲ್.ಬಿ., ಪಿ.ಜಿ.ಡಿ.ಹೆಚ್.ಆರ್.ಎಂ
ವಕೀಲರು, ನಂ.263/ಎ, ನಿರ್ಮಲಾ ಕಾನ್ವೆಂಟ್ ಸರ್ಕಲ್,1ನೇ ಮುಖ್ಯ ರಸ್ತೆ, 1ನೇ ಹಂತ , ಗೋಕುಲಂ, ಮೈಸೂರು–570002

ದಿನಾಂಕ: 18.08.2025
ಸ್ಥಳ: ಮೈಸೂರು

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ : 08225-272128 ಫ್ಯಾಕ್ಸ್ ಸಂಖ್ಯೆ: 08225-272123 Email: sec.mmtemple@gmail.com

ನಂ.ಶ್ರೀ ಮ.ಮ.ಕ್ಷೇ.ಅ.ಪ್ರಾ/ಉಗ್ರಾಣ/5/ಪಿಆರ್/ /2025–26 ದಿನಾಂಕ: 04–08–2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರಮ ಸಂಖ್ಯೆ	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಆವರಣ, ವಸತಿ ಗೃಹಗಳು, ಶೌಚಾಲಯಗಳ ನಿತ್ಯ ಬಳಕೆಗೆ ಸ್ವಚ್ಛತಾ ಸಾಮಾಗ್ರಿಗಳನ್ನು ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಬಗ್ಗೆ.	28.00	56000.00
2	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಆಡಳಿತ ಕಛೇರಿ, ಮಾಹಿತಿ ಕೇಂದ್ರ ಹಾಗೂ ವಿವಿಧ ವಿಭಾಗಗಳಿಗೆ ನಿತ್ಯ ಬಳಕೆಗೆ ಬೇಕಾಗುವ ಲೇಖನಾ ಸಾಮಾಗ್ರಿಗಳನ್ನು ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ. ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಬಗ್ಗೆ.	14.00	28000.00
3	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ 2026ನೇ ಇಸವಿಯ ವಿವಿಧ ಮಾದರಿಯ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ.	20.00	40000.00

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ದಿನಾಂಕ: 03–09–2025ರ ಸಂಜೆ 4.00 ಗಂಟೆಯೊಳಗಾಗಿ ಕಛೇರಿ ವೇಳೆಯಲ್ಲಿ ಮಾಹಿತಿ ವಿಷಯ ನಿರ್ವಾಹಕರಾದ ಶ್ರೀ ಎಂ.ಎನ್.ಶ್ರೀನಿವಾಸ್, ಮೊಬೈಲ್ ಸಂಖ್ಯೆ +91 8277088317 ನ್ನು ಸಂಪರ್ಕಿಸಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ	ದಿ: 04–08–2025	ರ ನಂತರ
2	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	ದಿ: 04–09–2025	ಸಂಜೆ 4:00 ಗಂಟೆವರೆಗೆ
3	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿ: 05–09–2025	ಸಂಜೆ 5:00 ಗಂಟೆಯ ನಂತರ

ಸಹಿ/– ಕಾರ್ಯದರ್ಶಿ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ.

ಸಂ:ವಾಸಾಸಂ.ಇ:ಚಾನಗರ:25:281:2025–26